

ಬಸವಪಥ

ಡಿಸೆಂಬರ್- 2008 ಬೆಲೆ: ರೂ. 15/-



ಅಲಕ್ ನಿರಂಜನ್ ಶ್ರೀ ಗುರುಮಲ್ಲೇಶ್ವರ ಮಹಾಪ್ರಭು



ಸಂಗಪ್ಪನಿಗೆ ಜೀವ ನೀಡಿದ
ದಯಾಮೂರ್ತಿ ಶ್ರೀ ಗುರುಮಲ್ಲೇಶ್ವರರು

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||



****

ಬಸವಪಥ

ಶ್ರೀ ಬಸವೇಶ್ವರರು ಹಾಗೂ ಇತರ ಶರಣರ ಜೀವನ ಹಾಗೂ ಸಂದೇಶಗಳ ಪ್ರಸಾರಕ್ಕಾಗಿ ಮೀಸಲಾದ ಮಾಸಿಕ.

ಸಂಪುಟ	:	೩೦
ಸಂಚಿಕೆ	:	೯
ಡಿಸೆಂಬರ್	:	೨೦೦೮
ಪುಟ	:	೮೪

"ಚೆನ್ನಬಸವನೆಂಬ ಪ್ರಸಾದಿಯ ಪಡೆದು,
ಅನುಭವಮಂಟಪವನನುಮಾಡಿ,
ಅನುಭವಮೂರ್ತಿಯಾದ ನಮ್ಮ ಬಸವಯ್ಯನು."

-ನೀಲಮ್ಮ

ಬಸವ ಸಮಿತಿ

ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು-560 001

☎: 22355953, 22265505

email : info@basavasamithi.org

ಸಂಸ್ಥಾಪಕ ಅಧ್ಯಕ್ಷರು : ಲಿಂ|| ಡಾ. ಬಿ.ಡಿ. ಜತ್ತಿ

ಬಸವ ಸಮಿತಿಯ ಪದಾಧಿಕಾರಿಗಳು

ಅಧ್ಯಕ್ಷರು : ಶ್ರೀ ಅರವಿಂದ ಜತ್ತಿ
ಹಿರಿಯ ಉಪಾಧ್ಯಕ್ಷರು : ಶ್ರೀ ಚಂದಪ್ಪ ಪಟೇಲ್
ಉಪಾಧ್ಯಕ್ಷರು : ಶ್ರೀ ಎಚ್.ಎಸ್. ರೇಣುಕ ಪ್ರಸಾದ್
ಪ್ರಧಾನ ಕಾರ್ಯದರ್ಶಿಗಳು : ಶ್ರೀ ಪ್ರಭುದೇವ ಜೆ. ಚಿಗಟೇರಿ, ಶ್ರೀ ಆರ್.ಎಸ್. ಕಲ್ಯಾಣಶೆಟ್ಟಿ
ಖಜಾಂಚಿಗಳು : ಶ್ರೀಮತಿ ಸರೋಜ ಕೆ.ಎಂ. ನಂಜಪ್ಪ
ಜಂಟಿ ಕಾರ್ಯದರ್ಶಿಗಳು : ಶ್ರೀ ಎಚ್.ಎಸ್. ದೇವಾಡಿಗ, ಶ್ರೀಮತಿ ಮಧುರಾ ಅಶೋಕ್‌ಕುಮಾರ್

ಬಸವ ಪಥ ಸಂಪಾದಕ ಮಂಡಳಿ

ಅಧ್ಯಕ್ಷರು : ಪೂಜ್ಯ ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳು
ಉಪ ಸಂಪಾದಕರು : ಶ್ರೀ ರುದ್ರೇಶ್ ಬಿ. ಅದರಂಗಿ
ಸಂಚಾಲಕರು : ಪ್ರೊ. ಟಿ.ಆರ್. ಮಹಾದೇವಯ್ಯ

ಸಲಹಾ ಮಂಡಳಿ ಸದಸ್ಯರು

ಡಾ. ಸಿ.ಎಂ. ಕುಂದಗೋಳ
ಡಾ. ಜಯಶ್ರೀ ದಂಡೆ
ಡಾ. ಸಿ. ನಾಗಭೂಷಣ
ಡಾ. ಸಿ.ಕೆ. ಜಗದೀಶ್
ಶ್ರೀ ಜಯದೇವಪ್ಪ ಜೈನಕೇರಿ
ಡಾ. ಮೃತ್ಯುಂಜಯ ರುಮಾಲೆ
ಡಾ. ಕಾ.ವೆಂ. ಶ್ರೀನಿವಾಸಮೂರ್ತಿ

ಚಂದಾ ವಿವರ

ವಾರ್ಷಿಕ ಚಂದಾ : ರೂ. 150-00
20 ವರ್ಷಕ್ಕೆ : ರೂ. 1500-00
ಪಂಚವಾರ್ಷಿಕ ಚಂದಾ : ರೂ. 650-00
ಬಿಡಿ ಪ್ರತಿ : ರೂ. 15-00

ಮುಖಪುಟ ಚಿತ್ರ

ಮಹಾತ್ಮ ಶ್ರೀ ಗುರುಮಲ್ಲೇಶ್ವರರು ಉಪಮಿಸಲಾರದ ಉಪಮಾತೀತರು. ಕಂಥೆಭಿಕ್ಷ ಕಾಯಕವನ್ನು ಜನಮಾನಸದಲ್ಲಿ ಬಿತ್ತಿ ಬಸವಾದಿ ಶರಣರ ಜೀವನ ಹಾಗೂ ಸಂದೇಶಗಳನ್ನು ಜನರಲ್ಲಿ ಜಾಗೃತಿ ಉಂಟುಮಾಡಿ, ಅನುಷ್ಠಾನಗೊಳಿಸಿದ ಹಿರಿಮೆ ಶ್ರೀ ಗುರುಮಲ್ಲೇಶ್ವರರದು. ಶ್ರೀ ಗುರುಮಲ್ಲೇಶ್ವರರು ಇಹಲೋಕದಲ್ಲಿ ಸಂದು ಶತಮಾನಗಳೇ ಕಳೆದರೂ ಅವರು ಅನುಷ್ಠಾನಕ್ಕೆ ತಂದ ತತ್ವಗಳು ಇಂದಿಗೂ ಅನುಷ್ಠಾನದಲ್ಲಿರುವುದು ಶ್ರೀಗುರುಗಳ ಮಹತ್ವವನ್ನು ಬಿಂಬಿಸುತ್ತದೆ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೇವನೂರನ್ನು ಕಾರ್ಯಸ್ಥಾನವನ್ನಾಗಿ ಮಾಡಿಕೊಂಡು ಕಾಯಕವೇ ಕೈಲಾಸವೆಂದು ಸಾರಿದವರು ಅಲಕ್ ನಿರಂಜನ್ ಶ್ರೀ ಗುರುಮಲ್ಲೇಶ್ವರ ಮಹಾಪ್ರಭುಗಳು.

ರಕ್ಷಾಪತ್ರ ವಿನ್ಯಾಸ : ಶ್ರೀ ಗುರು

ಲೇಖನದ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳಾಗಿವೆ.

ಸಂಪಾದಕೀಯ

ಹಲವು ಮಾತೇನು? ನೀನೊಲಿದು ಪಾದವನಿಟ್ಟ
ನೆಲವೆ ಸುಕ್ಷೇತ್ರ, ಜಲವೆ ಪಾವನತೀರ್ಥ
ಸುಲಭ ಶ್ರೀಗುರುವೆ ಕೃಪೆಯಾಗು.

-ಮೈಲಾರ ಬಸವಲಿಂಗ ಶರಣರು

ನಾಡಿನ ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಧೀರ ನಡೆ-ನುಡಿಗಳಿಂದ ಬೆಳಕು ಕಂಡು-ಉಂಡು-ಪಲ್ಲವಿಸಿದ ಅನಂತ ಚೇತನಗಳು ಸದ್ದುಗದ್ದಲವಿಲ್ಲದೆ ಕಾರ್ಯನಿರತರಾಗಿರುವ, ಜನಸಾಮಾನ್ಯರ ಮನದಾಳದಲ್ಲಿ ಶರಣತತ್ತ್ವದ ಸಹಜಾಚರಣೆಯ ಬೀಜಗಳನ್ನು ಬಿತ್ತಿ ಮುಂದಿನ ಪೀಳಿಗೆಗೆ ಅನುಭಾವಿಕ ಫಲ ದೊರಕುವಲ್ಲಿ ಶ್ರಮಿಸಿದ ಅನೇಕ ಉದಾಹರಣೆಗಳು ದೊರಕುತ್ತವೆ. ಈ ದಿಸೆಯಲ್ಲಿ ನಾಡಿನ ಮೂಲೆಮೂಲೆಗಳಲ್ಲಿ ಚಲ್ಲವರಿದ ಸಹಜಾಚರಣೆಯ ಶರಣ ಸಮೂಹವನ್ನು ಗುರುತಿಸಿ ಸಾಮಾನ್ಯರಿಗೆ ಪರಿಚಯಿಸುವ ಕಾರ್ಯವನ್ನು ಬಸವಪಥ ಕೈಗೆತ್ತಿಕೊಂಡಿದೆ. ಕಳೆದ ಶತಮಾನದಿಂದ ಹಿಂದಿನ ಶರಣರು ಸಹಜತೆಯಲ್ಲಿ ಮೆರೆದ ಜೀವನ-ದರ್ಶನ ಕೌತುಕವೆನಿಸುತ್ತವೆ. ಮೊದಲಿನಿಂದಲೂ ಶರಣಧರ್ಮ ರಾಜಾಸ್ಥಾನದ ವೈಭವಕ್ಕಿಂತಲೂ ಜನಸಾಮಾನ್ಯರ ಗುಡಿಸಿಲನ್ನೆ ಅಪ್ಪಿಕೊಂಡು ಸಾಗಿಬಂದಿದೆ. ಸುಮಾರು ೨೦೦-೩೦೦ ವರ್ಷಗಳ ಹಿಂದೆ ಮೈಸೂರು ಸಂಸ್ಥಾನದ ಇತಿಹಾಸದ ಕರಾಳಪುಟವೆಂದು ಗ್ಯಾಸೆಟೀಯರ್‌ನಲ್ಲಿ ದಾಖಲಾಗಿರುವ ನಂಜನಗೂಡಿನ ರೈತರು ಕರನಿರಾಕರಣೆ ಚಳುವಳಿ(ಭೀಕರ ಬರಗಾಲದ ಕಾರಣದಿಂದ)ಯ ನೇತೃತ್ವ ವಹಿಸಿದ್ದವರು ಶರಣ ಪರಂಪರೆಯ ಜಂಗಮರು, ದನಿಯಿಲ್ಲದವರ ದನಿಯಾಗಿ ರಾಜಕೋಪವನ್ನು ಮೈಮೇಲೆ ಎಳೆದುಕೊಂಡು ಸಾಮೂಹಿಕ ಹತ್ಯಾಕಾಂಡಕ್ಕೆ ಆಹುತಿಯಾದ ಸಂಗತಿ ಇತ್ತೀಚಿನ ದಾಖಲೆಯಾಗಿ ಉಳಿದಿದೆ.

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶರಣ ಸಂಸ್ಕೃತಿಯ ಪುನರುತ್ಥಾನದ ಮಹಾಮಣಿಹದ ಅಮೃತ ಚೇತನವನ್ನು ಸವಿದ ಅನೇಕ ಶರಣರು ಈ ಪರಂಪರೆಗೆ ಮೈಲುಗಲ್ಲುಗಳಂತೆ ದಾರಿ ತೋರಿದ್ದಾರೆ-ತೋರುತ್ತಲಿದ್ದಾರೆ. ಈ ಸಾಲಿನಲ್ಲಿ ಮೈಸೂರು ಪ್ರಾಂತ್ಯದ ಚಾಮರಾಜನಗರ ಸಿದ್ಧಲಿಂಗ ಶಿವಯೋಗಿಗಳ ಲೀಲಾಭೂಮಿಕೆಯ ಪ್ರಾರಂಭವೆನಿಸಿದೆ. ಸುತ್ತೂರು ಶಿವರಾತ್ರಿ ಶಿವಯೋಗಿಗಳು, ಕೆಂಡಗಣ್ಣ

ಶಿವಯೋಗಿಗಳು, ದೇವನೂರ ಗುರುಮಲ್ಲೇಶ್ವರರು ಈ ನಾಡನ್ನು ಬೆಳಗಿದ್ದಾರೆ. ಈ ಸಂಚಿಕೆಯಲ್ಲಿ ದೇವನೂರಿನ ಶ್ರೀ ಗುರುಮಲ್ಲೇಶ್ವರರ ದಾಸೋಹ ಪರಂಪರೆಯ ಬಗ್ಗೆ ದಾಖಲಿಸಲಾಗಿದೆ. ಇನ್ನು ಮುಂದೆ- ಕರ್ನಾಟಕ ಹಾಗೂ ಇತರ ಪ್ರಾಂತ್ಯಗಳಲ್ಲಿ ಪರಿಣಾಮ ಬೀರಿರಬಹುದಾದ ಐತಿಹಾಸಿಕ ಶರಣ ಪರಂಪರೆಯ ಅಸ್ತಿತ್ವಗಳ ಬಗ್ಗೆ ಎಲ್ಲರೂ ಗಮನ ಹರಿಸಬೇಕಾಗಿದೆ. ಇಂದು ಜಾಗತೀಕರಣದ ಪರಿಣಾಮ ವಿಶ್ವವೆಲ್ಲವೂ ಎಲ್ಲರಿಗೆ ನಿಲುಕುವಾಗ ನಮ್ಮ ಚಿಂತನೆಯ ಕ್ರಮವನ್ನು ವಿಶ್ವಮಾನವತೆಯ ಹಿನ್ನೆಲೆಯಲ್ಲಿ ರೂಪಿಸುವುದು ಅನಿವಾರ್ಯ. ಶರಣರ ಜೀವನ ಹಾಗೂ ಸಾಧನೆಗಳು ಕಾಲದಿಂದ ಕಾಲಕ್ಕೆ ಹೊಸತಾಗಿಯೇ ಉಳಿಯುವ ಅಂತಸ್ಸತ್ವ ಉಳ್ಳವುಗಳು. ನಮ್ಮ ಅನುಭಾವಿಕ ನೆಲೆ ಎಷ್ಟು ಆಳ ಅಗಲಗೊಳ್ಳಬಹುದೊ ಅಷ್ಟು ಎತ್ತರ ಬಿತ್ತರಗಳೊಡನೆ ಶರಣ ಚಿಂತನೆಗಳು ನಮಗೆ ಆಸರೆಯಾಗುವ ಸತ್ಯದಿಂದ ಕೂಡಿದೆ. ಅನುಭಾವಿಕ ನೆಲೆಯ ಜಂಗಮ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು ಮುನ್ನಡೆಯಲು ಕಾರ್ತಿಕ ಮಾಸ ಪ್ರೇರಣೆ ನೀಡಿದೆ. ಕಾರ್ತಿಕದ ಕತ್ತಲೆಯಲ್ಲಿ ದೊಂದಿ ದಿಕ್ಕಾಗಿ ಬಂದು ಸಾಧನೆ ಸಿದ್ಧಿಗಳ ಅಗ್ನಿ ಖಡ್ಗವನಾಂತು ಸಮತೆ ಸ್ವೈರಣೆಗಳ ಸಂದೇಶ ಸಾರಿದ ಬಸವನ ಬೆಳಕು ನಮ್ಮೆದೆಯ ಕತ್ತಲನ್ನು ಹಿಮ್ಮೆಟ್ಟಿಸಲೆಂದು **"ಬಸವಪಥ"** ಹಾರೈಸುತ್ತದೆ.

ಶರಣು ಶರಣಾರ್ಥಿಗಳು

ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳು

ಅಧ್ಯಕ್ಷರು, ಸಂಪಾದಕ ಮಂಡಳಿ

ಅಧ್ಯಕ್ಷರ ನುಡಿ

ಪೂಜ್ಯ ಗುರುಮಲ್ಲೇಶ್ವರ ವಿಶೇಷಾಂಕ ನಿಮ್ಮ ಕೈಸೇರಿದೆ. ಶ್ರೀ ಗುರುಮಲ್ಲೇಶ್ವರ ಕ್ಷೇತ್ರವನ್ನು ಸನಿಹದಿಂದ ಗಮನಿಸಿದಾಗ, ಮಹಾತ್ಮರು ಶರಣ ಸಂಸ್ಕೃತಿಯಲ್ಲಿ ಬದುಕಿ, ಅದನ್ನು ಬೆಳೆಸಲು ಮತ್ತು ಸಂರಕ್ಷಿಸಲು ಮಾಡಿರುವಂತಹ ಸೇವೆ ಪವಾಡವೇ ಸರಿ. ಪವಾಡ ಪುರುಷರಂತೆ ಶರಣ ಸಂಸ್ಕೃತಿಯ ಬೆಳವಣಿಗೆಯ ೯೦೦ ವರ್ಷಗಳ ಐತಿಹ್ಯವನ್ನು ಗಮನಿಸಿದಾಗ, "ಮರನೊಳಗಣ ಪತ್ರೆಫಲಂಗಳು, ಮರಕಾಲವಶದಲ್ಲಿ ತೋರುವಂತೆ..." ಎಂಬ ಅಲ್ಲಮಪ್ರಭುಗಳ ವಚನ ಸ್ಮರಣೆಗೆ ಬರುತ್ತದೆ. ವಿಶ್ವ ಸಂಸ್ಕೃತಿಯ ಸಂಪೂರ್ಣ ಸಂವಿಧಾನದಂತಿರುವ ಶರಣ ಸಂಸ್ಕೃತಿ ನಮ್ಮೆಲ್ಲರ ಅಪೇಕ್ಷೆಯಂತೆ ಬೆಳೆದಿಲ್ಲ ಎಂಬ ಭಾವನೆ ನಮ್ಮೆಲ್ಲರನ್ನೂ ಸದಾ ಕಾಡುತ್ತದೆ. ಶರಣ ಸಂಸ್ಕೃತಿ ಎಂಬ ಮಹಾಘನವನ್ನು ಕಾಂಬುದಕ್ಕೆ ಹಡಪದ ಅಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ಹೇಳಿರುವಂತೆ "...ಹಸಿವು ಕೆಡಬೇಕು, ನಿದ್ರೆ ಹರಿಯಬೇಕು... ಲಿಂಗದೊಳಗೆ ಅಚ್ಜೊತ್ತಿದಂತೆ ಬೆರೆದಡೆ ಕತ್ತಲೆ ಹರಿವುದು... ಮಹಾ ಮಂಗಳದ ಬೆಳಗು ಕಾಣಿವುದೆಂಬರು ನಮ್ಮ ಅಪ್ಪಣ್ಣ ಪ್ರಿಯ ಚನ್ನಬಸವಣ್ಣ."

ಮಹಾಬೆಳಗಿನ ಪಥದಲ್ಲಿ ಬಸವ ಸಮಿತಿಯೂ ಸಹ ತನ್ನದೇ ಆದ ಕಾರ್ಯಗಳನ್ನು ರೂಪಿಸುತ್ತಾ ಬಂದಿರುವುದನ್ನು ತಾವೆಲ್ಲರೂ ಗಮನಿಸಿದ್ದೀರಿ. ಪ್ರತಿ ಮಾಹೆಯೂ ಬಸವ ಸಮಿತಿಯು ನಡೆದು ಬರುತ್ತಿರುವ ದಾರಿಯನ್ನು "ತೆರೆ ಇಲ್ಲದ ನಡೆ, ತೆರೆ ಇಲ್ಲದ ನುಡಿ..." ಎಂಬ ವಚನದಂತೆ ಬೆಳವಣಿಗೆಗಳನ್ನು ಸವಿಸ್ತಾರವಾಗಿ "ಬಸವಪಥ" ಅಧ್ಯಕ್ಷರ ನುಡಿಯ ಮುಖಾಂತರ ಮಂಡಿಸುತ್ತಾ ಬಂದಿದ್ದೇವೆ. ಇದರ ಮುಂದುವರಿಕೆ ಯಾಗಿ ನವೆಂಬರ್ ಮಾಹೆಯಲ್ಲಿ ಬೀದರ್ ಜಿಲ್ಲೆಯ ಹುಲಸೂರು, ಭಾತಂಬ್ರ, ಹುಮನಾಬಾದ್, ಭಾಲ್ಕಿ, ಧುಬಲಗುಂಡಿ ಮತ್ತು ಹಳ್ಳಿಖೇಡ ಎಂಬಲ್ಲಿ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು ಮತ್ತೆ ಪರಿವರ್ತನೆಯ ಪ್ರತಿಕ್ರಿಯಾತ್ಮಕ ಭಾವನೆಗಳು ಮಕ್ಕಳಿಂದ ವ್ಯಕ್ತಪಟ್ಟಾಗ ಆದ ಸಂತಸ ಅಪ್ರತಿಮ. ಹುಲಸೂರಿನಲ್ಲಿ ಬಹಿರ್ಮುಖವಾಗಿ ನೋಡಲು ಕಡುಬಡವನಂತಿದ್ದ ೪-೫ ವರ್ಷದ ಮಗುವನ್ನು ಅಂದಿನ ಕಾರ್ಯಕ್ರಮದ ಅಧ್ಯಕ್ಷನನ್ನಾಗಿ ಮಾಡಿದಾಗ, ಎಲ್ಲರಿಗೂ ಪರಮಾಶ್ಚರ್ಯ. ಆದಾಗ್ಯೂ ಆ ಕ್ರಿಯೆ ಇನ್ನುಳಿದ ಮಕ್ಕಳಿಗೆ ಬಸವಣ್ಣನವರ ಅತೀ ಸಾಮಾನ್ಯನನ್ನು ಅಸಾಮಾನ್ಯನನ್ನಾಗಿ ಪರಿವರ್ತಿಸುವ ತತ್ವದ ದರ್ಪಣದಂತಿತ್ತು. ಸ್ವಪ್ರತಿಷ್ಠೆಯ ಶಬ್ದಗಳೆಂಬ ಭಾವನೆ ಓದುಗರಲ್ಲಿ ಮೂಡಬಹುದು.

ಆದಾಗ್ಯೂ ಸುಮಾರು ೪೦೦೦ ವಿದ್ಯಾರ್ಥಿಗಳನ್ನು ಸ್ಪಂದಿಸಿ, ಬಸವ ಪ್ರಜ್ಞೆಯನ್ನು ಬಿತ್ತುತ್ತಿರುವ ಪ್ರಯತ್ನ ಬದುಕಿನ ಸಾರ್ಥಕ್ಯದ ಭಾವನೆಯನ್ನು ಅಂತರಂಗದಲ್ಲಿ ಮೂಡಿಸಿತು.

ಬೀದರ್ ಪ್ರವಾಸದಲ್ಲಿದ್ದಾಗ, ಬಸವಣ್ಣನವರ ಆದೇಶ ಎನ್ನುವಂತೆ ಅನಿರೀಕ್ಷಿತ ವಾಗಿ ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಮತ್ತು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಸಭೆ ಬಸವ ಕಲ್ಯಾಣದಲ್ಲಿ ೭ನೇ ನವೆಂಬರ್ ೨೦೦೮ ರಂದು ಆಯೋಜನೆಗೊಂಡಿತ್ತು. ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ಸಭೆಯ ಅಧ್ಯಕ್ಷತೆ ವಹಿಸಿ, ಸಭೆಯನ್ನು ಅತ್ಯಂತ ಅರ್ಥಪೂರ್ಣವಾಗಿ ನಡೆಸಿದರು. ಸಭೆಯಲ್ಲಿ ಮುಖ್ಯಮಂತ್ರಿಗಳು ಅನಿರೀಕ್ಷಿತವಾಗಿ ಪ್ರಾಧಿಕಾರದ ಅಭಿವೃದ್ಧಿಯ ಬಗ್ಗೆ ಪ್ರತಿಕ್ರಿಯೆಯನ್ನು ನನ್ನಿಂದ ಅಪೇಕ್ಷಿಸಿದಾಗ, ಬಸವ ಸಮಿತಿಯ ಜವಾಬ್ದಾರಿಯುತ ಸ್ಥಾನದಲ್ಲಿರುವ ನನಗೆ ಸಂತಸ ಹಾಗೂ ಮುಖ್ಯಮಂತ್ರಿಗಳ ಅಪೇಕ್ಷೆ ಜವಾಬ್ದಾರಿಯೂ ಸಹ ಗಂಭೀರತೆಯನ್ನು ಹೊರಹೊಮ್ಮಿಸಿತು.

ಅಂತರಂಗದಲ್ಲಿ ಬಸವಣ್ಣನವರನ್ನು ಸ್ಮರಿಸುತ್ತಾ, ಅವರ ಅಪೇಕ್ಷೆಯ ಸಿದ್ಧತೆ ಇಲ್ಲದಾಗೂ, ಅಂತರಂಗದ ನುಡಿ ಮುಖ್ಯಮಂತ್ರಿಗಳ ಭಾವನೆಗಳನ್ನು ಕೆದಕಿದ್ದುದು ಗಮನಾರ್ಹ. ಅನೇಕ ವೇದಿಕೆಗಳ ಮುಖೇನ ಅನುಭವ ಮಂಟಪ ಜಗತ್ತಿನ ಮೊಟ್ಟಮೊದಲ ಆಧ್ಯಾತ್ಮಿಕ ಸಂಸತ್ ಎಂಬ ಅಂಶ ವ್ಯಕ್ತಪಟ್ಟರೂ ಅಂದಿನ ಅನುಭವ ಮಂಟಪದ ಪ್ರತ್ಯಕ್ಷ ದರ್ಶನ ಇಲ್ಲದ ವಾಸ್ತವ. ಆದುದರಿಂದ, ಅಂತಹ ಅನುಭವ ಮಂಟಪ ಅಭಿವೃದ್ಧಿಗೊಳ್ಳಬೇಕೆಂದು ಆಶಿಸಿದಾಗ, ಮುಖ್ಯಮಂತ್ರಿಗಳು ಪ್ರತಿಕ್ರಿಯಿಸುತ್ತಾ, ಬಸವ ಸಮಿತಿಯ ಭಾವನೆ ಸತ್ಯ ಎಂದು ಸಂಪೂರ್ಣವಾಗಿ ಅನುಮೋದಿಸಿ, ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣವಾಗಬೇಕೆಂಬ ನಿರ್ಣಯ ಒಮ್ಮತದಿಂದ ಒಪ್ಪಿದ ಸಂದರ್ಭವನ್ನು ತಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ.

ನಾವೆಲ್ಲರೂ ನಮ್ಮ ನಮ್ಮ ಪ್ರಯತ್ನಗಳನ್ನು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮುಂದಿವರಿಸೋಣ.

ಶರಣ ಸಂಸ್ಕೃತಿಯಲ್ಲಿ ಬದುಕಿ, ಶರಣ ಸಂಸ್ಕೃತಿಯನ್ನು ಉಳಿಸೋಣ, ಬೆಳೆಸೋಣ, ರಕ್ಷಿಸೋಣ. ಶರಣು ಶರಣಾರ್ಥಿ.

ದಿನಾಂಕ ೧೫.೧೧.೨೦೦೮
ಬೆಂಗಳೂರು

ಅರವಿಂದ ಜತ್ತಿ
ಅಧ್ಯಕ್ಷರು, ಬಸವ ಸಮಿತಿ

ಅನುಕ್ರಮಣಿಕೆ

ದೇವನೂರು ಶ್ರೀ ಗುರುಮಲ್ಲೇಶ್ವರರು

■ ಜಯದೇವಪ್ಪ ಜೈನಕೇರಿ
ನಂ. ೮೭, ಶಾಂತಲಾ, ಕುವೆಂಪು ರಸ್ತೆ, ಶಿವಮೊಗ್ಗ-೫೭೭೨೦೧

ಮೈಸೂರಿನ ಸುತ್ತಮುತ್ತ ಗುರುಮಲ್ಲೇಶ್ವರ ದಾಸೋಹ ಮಠವು ಲಕ್ಷಾಂತರ ಭಕ್ತರನ್ನು ಹೊಂದಿದೆ. ಶ್ರೀ ಗುರುಮಲ್ಲೇಶ್ವರರು ಲಿಂಗದೊಳಗಾಗಿ ೧೦೮ ವರ್ಷಗಳು ಕಳೆದಿದ್ದರೂ ಈ ಭಾಗದ ಜನಸಾಮಾನ್ಯರ ಸ್ಮರಣೆಯಲ್ಲಿ ಇಂದಿಗೂ ಜಾಗೃತ ಚೇತನರಾಗಿದ್ದಾರೆ. ಶ್ರೀ ಗುರುಮಲ್ಲೇಶ್ವರರ ದಾಸೋಹ ಮಠವು ಯಾವುದೇ ಸ್ಥಲಕ್ಕಾಗಲಿ, ವರ್ಗಕ್ಕಾಗಲಿ, ಪೀಠಗಳಿಗಾಗಲಿ, ವಂಶಪಾರಂಪರ್ಯದ ಆಡಳಿತಕ್ಕಾಗಲಿ ಸೇರದೆ ಸ್ವತಂತ್ರ ಅಸ್ತಿತ್ವ ಹೊಂದಿದ ಮಠವಾಗಿದೆ.

ಕನ್ನಡ ನಾಡಿನ, ಕರ್ನಾಟಕ ರಾಜ್ಯದ, ರಾಷ್ಟ್ರದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಲಿಂಗಾಯತ ಮಠಗಳು ಮುಂಚೂಣಿಯಲ್ಲಿರುವುದು ನಾಡಿನ ಪುಣ್ಯವಿಶೇಷ. ಮನುಕುಲದ ಮನಸ್ಸು ಕಲುಷಿತ ಗೊಂಡು, ಗೊಂದಲ ಕ್ಕೀಡಾದಾಗ, ಸಮಾಜ ಅಸ್ವಸ್ಥಗೊಂಡಾಗ, ಸೂಕ್ತ ಮಾರ್ಗದರ್ಶನ ನೀಡಿ, ಲೋಕಕಲ್ಯಾಣ ಕಾರ್ಯದಲ್ಲಿ ಮಾರ್ಗದರ್ಶನ ಮಾಡುವುದರಲ್ಲಿ ಲಿಂಗಾಯತ ಮಠಗಳು-ಮಠಾಧಿಪತಿಗಳು ವಹಿಸುತ್ತಿರುವ ಪಾತ್ರ ಅಮೂಲ್ಯವಾದದ್ದು, ಅನನ್ಯ ವಾದದ್ದು. ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿ ವಿದ್ಯೆ, ದಾಸೋಹಗಳ ಮೂಲಕ ಜನಾಂಗವನ್ನು ಸರಿದಾರಿಯಲ್ಲಿ



ಮುನ್ನಡೆಸಿರುವ ಸತ್ಯ ನಮ್ಮ ಮುಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಲಿಂಗಾಯತರಿಗೆ ಮಾತ್ರವಲ್ಲದೆ, ಹಿಂದುಳಿದವರಿಗೆ, ಅಲಕ್ಷಿತರಿಗೆ ಅಕ್ಷರಜ್ಞಾನ ನೀಡಿ, ವಿಚಾರವಂತರನ್ನಾಗಿ ಮಾಡಿ, ನೂರಾರು ಗ್ರಾಮೀಣ ಮಕ್ಕಳಿಗೆ ಉಚಿತ ವಸತಿ ಪ್ರಸಾದ ನಿಲಯಗಳನ್ನು ಏರ್ಪಡಿಸಿದ ಲಿಂಗಾಯತ ಮಠಗಳು ಉತ್ತಮ ಚಾರಿತ್ರ್ಯ ನಿರ್ಮಾಣದಲ್ಲಿ ತೊಡಗಿದ್ದು ವಿಶೇಷ. ಬಸವತತ್ವಗಳ ಬೋಧನೆ, ಅನುಷ್ಠಾನ, ಅನುಭಾವ ಗೋಷ್ಠಿಗಳ ಮೂಲಕ ಲಿಂಗಾಯತ ಧರ್ಮಪ್ರಸಾರದಲ್ಲಿ ತೊಡಗಿದರು. ಈ ಕಾರ್ಯದಲ್ಲಿ ಶ್ರೀ ಮಠಗಳೊಂದಿಗೆ ಅಂದಿನ ಲಿಂಗಾಯತ ಸಮುದಾಯದ ಶ್ರೀಮಂತರೂ, ಜನಸಾಮಾನ್ಯರೂ ಕೈ ಜೋಡಿಸಿದರು. ಸತ್ಯಶುದ್ಧ ಕಾಯಕ, ದಾಸೋಹ ಲಿಂಗಾಯತ ಮಠಗಳ ಮಂತ್ರವಾಯಿತು, "ಕಾರೇ ಸೊಪ್ಪಾದರೂ ಕಾಯಕದಿಂದ ಬಂದದ್ದು ಲಿಂಗಾರ್ಪಿತ ಮಿಕ್ಕಿದ್ದು ಅನರ್ಪಿತ" ಎಂಬ ನುಲಿಯ ಚಂದಯ್ಯನವರ ವಚನದಂತೆ ದಾಸೋಹ ತತ್ವವನ್ನು ನೂರಾರು ಮಠಗಳು ಕೈಗೆತ್ತಿಕೊಂಡವು. ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯ ಎಂಬ ಬಸವಣ್ಣನವರ ವಾಣಿ ಮಠಗಳ ಆದರ್ಶವಾಯಿತು.

ದಾಸೋಹ ಚಕ್ರವರ್ತಿ, ಕಂತೆಭಿಕ್ಷೆ ಕಾಯಕಯೋಗಿ, ಬಸವತತ್ವವನ್ನೇ ಉಸಿರಾಗಿಸಿಕೊಂಡ ಶ್ರೀ ಗುರುಮಲ್ಲೇಶ್ವರರು, ಮೈಸೂರು ಜಿಲ್ಲೆ ನಂಜನಗೂಡು (ತಾ) ದೇವನೂರು ದಾಸೋಹ ಮಠದ ಸಂಸ್ಥಾಪಕರು. ಪೂಜ್ಯರು ಲಿಂಗದೊಳಗಾಗಿ ೧೦೮ ವರ್ಷಗಳು ಕಳೆದಿವೆ. ದಕ್ಷಿಣ ಮೈಸೂರು ಭಾಗದ ನೂರಾರು ಹಳ್ಳಿಗಳ ಭಕ್ತರ ಮನದಲ್ಲಿ ಇಂದಿಗೂ ಜೀವಂತವಾಗಿದ್ದಾರೆ. ಶಿವಾನುಭವ, ಲೋಕಾನುಭವ, ಸ್ವಾನುಭವಗಳು ಮುಪ್ಪರಿಗೊಂಡ ದಾಸೋಹ ಮೂರ್ತಿ; ಸಮಾನತೆ, ಸೋದರತ್ವ, ಸ್ವಾವಲಂಬನೆಗಳಿಂದ ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ ಕಾರುಣ್ಯ ಮೂರುತಿಯಾಗಿ, ಬಸವಾದಿ ಶರಣರ ತತ್ವಗಳ ಮೂಲಕ ಸಮಾಜೋದ್ಧಾರ, ಲೋಕೋದ್ಧಾರಗಳನ್ನು ನಿಜಾಚರಣೆ ಯಲ್ಲಿ ತಂದ ಕಾಯಕಯೋಗಿ, ದಾಸೋಹ ಮೂರ್ತಿ ಶ್ರೀ ಗುರುಮಲ್ಲೇಶ್ವರರು. ಶರಣ ಸಂದೇಶದ ಜ್ಯೋತಿಯನ್ನು ನಾಡಿನ ಮೂಲೆ ಮೂಲೆಗಳಿಗೆ ಕಾಲ್ನಡಿಗೆಯಲ್ಲಿ, ಎತ್ತಿನ ಗಾಡಿಗಳಲ್ಲಿ ಸಂಚರಿಸಿ, ಜನಸಾಮಾನ್ಯರೊಂದಿಗೆ ಬೆರೆತು ದಾಸೋಹ ಮಠಗಳನ್ನು ಸ್ಥಾಪಿಸಿ, ಕಾಯಕ, ದಾಸೋಹ ತತ್ವಗಳನ್ನು ಭಕ್ತರ ಹೃನ್ಮನಗಳಲ್ಲಿ ನೆಲೆಗೊಳಿಸಿದ್ದಾರೆ.

ಮೂಢನಂಬಿಕೆ, ಕಂದಾಚಾರಗಳಲ್ಲಿ ಮುಳುಗಿದ್ದ ಜನರನ್ನು ಬಸವತತ್ವದ ಕಡೆಗೆ ತಂದು, ಅಷ್ಟಾವರಣಗಳೇ ಅಂಗ, ಪಂಚಾಚಾರಗಳೇ ಪ್ರಾಣ, ಷಟ್‌ಸ್ಥಲಗಳೇ ಆತ್ಮ ಕಾಯಕ, ದಾಸೋಹಗಳೇ ಜೀವನ ಗುರಿ ಎಂದು ಅರುಹಿ, ಬಸವತತ್ವಗಳನ್ನು ನೆಲೆಗೊಳಿಸಿದರು. ಶ್ರೀ ಗುರುಮಲ್ಲೇಶ್ವರರು ತಮ್ಮ ಬದುಕಿನುದ್ದಕ್ಕೂ ಸತ್ಯಶುದ್ಧ ಕಾಯಕ ನಿರತರಾಗಿ, ದಾಸೋಹಿಗಳಾಗಿ ಬಾಳನ್ನು ಹಸನುಗೊಳಿಸಿಕೊಳ್ಳಬೇಕೆಂದು ತಿಳಿಸುತ್ತಾ, ತಾವೇ ಸ್ವತಃ ಕಂತೆಭಿಕ್ಷದ ಕಾಯಕವನ್ನು ಕೈಗೊಂಡ ಮಹಾನುಭಾವರು. ಸುಮರು ೧೬೦ ವರ್ಷಗಳ ಹಿಂದೆಯೇ ಪೂಜ್ಯರು ಜಾರಿಗೆ ತಂದ, ಕಾಯಕ ಮತ್ತು ದಾಸೋಹ

ತತ್ವಗಳು ಅವರು ಲಿಂಗೈಕ್ಯರಾಗಿ ೧೦೮ ವರ್ಷಗಳು ಕಳೆದ ನಂತರವೂ ಶ್ರೀ ದೇವನೂರು ದಾಸೋಹ ಮಠ ಮತ್ತು ಅದರ ಸುಮಾರು ೨೫೦ ಶಾಖಾಮಠಗಳಲ್ಲಿ ಇಂದಿಗೂ ನಿಜಾಚರಣೆಯಲ್ಲಿರುವುದನ್ನು ಕಾಣಬಹುದು.

೧೯ನೇ ಶತಮಾನದ ಮಧ್ಯಭಾಗದಲ್ಲಿ, ಬಸವಾದಿ ಪ್ರಮಥರು ಪ್ರತಿಪಾದಿಸಿ ಆಚರಣೆಯಲ್ಲಿ ತೋರಿದ ಕಾಯಕ ದಾಸೋಹ ತತ್ವಗಳನ್ನು ಜನಮಾನಸದಲ್ಲಿ ಬಿತ್ತಿದವರು ದೇವನೂರಿನಲ್ಲಿ ನೆಲೆನಿಂತು ಕಂತೆಭಿಕ್ಷೆ ಕಾಯಕ ಪ್ರಧಾನವಾದ ಮಠಗಳ ಸ್ಥಾಪನೆಗೆ ಕಾರಣರಾದ ಪೂಜ್ಯಶ್ರೀ ಗುರುಮಲ್ಲೇಶ್ವರರು ಹುಟ್ಟಿದ್ದು ಶಿವಮೊಗ್ಗ ಜಿಲ್ಲೆ (ಈಗ ದಾವಣಗೆರೆ ಜಿಲ್ಲೆಗೆ ಸೇರಿದ) ಪೊನ್ನಾಳಿ ತಾಲ್ಲೂಕಿಗೆ ಸೇರಿದ ಸವಳಂಗ (ಚವುಳಂಗ) ಗ್ರಾಮದಲ್ಲಿ. ಅಲ್ಲಿನ ಮಠದ ಸ್ವಾಮಿಗಳಾದ ಶ್ರೀ ನಂದಿ ಬಸವಾರ್ಯರ ಪುತ್ರ ಶರಣಪ್ಪ ಮತ್ತು ಶರ್ವಾಣಮ್ಮನವರ ಪುತ್ರರಾಗಿ ಕ್ರಿ.ಶ. ಸು. ೧೮೨೭-೨೮ರಲ್ಲಿ ಜನಿಸಿದರು. ಶರಣಪ್ಪ ದಂಪತಿಗಳ ಮನೆ, ದಾಸೋಹಕ್ಕೆ ಹೆಸರಾದ ಮನೆ. ನಾಲ್ಕು ಮುಖ್ಯರಸ್ತೆಗಳು ಸೇರುವ ಮುಖ್ಯಸ್ಥಳದಲ್ಲಿದ್ದ ಸವಳಂಗಕ್ಕೆ ಬರುತ್ತಿದ್ದವರನ್ನು ಸತ್ಕರಿಸುವ ಕಾಯಕ. ಶರಣಪ್ಪ ದಂಪತಿಗಳಿಗೆ ಮೈಸೂರಿನ ದೀವಟಿಗೆ ಬೀದಿ (ಈಗ ಬಸವೇಶ್ವರ ರಸ್ತೆ)ಯಲ್ಲಿದ್ದ ಚೌಕೀಮಠದ ಪೂಜ್ಯ ಶರಣಪ್ಪ ಸ್ವಾಮಿಗಳಲ್ಲಿ ಅಪಾರವಾದ ಭಕ್ತಿ ಗೌರವ, ಆಗಾಗ ಶ್ರೀಮಠಕ್ಕೆ ಭೇಟಿ ನೀಡುತ್ತಿದ್ದರು. ಬಸವತತ್ವ ಪ್ರಸಾರ ದಾಸೋಹಗಳಿಂದ ಜನಪ್ರಿಯರಾಗಿದ್ದ ಶರಣಪ್ಪ ದಂಪತಿಗಳ ಕಾರ್ಯ ಅಂದಿನ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೂ ತಿಳಿದುಬರುತ್ತದೆ. ಉದಾರಿಗಳೂ, ಧರ್ಮಾಭಿಮಾನಿಗಳೂ ಆಗಿದ್ದ ಮಹಾರಾಜರು, ಶರಣಪ್ಪ ದಂಪತಿಗಳ ಕಾರ್ಯಗಳಿಗೆ ಅನುಕೂಲವಾಗಲೆಂದು ಚವುಳಂಗ ಸಮೀಪದ ಜೋಡಿ ಗ್ರಾಮಗಳನ್ನು ಹಾಗೂ ಚವುಳಂಗದಿಂದ ನ್ಯಾಮತಿಗೆ ಹೋಗುವ ಮಾರ್ಗದಲ್ಲಿರುವ ಶಿವಾಲಯ ಸಮೀಪದ ಹಿರೇಹಳ್ಳದ ಜಮೀನನ್ನು ಇನಾಮಾಗಿ ನೀಡಿದರೆಂದು ದೇವನೂರಿನ ಹಳೇಮಠದಲ್ಲಿ ದೊರಕಿರುವ ಪತ್ರದಿಂದ ತಿಳಿದುಬರುತ್ತದೆ. ಇದರಿಂದ ಬರುತ್ತಿದ್ದ ಉತ್ಪನ್ನದಿಂದ ಶರಣಪ್ಪನವರು ಗುರುಲಿಂಗ ಜಂಗಮ ಸೇವೆ ದಾಸೋಹ ನಡೆಸಿಕೊಂಡು ಬರುತ್ತಿದ್ದರು. ಮಹಾರಾಜರ ಕೃಪೆಗೆ ಪಾತ್ರರಾಗಿದ್ದ ಶರಣಪ್ಪ ದಂಪತಿಗಳು ಮೈಸೂರಿಗೆ ಬಂದಾಗಲೆಲ್ಲ ಚೌಕೀಮಠದಲ್ಲಿ ವಾಸ್ತವ್ಯ ಮಾಡುತ್ತಿದ್ದರು. ಚೌಕೀಮಠದ ಸ್ವಾಮಿಗಳಾದ ಶ್ರೀ ಶರಣಪ್ಪ ಸ್ವಾಮಿಗಳ ನಿಜನಾಮಧೇಯ ಶ್ರೀ ಗುರುಮಲ್ಲೇಶ್ವರ ಎಂದು ಇದ್ದಿತು. ಅವರ ಆಶೀರ್ವಾದದಿಂದ ಮದುವೆಯಾಗಿ ಬಹಳ ಕಾಲದ ನಂತರ ಹುಟ್ಟಿದ ಮಗನಿಗೆ ಗುರುಮಲ್ಲಪ್ಪ ಎಂದೇ ನಾಮಕರಣ ಮಾಡುತ್ತಾರೆ. ಒಮ್ಮೆ ಚವುಳಂಗ ಮತ್ತು ಸುತ್ತಲ ಗ್ರಾಮಗಳಲ್ಲಿ ಭೀಕರ ಬರಗಾಲವುಂಟಾಗಿ ನೂರಾರು ಕುಟುಂಬಗಳು ವಲಸೆ ಹೋಗುವ ಸಂದರ್ಭ ಉಂಟಾಗುತ್ತದೆ. ಈ ಬರಗಾಲದ ಪರಿಣಾಮವಾಗಿ ಶರಣಪ್ಪ ಪತ್ನಿ

ಪುತ್ರರೊಂದಿಗೆ ಮೈಸೂರಿಗೆ ಬಂದು ಚೌಕೀಮಠದಲ್ಲಿ ಆಶ್ರಯ ಪಡೆಯುತ್ತಾರೆ. ವಯೋವೃದ್ಧರಾದ ಚೌಕೀಮಠದ ಶ್ರೀ ಶರಣಪ್ಪ ಸ್ವಾಮಿಗಳು ಬಾಲಕ ಗುರುಮಲ್ಲಪ್ಪನನ್ನು ಪ್ರೀತಿಯಿಂದ ಕಂಡು ವಿದ್ಯಾಬುದ್ಧಿ ಕಲಿಸುತ್ತಾರೆ. ತಾವು ಲಿಂಗೈಕ್ಯರಾಗುವ ಮುನ್ನ ಚೌಕೀಮಠದ ಪಕ್ಕದಲ್ಲಿದ್ದ ಶ್ರೀ ಮಹಾಲಿಂಗೇಶ್ವರ ಮಠದ ಪೂಜ್ಯ ಗುರುಗಳಾದ ಶ್ರೀ ಬೆತ್ತಲೆಗುಂಡೆ ಸ್ವಾಮಿಗಳವರಿಗೆ ಬಾಲಕನ ಲಾಲನೆಯ ಜವಾಬ್ದಾರಿ ಒಪ್ಪಿಸುತ್ತಾರೆ. ಶರಣಪ್ಪ ದಂಪತಿಗಳು ಕೆಲಕಾಲ ಎರಡೂ ಮಠದ ಸೇವೆಯಲ್ಲಿರುತ್ತಾರೆ. ಗುರುಮಲ್ಲಪ್ಪನು ಪ್ರೌಢಾವಸ್ಥೆಗೆ ಬರುತ್ತಿದ್ದಂತೆ, ಶರಣಪ್ಪ ತಮ್ಮ ಊರು ಸವುಳಂಗಕ್ಕೆ ಆಗಾಗ ಹೋಗಿ, ಕೆಲವು ದಿನ ಇದ್ದು, ಸವುಳಂಗದಲ್ಲಿಯೇ ಲಿಂಗೈಕ್ಯರಾಗುತ್ತಾರೆ. ಇತ್ತ ಗುರುಮಲ್ಲಪ್ಪನ ತಾಯಿ ಶರ್ವಾಣಮ್ಮ ಚೌಕೀಮಠದ ಸೇವೆಯಲ್ಲಿದ್ದು ಅಲ್ಲಿಯೇ ಲಿಂಗೈಕ್ಯರಾಗುತ್ತಾರೆ. ಅವರ ಸಮಾಧಿ ಚೌಕೀಮಠದಲ್ಲಿದೆ.

ಮಹಾಲಿಂಗೇಶ್ವರ ಮಠದ ಗುರುಗಳಾದ ಶ್ರೀ ಬೆತ್ತಲೆಗುಂಡೆ ಸ್ವಾಮಿಗಳವರು ವೈರಾಗ್ಯಮೂರ್ತಿಗಳು, ಅಷ್ಟಾಂಗಯೋಗ ಬಲ್ಲಿದರು. ಈ ಮಠವು ಮೈಸೂರಿನ ಪ್ರಾಚೀನ ಮಠವಾಗಿದ್ದು, ದೊಡ್ಡ ಧಾರ್ಮಿಕ ಕೇಂದ್ರವಾಗಿತ್ತು. ಇಂತಹ ಪರಿಸರದಲ್ಲಿ ಬೆಳೆದ ಗುರುಮಲ್ಲಪ್ಪ ಸಹಜವಾಗಿ ಅಧ್ಯಾತ್ಮದತ್ತ ಒಲವು ಬೆಳೆಸಿಕೊಂಡರು. ಮಹಾಲಿಂಗೇಶ್ವರ ಮಠದ ಕಾರ್ಯಗಳಲ್ಲಿ ದಕ್ಷತೆಯಿಂದ, ಶ್ರದ್ಧೆಭಕ್ತಿಗಳಿಂದ ತೊಡಗಿದರು. ಶ್ರೀ ಬೆತ್ತಲೆಗುಂಡೆ ಸ್ವಾಮಿಗಳ ಆಶಯದಂತೆ ಶಿವಯೋಗದತ್ತ ಒಲಿದು ಕಂತೆಭಿಕ್ಷೆ ಕಾಯಕ ಕೈಗೊಂಡರು. ಶ್ರೀ ಬೆತ್ತಲೆಗುಂಡೆ ಸ್ವಾಮಿಗಳು ಲಿಂಗೈಕ್ಯರಾದ ನಂತರ ಶ್ರೀ ಮಹಾಲಿಂಗೇಶ್ವರ ಮಠದಲ್ಲಿದ್ದ ಮಹಾಜ್ಞಾನಿ ಶ್ರೀ ಮುಪ್ಪಿನ ಸ್ವಾಮಿಗಳ ನಿರ್ದೇಶನದಂತೆ ಗುರುಮಲ್ಲಪ್ಪ ಚಾಮುಂಡಿ ಬೆಟ್ಟದ ಮೇಲಿರುವ ಮಹಾನಂದಿಯ ಪಕ್ಕದಲ್ಲಿ ಬೃಹತ್ ಬಿಲ್ವವೃಕ್ಷದಡಿಯಲ್ಲಿ ಹನ್ನೆರಡು ವರ್ಷ ಲಿಂಗಾನುಷ್ಠಾನ ಮಾಡುತ್ತಾರೆ. ಕಂತೆಭಿಕ್ಷದಿಂದ (ಭಕ್ತರು ನೀಡಿದ) ಗುರುಲಿಂಗ ಜಂಗಮ ಸೇವೆಮಾಡಿ, ಅನಾಥರಿಗೆ, ಕುಂಟಕುರುಡರಿಗೆ, ದೀನದಲಿತರಿಗೆ ದಾಸೋಹವನ್ನು ನಿಷ್ಠೆಯಿಂದ ಮಾಡುತ್ತಾರೆ. ಜೊತೆಗೆ ಬಸವತತ್ವ ಪ್ರಚಾರ ಕೈಗೊಳ್ಳುತ್ತಾರೆ. ಸತತವಾದ ಸಾಧನೆ ಮೂಲಕ ಮೈಸೂರಿನ ಭಕ್ತರಿಗೆ ಪ್ರಿಯರಾಗಿ ಪ್ರಸಿದ್ಧರಾಗುತ್ತಾರೆ. ಪ್ರತಿದಿನ ಶರಣರ ಜೀವನ ಸಾಧನೆ ಕುರಿತು ಪ್ರವಚನ ನೀಡಿ ಭಕ್ತರಲ್ಲಿ ಜಾಗೃತಿ ಮೂಡಿಸುತ್ತಾರೆ.

ಶ್ರೀ ಗುರುಮಲ್ಲೇಶ್ವರ ಲಿಂಗಾನುಷ್ಠಾನ, ಶಿವಾನುಭವದ ಕೀರ್ತಿ ತಿಳಿದ ನಂಜನಗೂಡು (ತಾ) ದೇವನೂರು ಗ್ರಾಮದ ಪಟೇಲರು ತಮ್ಮ ಪತ್ನಿಯ ಅನಾರೋಗ್ಯ ಪರಿಹಾರ ನಿಮಿತ್ಯ ತಮ್ಮ ಗ್ರಾಮಕ್ಕೆ ಆಹ್ವಾನಿಸುತ್ತಾರೆ. ಈ ಘಟನೆಯಿಂದಾಗಿ ಮುಂದೆ ಶ್ರೀ ಗುರುಮಲ್ಲೇಶ್ವರರು ಮೈಸೂರು ಬಿಟ್ಟು ದೇವನೂರಿನಲ್ಲಿ ನೆಲೆ ನಿಲ್ಲುವಂತಾಗುತ್ತದೆ. ಟಿ. ನರಸೀಪುರ (ತಾ) ಮೂಗೂರು, ಚಾಮರಾಜನಗರ (ತಾ) ಕುದೇರು, ಕೊಳ್ಳೇಗಾಲ

(ತಾ) ಕುಂತೂರು ಮುಂತಾದ ಕಡೆ ಪ್ರವಾಸ ಮಾಡಿ ಬಸವತತ್ವ ಪ್ರಚಾರ ಕೈಗೊಳ್ಳುತ್ತಾರೆ. ದೇವನೂರಿನ ಪಟೇಲ್ ಸುಬ್ಬೇಗೌಡರು ಮತ್ತು ಗ್ರಾಮದ ಭಕ್ತರ ಕೋರಿಕೆಯಂತೆ ಶ್ರೀ ಗುರುಮಲ್ಲೇಶ್ವರರು ದೇವನೂರಿನಲ್ಲಿ ನೆಲೆಸಲು ನಿರ್ಧರಿಸುತ್ತಾರೆ. ಕೆಲಕಾಲ ಪಟೇಲರ ಮನೆಯಲ್ಲಿ ವಾಸ್ತವ್ಯ ಮಾಡಿ ಕಂತೆಭಿಕ್ಷೆ, ದಾಸೋಹ ಪೂಜೆ, ಅನುಷ್ಠಾನ ಕೈಗೊಳ್ಳುತ್ತಾರೆ. ಕ್ರಮೇಣ ಭಕ್ತರು ಹೆಚ್ಚಾದಂತೆ ಗ್ರಾಮದ ಸುಬ್ಬೇಗೌಡರ ನಾಡ ಹೆಂಚಿನ ಮನೆ ಗುರುಮಲ್ಲೇಶ್ವರರಿಗಾಗಿ ಸಿದ್ಧವಾಗುತ್ತದೆ. ಧಾರ್ಮಿಕ ಪ್ರವಚನ, ಶರಣತತ್ವಗಳ ಗೋಷ್ಠಿಗಳ ಮೂಲಕ ಕಂತೆಭಿಕ್ಷದ ಕಾಯಕ ಮುಂದುವರಿಸುತ್ತಾರೆ. ಜೊತೆಗೆ ಆಸಕ್ತರಿಗೆ, ದೀನದಲಿತರಿಗೆ ದಾಸೋಹವನ್ನು ಏರ್ಪಡಿಸುತ್ತಾರೆ. ಈ ಮನೆಯೇ ಮುಂದೆ ಶ್ರೀ ಗುರುಮಲ್ಲೇಶ್ವರರ ದಾಸೋಹ ಮಠವಾಗಿ ಪ್ರಸಿದ್ಧವಾಗಿ ಬೆಳೆದಿದೆ.

ಶ್ರೀ ಗುರುಮಲ್ಲೇಶ್ವರರ ಕಾಯಕ, ಕಂತೆಭಿಕ್ಷ ದಾಸೋಹ, ಶರಣತತ್ವದ ಅನುಭವ ಗೋಷ್ಠಿಗಳು ಕ್ರಮೇಣ ಸುತ್ತಲ ಗ್ರಾಮಗಳ ಭಕ್ತರನ್ನು ಆಕರ್ಷಿಸಿತು. ಭಕ್ತರ ಕಷ್ಟಗಳಿಗೆ, ತೊಂದರೆಗಳಿಗೆ, ವ್ಯಾಜ್ಯಗಳಿಗೆ ಪರಿಹಾರ ಕಂಡುಕೊಳ್ಳಲು ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಭಕ್ತರು ಹೆಚ್ಚಾದರು, ಭಕ್ತರ ಅಪೇಕ್ಷೆಯಂತೆ ಆಹ್ವಾನ ಒಪ್ಪಿ ಎತ್ತಿನಗಾಡಿ, ಕಾಲ್ನಡಿಗೆಯಲ್ಲಿ ಧರ್ಮಪ್ರಸಾರ ಯಾತ್ರೆ ಕೈಗೊಳ್ಳುತ್ತಾರೆ.

೧೨ನೇ ಶತಮಾನದಲ್ಲಿ ನಡೆದ ಸಮಾಜೋಧಾರ್ಮಿಕ ಕ್ರಾಂತಿಯ ಫಲವಾಗಿ ಉದಯಿಸಿದ ಲಿಂಗಾಯತ ಧರ್ಮದ ಸಾರಸರ್ವಸ್ವವಾದ ವಚನ ಸಾಹಿತ್ಯ, ಶರಣತತ್ವಗಳು, ಮಾನವೀಯ ಮೌಲ್ಯಗಳು, ನಂತರದ ರಾಜಕೀಯ ವಿದ್ಯಮಾನ ಗಳಿಂದಾಗಿ ಹಿನ್ನೆಡೆ ಅನುಭವಿಸಿದವು. ಪುನಃ ವರ್ಗಭೇದ, ವರ್ಣಭೇದ, ಅಸ್ಪೃಶ್ಯತೆಗಳು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದವು. ಕಾಲಕಾಲಕ್ಕೆ ಶರಣತತ್ವಗಳ ಅನುಷ್ಠಾನಕ್ಕೆ ಚಾಲನೆ ದೊರೆತರೂ, ಪುರೋಹಿತಶಾಹಿಗಳ ಹುನ್ನಾರವೇ ಮೇಲುಗೈ ಪಡೆಯುತ್ತಾ ಬಂದಿತು. ಕಾಯಕ ಮತ್ತು ದಾಸೋಹ ತತ್ವಗಳ ಮೂಲಕ ಶರಣರು ಸರ್ವಸಮಾನತೆ ಯನ್ನು ತರುವ ಪ್ರಯತ್ನ ವಿಫಲವಾಗುತ್ತಲೇ ಬಂದಿರುವುದು ಇತಿಹಾಸ. ಇಂತಹ ಶರಣ ತತ್ವವನ್ನು ಪುನಃ ಜಾರಿಗೆ ತರುವ ಪ್ರಯತ್ನ ಶ್ರೀ ಗುರುಮಲ್ಲೇಶ್ವರರಿಂದ ಆರಂಭ ವಾಯಿತು. ಅಸಮಾನತೆಯನ್ನು ತೊಲಗಿಸುವ ಪ್ರಯತ್ನದ ಜೊತೆಗೆ ಬಸವತತ್ವಗಳನ್ನು ತಮ್ಮ ಸುತ್ತಲ ಪರಿಸರದಲ್ಲಿ ಮತ್ತೆ ನೆಲೆಗೊಳಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿದರು. ಯಾವುದೇ ವರ್ಗ, ಜಾತಿ, ಲಿಂಗಭೇದ ಎಣಿಸದೆ ಶರಣತತ್ವದತ್ತ ಆಕರ್ಷಿತರಾದವ ರೆಲ್ಲರಿಗೂ ಲಿಂಗಧಾರಣೆ, ಶರಣತತ್ವ ಬೋಧೆ ಮಾಡಿ ಶಿಷ್ಯರನ್ನಾಗಿ ಸ್ವೀಕರಿಸಿದರು. ಬಾಹ್ಯ ಆಡಂಬರಕ್ಕಿಂತ ಅಂತರಂಗದ ಪರಿವರ್ತನೆಗೆ- ಶುದ್ಧತೆಗೆ ಆದ್ಯತೆ ನೀಡಿದರು. ಅಂದಿನ ಮೈಸೂರು ಮಹಾರಾಜರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರೂ ಸೇರಿದಂತೆ ಅರಮನೆಯ ಸೇವೆಯಲ್ಲಿದ್ದ ಅನೇಕ ಅಧಿಕಾರಿಗಳಿಗೂ ಲಿಂಗಧಾರಣೆ

ಮಾಡಿ ಶರಣತತ್ವ ಉಪದೇಶ ಮಾಡಿದ್ದಾರೆ. ಶ್ರೀ ನಂಜರಾಜ ಬಹದ್ದೂರರು, ಭಕ್ಷಿಗಳಾದ ಹೊಸಳ್ಳಿ ಶಿವಪ್ಪ, ಗುರಿಕಾರ ಮಾದಪ್ಪ ಮತ್ತು ಅವರ ಪತ್ನಿ ಚಿಕ್ಕಲಿಂಗಮ್ಮ, ಕೆಲವು ದಳವಾಯಿಗಳೂ ಶ್ರೀ ಗುರುಮಲ್ಲೇಶ್ವರರಿಂದ ಲಿಂಗದೀಕ್ಷೆ ಪಡೆದರೆಂದು ತಿಳಿದುಬರುತ್ತದೆ. ಅಲ್ಲದೆ ಬ್ರಾಹ್ಮಣ ಮಾಧವರಾಯರೂ ಲಿಂಗದೀಕ್ಷೆ ಪಡೆದರು. ಮುಸಲ್ಮಾನರಾದ ಶ್ರೀ ಮೌಲಾನ ಪೀರ್ ಮತ್ತು ಅವರ ಕುಟುಂಬದವರು, ವೇಶ್ಯೆಯರಾದ ದೇವಾಜಮ್ಮ, ಪುಟ್ಟಮ್ಮ ಜೊತೆಗೆ ಅನೇಕ ದೇವದಾಸಿ ಕುಟುಂಬ ದವರಿಗೆ, ಹಿಂದುಳಿದವರಿಗೆ ಶರಣತತ್ವ ಉಪದೇಶ ಮಾಡಿ ಶಿಷ್ಯರನ್ನಾಗಿ ಸ್ವೀಕರಿಸಿದ ರೆಂದು ತಿಳಿದುಬರುತ್ತದೆ. ಸಮಾನತೆಯ ಶರಣ ತತ್ವಗಳನ್ನು ಜನಸಾಮಾನ್ಯರಲ್ಲಿ ಬಿತ್ತುವ ಕಾರ್ಯವನ್ನು ತಮ್ಮ ಜೀವಿತದ ಅಂತ್ಯದವರೆಗೂ ಒಂದು ವ್ರತದಂತೆ ನಡೆಸಿಕೊಂಡು ಬಂದರು ಶ್ರೀ ಗುರುಮಲ್ಲೇಶ್ವರರು.

ಶ್ರೀ ಗುರುಮಲ್ಲೇಶ್ವರರ ಭಕ್ತರ ಸಂಖ್ಯೆ ಹೆಚ್ಚಾದಂತೆ, ಅವರೊಂದಿಗೆ ಅನೇಕ ಸ್ವಾಮಿಗಳೂ ಸೇರಿ ಶರಣತತ್ವ ಪ್ರಸಾರದಲ್ಲಿ ತೊಡಗಿದರು. ಪಟೇಲ್ ಸುಬ್ಬೇಗೌಡರ ಹೂದೋಟದಲ್ಲಿ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಶ್ರೀ ಮುಪ್ಪಿನಾರ್ಯ ಸ್ವಾಮಿಗಳ ಕ್ರಿಯಾಸಮಾಧಿ ಮಾಡಲಾಯಿತು. ಮುಪ್ಪಿನಾರ್ಯರ ಈ ಗದ್ದುಗೆಯಿಂದಾಗಿ ಇಂದು ದೇವನೂರಿನಲ್ಲಿ ನಾವು ಕಾಣುವ ಶ್ರೀ ಗುರುಮಲ್ಲೇಶ್ವರರ ದಾಸೋಹ ಮಠವನ್ನು ಸ್ಥಳಾಂತರಿಸುತ್ತಾರೆ. ಮುಂದೆ ಅವರ ಜೀವಿತದ ಅಂತ್ಯದವರೆಗೂ ಹೊಸಮಠದಲ್ಲಿಯೇ ಉಳಿಯುತ್ತಾರೆ. ಹೊಸಮಠವೂ ಸರಳವಾಗಿಯೇ ಇತ್ತು. ಅವರ ಜೀವಿತ ಕಾಲದವರೆಗೂ ಹಾಗೆಯೇ ಉಳಿಸುವಂತೆ ನೋಡಿಕೊಂಡರು. ಸಾಮಾನ್ಯ ಮಣ್ಣಿನ ಗೋಡೆ, ತೆಂಗಿನಗರಿ ಚಾವಣಿಯಿಂದ ಪ್ರಾರಂಭವಾದ ಶ್ರೀ ಗುರುಮಲ್ಲೇಶ್ವರ ಮಠ, ಇಂದು ಬೃಹತ್ತಾಗಿ ಬೆಳೆದು ನಿತ್ಯ ಅನ್ನದಾಸೋಹ, ಜ್ಞಾನದಾಸೋಹ, ಶರಣತತ್ವ ಚಿಂತನೆಗಳ ಮೂಲಕ ತ್ರಿವಿಧ ದಾಸೋಹ ಮಠವಾಗಿ ಪ್ರಸಿದ್ಧವಾಗಿದೆ. ಬಹುಶಃ ದಾಸೋಹ ಮಠವೆಂದೇ ಕರೆಸಿಕೊಳ್ಳುತ್ತಿರುವ ಏಕೈಕ ಮಠವೆಂದರೆ ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವೇ ಎನ್ನಬಹುದು. ಮೈಸೂರಿನ ಸುತ್ತಮುತ್ತ ಗುರುಮಲ್ಲೇಶ್ವರ ದಾಸೋಹ ಮಠವು ಲಕ್ಷಾಂತರ ಭಕ್ತರನ್ನು ಹೊಂದಿದೆ. ಶ್ರೀ ಗುರುಮಲ್ಲೇಶ್ವರರು ಲಿಂಗದೊಳಗಾಗಿ ೧೦೮ ವರ್ಷಗಳು ಕಳೆದಿದ್ದರೂ ಈ ಭಾಗದ ಜನಸಾಮಾನ್ಯರ ಸ್ಮರಣೆಯಲ್ಲಿ ಇಂದಿಗೂ ಜಾಗೃತ ಚೇತನರಾಗಿದ್ದಾರೆ. ಶ್ರೀ ಗುರುಮಲ್ಲೇಶ್ವರರ ದಾಸೋಹ ಮಠವು ಯಾವುದೇ ಸ್ಥಲಕ್ಕಾಗಲಿ, ವರ್ಗಕ್ಕಾಗಲಿ, ಪೀಠಗಳಿಗಾಗಲಿ, ವಂಶಪಾರಂಪರ್ಯದ ಆಡಳಿತಕ್ಕಾಗಲಿ ಸೇರದೆ ಸ್ವತಂತ್ರ ಅಸ್ತಿತ್ವ ಹೊಂದಿದ ಮಠವಾಗಿದೆ.

■


ದೇವನೂರು ಶ್ರೀ ಗುರುಮಲ್ಲೇಶ್ವರ ಮಠ

■ ರುದ್ರೇಶ್ ಬಿ. ಅದರಂಗಿ
ನಂ. ೧೬, ೩ನೇ ಅಡ್ಡರಸ್ತೆ, ೨ನೇ ಮುಖ್ಯರಸ್ತೆ, ವಿಠ್ಠಲನಗರ,
ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಶರಣರ ಕೊಡುಗೆ ಅನನ್ಯವಾದುದು. ಕೇವಲ ಸಾಹಿತ್ಯ ದೃಷ್ಟಿಯಿಂದ ಮಾತ್ರವಲ್ಲದೆ, ಜನರ ಬದುಕನ್ನು ಹಸನುಮಾಡುವಲ್ಲಿ ಅವರು ಬಿತ್ತಿದ ಸಂದೇಶ ಸದಾ ಪ್ರಸ್ತುತವಾಗಿದೆ. ಹನ್ನೆರಡನೇ ಶತಮಾನದ ಶರಣ ಚಳುವಳಿಯನ್ನು ಜನಮಾನಸದಲ್ಲಿ ಪುನರ್ ಪ್ರತಿಷ್ಠಾಪಿಸಿದ ಹಿರಿಮೆ ದೇವನೂರು ಶ್ರೀ ಗುರು ಮಲ್ಲೇಶ್ವರರಿಗೆ ಸಲ್ಲುತ್ತದೆ. ಇಂತಹ ಪರಮಪೂಜ್ಯರ ತಪೋಭೂಮಿ, ಕರ್ಮಭೂಮಿಯೇ ದೇವನೂರು ಶ್ರೀಕ್ಷೇತ್ರವಾಗಿದೆ.

ಮೈಸೂರಿನಿಂದ ಚಾಮರಾಜನಗರ ಮಾರ್ಗದಲ್ಲಿ ಸಾಗಿ ನಂಜನಗೂಡನ್ನು ದಾಟಿ ಸುಮಾರು ೧೨ ಮೈಲಿ ನಂತರದಲ್ಲಿ ಬದನವಾಳು ಎಂಬ ಗ್ರಾಮ ಸಿಗುತ್ತದೆ. ಅಲ್ಲಿ ದೇವನೂರು ಮಠಕ್ಕೆ ದಾರಿ ಎಂಬ ಒಂದು ಕಮಾನು ಗೋಪುರ ಕಾಣಬರುತ್ತದೆ. ಅದನ್ನು ದಾಟಿಕೊಂಡು ಸುಮಾರು ೮ ಕಿ.ಮೀ. ಸಾಗಿದರೆ ದೇವನೂರು ಗ್ರಾಮ ಸಿಗುತ್ತದೆ. ದೇವನೂರು ಎರಡು ಕಾರಣಗಳಿಂದ ಕರ್ನಾಟಕದಲ್ಲಷ್ಟೇ ಅಲ್ಲ, ಭಾರತದ ಇತಿಹಾಸದಲ್ಲಿ ಬಹುಮುಖ್ಯವಾದ ಸ್ಥಾನವನ್ನು ಪಡೆದಿದೆ. ಮೊದಲನೆಯದಾಗಿ, ದೇವನೂರಿನಲ್ಲಿ ಇದ್ದು, ಪವಾಡಗಳನ್ನು ಮೆರೆದು, ಭಕ್ತರನ್ನು ಹರಸಿ, ಉದ್ಧರಿಸಿದ ಶ್ರೀಗುರು ಮಲ್ಲೇಶ್ವರರು ಬದುಕಿದ ಪವಿತ್ರ





ತಪೋಭೂಮಿಯಾಗಿ. ಮತ್ತೊಂದು ದೇವನೂರಿನಲ್ಲಿ ಜನಿಸಿ 'ದ್ಯಾವನೂರು' ಮೊದಲಾದ ಕಥಾಸಂಕಲನ ಹಾಗೂ 'ಕುಸುಮಬಾಲೆ'ಯಂಥ ಕಾದಂಬರಿ ರಚಿಸಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ಶ್ರೀ ದೇವನೂರು ಮಹದೇವ ಅವರಿಂದ.

ದೇವನೂರನ್ನು ಪ್ರವೇಶಿಸುತ್ತಿದ್ದಂತೆ ಕಲ್ಯಾಣದ ಮಹಾಮನೆಯಂತಿರುವ ಶ್ರೀಮನ್ನಿರಂಜನ ಗುರುಮಲ್ಲೇಶ್ವರ ಮಹಾ ಸಂಸ್ಥಾನ ದಾಸೋಹ ಮಠವು ಕಾಣ ಬರುತ್ತದೆ. ಬಿಳಿಬಸವನ ಪ್ರತಿಮೆಯನ್ನೊಳಗೊಂಡ ಮಹಾದ್ವಾರವನ್ನು ಪ್ರವೇಶಿಸುತ್ತಿದ್ದಂತೆ ವಿಶಾಲವಾದ ಅಂಗಣ ಕಾಣಬರುತ್ತದೆ. ಕಲ್ಲು ಹಾಸಿನಿಂದ ಕೂಡಿರುವ ಅಂಗಣದಲ್ಲಿ ನಿಂತರೆ ವಿಶಾಲವಾದ ಹಾಗೂ ಭವ್ಯವಾದ ಶ್ರೀ ಗುರುಮಲ್ಲೇಶ್ವರರ ಗದ್ದುಗೆ ಕಾಣಿಸುತ್ತದೆ. ಗದ್ದುಗೆಯ ಬಲಬದಿಯಲ್ಲಿ ಶ್ರೀ ಮುಪ್ಪಿನ ಸ್ವಾಮಿಗಳವರ ಪ್ರತಿಮೆಯ ದರ್ಶನವಾದರೆ, ಎಡಭಾಗದಲ್ಲಿ ಮತ್ತೊಂದು ಕಮಾನಿನ ತುದಿಯಲ್ಲಿ ಶ್ರೀಶೈಲದ ಶಿವಾನಂದ ಮಹಾಸ್ವಾಮಿಗಳವರ ಪ್ರತಿಮೆಯ ದರ್ಶನವಾಗುತ್ತದೆ. ಇವೆರಡೂ ಕಮಾನುಗಳ ನಡುವೆ ಶ್ರೀ ಶರಣಬಸಪ್ಪ ತಾತ, ಶ್ರೀ ಭಿಕ್ಷದ ರಾಚಪ್ಪ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರರು, ಶ್ರೀ ಚನ್ನಬಸವ ಸ್ವಾಮಿಗಳವರು ಹಾಗೂ ಶ್ರೀ ತೋಂಟದಾರ್ಯರ ಪ್ರತಿಮೆಗಳ ದರ್ಶನವಾಗುತ್ತದೆ. ಅಂಗಳದಲ್ಲಿರುವ ಕೊಳಾಯಿ ನೀರಿನಲ್ಲಿ ಕೈಕಾಲು ಮುಖ ತೊಳೆದುಕೊಂಡು ಶ್ರೀ ಗುರುಮಲ್ಲೇಶ್ವರರ ಗದ್ದುಗೆಯ ದರ್ಶನವನ್ನು ಪಡೆಯೋಣ. ಗದ್ದುಗೆಯನ್ನು ಪೂಜ್ಯ ಶ್ರೀ ಶಿವಪ್ಪ ಸ್ವಾಮಿಗಳವರು ನಿರ್ಮಿಸಿರುತ್ತಾರೆ. ಇದು ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿದೆ. ಗದ್ದುಗೆಯ ಸುತ್ತಲೂ ಕಂಬಗಳಿದ್ದು ಪ್ರತಿ ಕಂಬದಲ್ಲಿಯೂ ಸುಂದರವಾದ ಕೆತ್ತನೆ ಕೆಲಸಗಳಲ್ಲದೆ, ಶ್ರೀ ಗುರು ಮಲ್ಲೇಶ್ವರರು, ನಂದಿ, ಶಿವಗಣರ ಮೂರ್ತಿಗಳನ್ನು ಕಾಣಬಹುದಾಗಿದೆ. ಕಲ್ಲು ಅಂಕಣವನ್ನು ದಾಟಿ ಒಳಗೆ ಪ್ರವೇಶಿಸಿದರೆ ಶ್ರೀ ಗುರುಮಲ್ಲೇಶ್ವರರ ಗದ್ದುಗೆಯ ದರ್ಶನವಾಗುತ್ತದೆ. ಸಾಮಾನ್ಯವಾಗಿ ಗದ್ದುಗೆ ಎಂದಾಗ ಎತ್ತರವಾದ ಆವರಣ, ವಿಶೇಷವಾದ ಅಲಂಕಾರಗಳು, ಮೂರ್ತಿಗಳ ರಾರಾಜಿಸುವಿಕೆಯಿರುತ್ತದೆ. ಆದರೆ ಇಲ್ಲಿ ಅಂತಹ ಯಾವುದೇ ಆಚರಣೆಗಳಿಗೆ ಅವಕಾಶವಿಲ್ಲದಂತೆ ಶರಣ ಧರ್ಮದ ರೀತಿಯಲ್ಲಿ, ಸರಳ ಸುಂದರವಾಗಿ ಗದ್ದುಗೆಯನ್ನು ನಿರ್ಮಿಸಲಾಗಿದೆ. ಗದ್ದುಗೆಯನ್ನು



ಸಮಕಾಲೀನ ಶರಣರೊಂದಿಗೆ ಶ್ರೀ ಗುರುಮಲ್ಲೇಶ್ವರರು (ಎಡದಿಂದ ಎರಡನೆಯವರು)

ಪೂರ್ಣವಾಗಿ ಹೂವಿನಿಂದ ಅಲಂಕರಿಸಲಾಗಿದೆ. ಮಧ್ಯಭಾಗದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಒಂದು ದಿವ್ಯಜ್ಯೋತಿ ಸದಾ ಪ್ರಕಾಶಮಾನವಾಗಿ ಹೊಳೆಯುತ್ತಿರುತ್ತದೆ. ಗದ್ದುಗೆಯ ಸುತ್ತಲೂ ಗೋಡೆಯ ಮೇಲ್ಬದಿಯಲ್ಲಿ ಶ್ರೀ ಗುರುಮಲ್ಲೇಶ್ವರರ ಭಾವಚಿತ್ರವುಳ್ಳ, ಬಸವನಾಮವನ್ನು ತಮ್ಮ ಕೈಯಿಂದ ಹಿಡಿದಿರುವ ಭಾವಚಿತ್ರಗಳು ಸುತ್ತಲೂ ಕಾಣಬರುತ್ತವೆ. ಗದ್ದುಗೆಯ ಪೂಜಾ ಕೈಂಕರ್ಯಕ್ಕೆ ಓರ್ವ ಶ್ರೀಗಳನ್ನು ನೇಮಿಸಲಾಗಿದೆ. ಪೂಜ್ಯಶ್ರೀಗಳವರು ಸದಾ ಶ್ರೀ ಗುರುಮಲ್ಲೇಶ್ವರರ ಗದ್ದುಗೆಯ ಪೂಜಾ ಕೈಂಕರ್ಯದಲ್ಲಿ ನಿರತರಾಗಿರುವರಲ್ಲದೆ ಬಂದಂತಹ ಭಕ್ತಾದಿಗಳಿಗೆ ಮಹಾ ಮಂಗಳಾರತಿ ನೀಡಿ ಭಕ್ತಾದಿಗಳಿಗೆ ಶ್ರೀಗುರು ಮಲ್ಲೇಶ್ವರರ ದರ್ಶನ ಮಾಡಿಸುತ್ತಾರೆ.


ಶ್ರೀ ಗುರುಮಲ್ಲೇಶ್ವರ ಗದ್ದುಗೆಯ ದರ್ಶನವಾಗುತ್ತಿದ್ದಂತೆ ಯಾವುದೋ ಒಂದು ಶೂನ್ಯಭಾವ ನಮ್ಮನ್ನು ಆವರಿಸುತ್ತದೆ. ನಮ್ಮರಿವಿಗೆ ಬಾರದ ಹಾಗೆ ಶ್ರೀ ಗುರು ಮಲ್ಲೇಶ್ವರರ ದಿವ್ಯಶಕ್ತಿ ನಮ್ಮನ್ನು ತನ್ನತ್ತ ಸೆಳೆದಂತಾಗುತ್ತದೆ.

ಶ್ರೀಮಠದಲ್ಲಿ ಗುರು ಮಲ್ಲೇಶ್ವರರ ಗದ್ದುಗೆಯಲ್ಲದೆ ಹಲವಾರು ಸಾಲು ಸಾಲು ಗದ್ದುಗೆಗಳು ಇರುವುದನ್ನು ದರ್ಶಿಸಬಹುದಾಗಿದೆ. ಅವುಗಳೆಂದರೆ- ಪೂಜ್ಯರಾದ ಶ್ರೀ ತೋಂಟದಾರ್ಯರ ಗದ್ದುಗೆ, ಘನಲಿಂಗ ಚಕ್ರವರ್ತಿ ಶ್ರೀ ಮುಪ್ಪಿನ ಸ್ವಾಮಿಗಳವರ ಗದ್ದುಗೆ, ಶ್ರೀ ವಿರಕ್ತ ಸ್ವಾಮಿಗಳವರ ಗದ್ದುಗೆ, ಶ್ರೀ ಶರಣಬಸಪ್ಪ ತಾತಾರವರ ಗದ್ದುಗೆ, ಶ್ರೀ ಮೌನಿ ಸ್ವಾಮಿಗಳವರ ಗದ್ದುಗೆ, ಶ್ರೀ ಚನ್ನಬಸಪ್ಪ ಸ್ವಾಮಿಗಳವರ ಗದ್ದುಗೆ, ಶ್ರೀಶೈಲದ ಶಿವಾನಂದ ಮುಪ್ಪಿನ ಸ್ವಾಮಿಗಳವರ ಗದ್ದುಗೆ, ಶ್ರೀ ಭಿಕ್ಷದ ರಾಚಪ್ಪ ಸ್ವಾಮಿಗಳವರ ಗದ್ದುಗೆ, ಶ್ರೀ ಶಿವಪ್ಪಸ್ವಾಮಿಗಳವರ ಗದ್ದುಗೆ, ಶ್ರೀ ಬಸವಣ್ಣ ಸ್ವಾಮಿಗಳವರ ಗದ್ದುಗೆ, ಶ್ರೀ ದೊಂದಪ್ಪ ಸ್ವಾಮಿಗಳವರ ಗದ್ದುಗೆ, ಶ್ರೀ ಕಿತ್ತೂರುಂಡಿ ಶಿವನಂಜಪ್ಪಸ್ವಾಮಿಗಳವರ


ಗದ್ದುಗೆ, ಶ್ರೀ ನಿಲಸೋಗೆ ಸ್ವಾಮಿಗಳವರ ಗದ್ದುಗೆ, ಶ್ರೀ ಶಿವಬಸವ ಸ್ವಾಮಿಗಳವರ ಗದ್ದುಗೆ -ಹೀಗೆ ಹಲವು ಗದ್ದುಗೆಗಳ ದರ್ಶನವನ್ನು ಮಾಡಬಹುದಾಗಿದೆ.

ಶ್ರೀಕ್ಷೇತ್ರದ ಮತ್ತೊಂದು ವೈಶಿಷ್ಟ್ಯವೆಂದರೆ ಎಲ್ಲಾ ಗದ್ದುಗೆಗಳ ಪೂಜಾ ಕೈಂಕರ್ಯ ನೆರವೇರಿದ ತದನಂತರದಲ್ಲಿ ಶ್ರೀ ಗುರುಮಲ್ಲೇಶ್ವರರ ಗದ್ದುಗೆಯ ಪೂಜಾ ಕೈಂಕರ್ಯ ನೆರವೇರುತ್ತದೆ. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಮಾತು ಇಲ್ಲಿ ಅಕ್ಷರಶಃ ಕಾರ್ಯಗತವಾಗಿದೆ. ಗದ್ದುಗೆಯನ್ನು ಒಂದು ಪ್ರದಕ್ಷಿಣೆ ಹಾಕಿಕೊಂಡು ಬಂದರೆ ಎಡಬದಿಯಲ್ಲಿ ಹಲವು ಸಾಲು ಸಾಲು ಗದ್ದುಗೆಗಳ ದರ್ಶನ ಮಾಡಬಹುದಾಗಿದೆ. ಎಲ್ಲ ಗದ್ದುಗೆಗಳು ಏಕರೂಪವಾಗಿವೆ. ಯಾವುದೇ ತರತಮ ಇಲ್ಲಿಲ್ಲ. ರಚನೆಯಲ್ಲಿಯೂ ಕೂಡ ಸರಳತೆಯೇ ಸಂದಿದೆ. ಗದ್ದುಗೆಯ ಮೇಲೆ ಒಂದು ವಸ್ತ್ರವನ್ನು ಹಾಸಿ ಅದರ ಮೇಲೆ ಹೂವಿನ ಅಲಂಕಾರವನ್ನು ಮಾಡಲಾಗಿದೆ. ಇದೇ ಪರಿಪಾಠ ಎಲ್ಲ ಗದ್ದುಗೆಗಳಿಗೂ.

ಎಡಬದಿಯಲ್ಲಿ ವಿಶಾಲವಾದ ಸಭಾಭವನವಿದೆ. ಈ ಸಭಾಭವನದ ಗೋಡೆಯ ಮೇಲೆ ಶ್ರೀ ಗುರುಮಲ್ಲೇಶ್ವರರ ಹಲವು ಪವಾಡಗಳನ್ನು ಹಾಗೂ ಬಸವಾದಿ ಶರಣರ ಚಿತ್ರಗಳನ್ನು ಬರೆಸಲಾಗಿದೆ. ಇವುಗಳನ್ನು ಒಂದು ಸುತ್ತು ನೋಡುತ್ತಾ ಬಂದರೆ ಹನ್ನೆರಡನೇ ಶತಮಾನದ ಅನುಭವ ಮಂಟಪ ಇದೇ ಎಂಬ ಅನುಭವ ನಮಗಾಗುತ್ತದೆ. ಇನ್ನು ಬಲಬದಿಯಲ್ಲಿ ಪ್ರಸಾದ ನಿಲಯವಿದೆ. ಶ್ರೀ ಗುರುಮಲ್ಲೇಶ್ವರರು ಹಚ್ಚಿದ ಪ್ರಸಾದ ಕುಂಡದ ಬೆಂಕಿ ಆರದೆ ಇನ್ನೂ; ಬಂದಂತಹ ಭಕ್ತಾದಿಗಳಿಗೆ ಪ್ರಸಾದವನ್ನು ನೀಡುತ್ತಿದೆ. ಅಲ್ಲಿರುವ ಕಂಥೆಭಿಕ್ಷದ ಕಾಯಕದ ಶ್ರೀ ಪ್ರಸಾದ ದೇವರು ಬಂದಂತಹ ಭಕ್ತಾದಿಗಳಿಗೆ




ಮಹಾತ್ಮ ಶ್ರೀ ಗುರುಮಲ್ಲೇಶ್ವರರ ಗದ್ದುಗೆ



ಕಂಥೆಭಿಕ್ಷಕ್ಕೆ ತೆರಳುತ್ತಿರುವ ಜಂಗಮರು

ಪ್ರಸಾದವನ್ನು ಉಣಬಡಿಸುವ ಕೈಂಕರ್ಯದಲ್ಲಿ ನಿರತರಾಗಿದ್ದಾರೆ. ಶ್ರೀಮಠದ ಪ್ರಸಾದವೆಂದರೆ ದೂರದೂರದ ಭಕ್ತರು ಬಯಸುವಂತಹ ಪರಮ ಪವಿತ್ರವಾದದ್ದು ಹಾಗೂ ಅಷ್ಟೇ ರುಚಿಕಟ್ಟದ್ದಾಗಿದೆ.

ಶ್ರೀ ಗುರುಮಲ್ಲೇಶ್ವರ ಮಠವು ಕಂಥೆಭಿಕ್ಷದ ಕಾಯಕಕ್ಕೆ ಕಾರಣವಾಗಿದೆ. ಶ್ರೀ ಗುರುಮಲ್ಲೇಶ್ವರರು ಪ್ರಾರಂಭಿಸಿದ ಕಂಥೆಭಿಕ್ಷ ನೂರಾರು ವರ್ಷಗಳು ಸಂದರೂ ಇಂದಿಗೂ ಮೈಸೂರು, ಚಾಮರಾಜನಗರ, ರಾಮನಗರ ಮಂಡ್ಯ ಮೊದಲಾದ ಜಿಲ್ಲೆಗಳಲ್ಲಿ ವ್ಯಾಪಿಸಿರುವ ಹಲವು ಕಂಥೆ ಭಿಕ್ಷದ ಮಠಗಳಲ್ಲಿ ಅನೂಚಾನವಾಗಿ ನಡೆಯುತ್ತಿದೆ. ಶರಣರು ಕಾಯಕ ಮತ್ತು ದಾಸೋಹಕ್ಕೆ ವಿಶೇಷವಾದ ಮಹತ್ವವನ್ನು ಕೊಟ್ಟಿದ್ದರು. ಇದು ಸರ್ವಸಮಾನತೆಯನ್ನು ಸಾರುವ ತತ್ವವಾಗಿದೆ. ಕಾಯಕದಲ್ಲಿ ನಿರತನಾದರೆ ಗುರು - ಲಿಂಗ - ಜಂಗಮಗಳನ್ನಾದರೂ ಮರೆಯಬೇಕು. ಏಕೆಂದರೆ ಕಾಯಕವೇ ಕೈಲಾಸ ಎಂದು ಆಯ್ದಕ್ಕಿ ಮಾರಯ್ಯನವರು ತಿಳಿಸಿದ್ದಾರೆ. ಅಂತಹ ಕಾಯಕದಿಂದ ಬಂದದ್ದನ್ನು ತಾನೇ ಸ್ವೀಕರಿಸದೆ ಜಂಗಮಕ್ಕೆ, ಅಂದರೆ ಸಮಾಜಕ್ಕೆ ಅರ್ಪಿಸಿ ಉಳಿದದ್ದನ್ನು ತಾನು ಸ್ವೀಕರಿಸಬೇಕು. ಈ ರೀತಿ ಹನ್ನೆರಡನೇ ಶತಮಾನದಲ್ಲಿ ಶರಣರು ಪ್ರತಿಪಾದಿಸಿದ ಕಾಯಕತತ್ವವನ್ನು ಮತ್ತೊಮ್ಮೆ ಹತ್ತೊಂಬತ್ತನೇ ಶತಮಾನದಲ್ಲಿ ನಿಜಾಚರಣೆಗೆ ತಂದವರು ಮಹಾತ್ಮ ಗುರುಮಲ್ಲೇಶ್ವರರು. ಸತ್ಯಶುದ್ಧ ಕಾಯಕದ ಬಗ್ಗೆ ಅಪಾರವಾದ ಅಭಿಮಾನವನ್ನಿಟ್ಟುಕೊಂಡಿದ್ದ ಗುರುಮಲ್ಲೇಶ್ವರರು ಇದರ ನಿಜಾಚರಣೆಗೆ ಆಯ್ಕೆ ಮಾಡಿಕೊಂಡಿದ್ದು, ತಮ್ಮ ಗುರುಗಳಾದ ಬೆತ್ತಲೆಗುಂಡೆ ಸ್ವಾಮಿಗಳವರು



ಘಂಟೆ ಬಾರಿಸಿ ಪ್ರಸಾದಕ್ಕೆ ಕರೆಕೊಡುವುದು




ಅನುಗ್ರಹಿಸಿದ "ಕಂಥೆಭಿಕ್ಷದ ಕಾಯಕ". ಜಂಗಮರಾದವರು ತಮ್ಮ ಮುಖವು ಸರಿಯಾಗಿ ಕಾಣದ ಹಾಗೆ ತಲೆಯನ್ನು ಸೇರಿದಂತೆ ದೇಹವನ್ನೆಲ್ಲಾ ಮುಚ್ಚುವಂತೆ ಕಂಬಳಿಯ ಗೋಟೆಯನ್ನು ಹಾಕಿಕೊಂಡು, ಎಡಗೈಯ ಹೆಗಲಿಗೆ ಪಾತ್ರೆ ಸಹಿತ ಜೋಳಿಗೆಯನ್ನೇರಿಸಿ, ಕಾಲಿಗೆ ಜಂಗುಕಟ್ಟಿ, ಕೈಯಲ್ಲಿ ಗೆಜ್ಜೆ ಸದ್ದು ಮಾಡುವ ಕೋಲನ್ನು ಹಿಡಿದು ಹೆಜ್ಜೆಹೆಜ್ಜೆಗೂ ಮಂತ್ರಪಠಣ ಮಾಡುತ್ತಾ ಮನೆಮನೆಗೆ ಹೋಗಿ "ಹರ ಹರ ಶಿವ ಶಿವಾ ಶಿವಗಣಂಗಳ ಪರಮ ಕಂಥೆಭಿಕ್ಷ"ವೆಂದು ಆದರದಿ ಬೇಡುತ್ತಾರೆ. ಮನೆಯವರು ತಾವು ಮಾಡಿದ ಅಡುಗೆಯಲ್ಲಿ ಮೊದಲ ಭಾಗವನ್ನು ಬಂದಂತಹ ಜಂಗಮರಿಗೆ ನೀಡುತ್ತಾರೆ. ಹೀಗೆ ಸಂಗ್ರಹಿಸಿ ತಂದ ಪ್ರಸಾದವನ್ನು ಜಂಗಮರು ಎಲ್ಲ ಗದ್ದುಗೆಗಳಿಗೆ ನೈವೇದ್ಯ ಮಾಡಿ ಕೊನೆಯಲ್ಲಿ ಗುರುಮಲ್ಲೇಶ್ವರರ ಗದ್ದುಗೆಗೆ ನೈವೇದ್ಯ ಮಾಡಿ, ಗಂಟೆ ಬಾರಿಸುತ್ತಾರೆ. ಆಗ ಮಠದಲ್ಲಿ ಪ್ರಸಾದ ಸಿದ್ಧವಾಗಿದೆ ಎಂದು ತಿಳಿಯ ಬೇಕು. ತಾವು ತಂದ ಕಂಥೆಭಿಕ್ಷದ ಜೊತೆಗೆ ಮಠದಲ್ಲಿ ಸಿದ್ಧವಾದ ಪ್ರಸಾದವನ್ನು ಬಂದಂತಹ ಭಕ್ತಾದಿಗಳಿಗೆ ನೀಡುತ್ತಾರೆ. ಇಂದಿಗೂ ಶ್ರೀಮಠದಲ್ಲಿ ಮಧ್ಯಾಹ್ನ ಹಾಗೂ ಸಂಜೆ ಎರಡು ಬಾರಿ ಕಂಥೆಭಿಕ್ಷ ಕಾಯಕದ ಪರಿಪಾಠವಿದೆ.


ಕಂಥೆಭಿಕ್ಷಕ್ಕೆ ಹೋಗುವ ಜಂಗಮರು ಯಾರನ್ನೂ ಕಣ್ಣೆತ್ತಿ ನೋಡುವಂತಿಲ್ಲ. ಈ ಬಗೆಗೆ ಒಂದು ಐತಿಹ್ಯವಿದೆ. ಒಮ್ಮೆ ಗುರುಮಲ್ಲೇಶ್ವರರಿದ್ದಾಗ ಸಿದ್ಧಪ್ಪನೆಂಬುವ ರೊಬ್ಬರು ಕಂಥೆಭಿಕ್ಷಕ್ಕೆಂದು ಒಂದು ಮನೆಗೆ ಹೋಗಿದ್ದರು. ಆ ಮನೆಯೊಡತಿ ಸ್ನಾನ ಮುಗಿಸಿಕೊಂಡು ಅರ್ಧಂಬರ್ಧ ಸೀರೆಯುಟ್ಟು ಆತುರದಲ್ಲಿ ಜಂಗಮರಿಗೆ ಪ್ರಸಾದ ನೀಡುತ್ತಾಳೆ. ಆಗ ಸಿದ್ಧಪ್ಪನವರು ಆ ಹೆಣ್ಣುಮಗಳನ್ನು ಕಿರುಗಣ್ಣಿನಿಂದ ನೋಡಿದಾಗ ಅವರ ಮೀಸೆಯ ಒಂದು ಭಾಗ ಅದುರುತ್ತದೆ. ಇದನ್ನು ತಿಳಿದ ಗುರುಮಲ್ಲೇಶ್ವರರು ತೀಕ್ಷ್ಣವಾಗಿ ಮುಖವನ್ನೊಮ್ಮೆ ನೋಡುತ್ತಾರೆ. ಸಿದ್ಧಪ್ಪನ ಮೀಸೆ ಪೂರ್ಣವಾಗಿ ಉದುರಿಹೋಗುತ್ತದೆ. ಆದ್ದರಿಂದ ಕಂಥೆಭಿಕ್ಷಕ್ಕೆ ಹೋಗುವ ಜಂಗಮರ ಮನಸ್ಸು

ನಿರ್ಮಲವಾಗಿದ್ದು ಏಕಾಗ್ರತೆಯಿಂದ ಕೂಡಿರಬೇಕು. ಕಂಥೆಭಿಕ್ಷವನ್ನು ನೀಡುವ ಗೃಹಸ್ಥರು ಕೂಡ ದಾಸೋಹಂ ಭಾವವನ್ನು ಬೆಳೆಸಿಕೊಂಡಿರುತ್ತಾರೆ. ನಾನು ಎನ್ನುವ ಅಹಂಕಾರವನ್ನು ಅಳಿದು, ನಾನು ಕೇವಲ ಸೇವಕ ಎನ್ನುವ, ದಾಸ ಎನ್ನುವ ಭಾವ ಅವರಲ್ಲಿ ಜಾಗೃತ ವಾಗುತ್ತದೆ. ಜೊತೆಗೆ ಉಳ್ಳವರು ಮತ್ತು ಇಲ್ಲದವರು ಎಂಬ ಅಂತರ ದೂರವಾಗಿ ಸರ್ವಸಮಾನತೆ ತಾನೇ ತಾನಾಗಿ ಸಾಧ್ಯವಾಗುತ್ತದೆ. ಇಂತಹ ಪರಮ ಪವಿತ್ರವಾದ ಕಂಥೆ ಭಿಕ್ಷದ ಕಾಯಕ ಶ್ರೀ ಗುರುಮಲ್ಲೇಶ್ವರ ಮಠದ ಪರಂಪರೆಯಲ್ಲಿ ನಿರಂತರವಾಗಿ ಸಾಗುತ್ತಿದೆ.

ಶ್ರೀ ಗುರುಮಲ್ಲೇಶ್ವರರ ಗದ್ದುಗೆಯ ಎಡಬದಿಯಲ್ಲಿ ಇಂದಿಗೂ ಶ್ರೀ ಗುರುಮಲ್ಲೇಶ್ವರರು ಬಳಸುತ್ತಿದ್ದ ಕಂಥೆ ಭಿಕ್ಷದ ಜೋಳಿಗೆ, ಪೈಜಾಮ, ರುದ್ರಾಕ್ಷಿ ಹಾಗೂ ಇತರ ವಸ್ತುಗಳನ್ನು ಅತ್ಯಂತ ಜೋಪಾನವಾಗಿ ಇಡಲಾಗಿದೆ. ಬಂದಂತಹ ಭಕ್ತಾದಿಗಳು ಗದ್ದುಗೆಯ ದರ್ಶನ ಮಾಡುವುದರ ಜೊತೆಗೆ ಶ್ರೀ ಗುರುಮಲ್ಲೇಶ್ವರರು ಬಳಸುತ್ತಿದ್ದ ಹಲವು ವಸ್ತುಗಳನ್ನು ದರ್ಶಿಸುವ ಪುಣ್ಯ ಅವಕಾಶವನ್ನು ಪಡೆದಿದ್ದಾರೆ. ಜೊತೆಗೆ ಶ್ರೀ ಗುರುಮಲ್ಲೇಶ್ವರರು ತಮ್ಮ ಅಂಗಸಾಧನೆಗಾಗಿ ಉಪಯೋಗಿಸುತ್ತಿದ್ದ ಸಾಧನಾ ಕಲ್ಲುಗಳನ್ನು ಇಂದಿಗೂ ಕಾಣಬಹುದಾಗಿದೆ.

ದೇವನೂರು ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ್ವರರು ವಾಸಿಸುತ್ತಿದ್ದ ಹಳೇಮಠವಿದೆ. ಇಲ್ಲಿ ಗುರುಗಳು ಬಳಸುತ್ತಿದ್ದ ಹಲವು ವಸ್ತುಗಳು, ಸ್ನಾನದ ಕಡಾಯಿಗಳು, ಯೋಗದ ಅಂಗಸಾಧನಗಳು ಮೊದಲಾದವುಗಳನ್ನು ಕಾಣಬಹುದಾಗಿದೆ. ಆದರೆ ಇವುಗಳೆನ್ನೆಲ್ಲಾ ಅತ್ಯಂತ ವ್ಯವಸ್ಥಿತವಾಗಿ ಸಂರಕ್ಷಿಸುವ ಕಾರ್ಯ ಆಗಬೇಕಾಗಿದೆ. ಒಂದು ಉತ್ತಮವಾದ ವಸ್ತುಸಂಗ್ರಹಾಲಯ ಸ್ಥಾಪಿಸಿ, ಶ್ರೀ ಗುರುಮಲ್ಲೇಶ್ವರರು ಬಳಸುತ್ತಿದ್ದ ಎಲ್ಲಾ ವಸ್ತುಗಳನ್ನು ಒಂದೆಡೆ ಸಂಗ್ರಹಿಸಿ ಸಂರಕ್ಷಿಸುವ ಕಾರ್ಯ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಧರ್ಮಸ್ಥಳದ ಶ್ರೀ ಮಂಜೂಷ ವಸ್ತುಸಂಗ್ರಹಾಲಯ ಅಲ್ಲದೆ ಮೈಸೂರಿನ ಸುತ್ತೂರಿನಲ್ಲಿರುವ ವಸ್ತುಸಂಗ್ರಹಾಲಯಗಳು ಮಾದರಿಯಾಗಬಲ್ಲವಾಗಿವೆ. ಇದೇ ರೀತಿ ಸಂರಕ್ಷಣೆ ಮಾಡಿ ಭಕ್ತಾದಿಗಳಿಗೆ ದರ್ಶನ ಭಾಗ್ಯ ಕಲ್ಪಿಸಿಕೊಡಬೇಕಾಗಿದೆ.







ದೇವನೂರಿನ ಹಳೇಮಠದಲ್ಲಿರುವ ಶ್ರೀ ಗುರುಮಲ್ಲೇಶ್ವರರು ಬಳಸುತ್ತಿದ್ದ ವಸ್ತುಗಳು











ಶ್ರೀ ಗುರುಮಲ್ಲೇಶ್ವರರು ಪವಾಡ ಪುರುಷರು. ಅವರು ಮಾಡಿದ ಪವಾಡಗಳಲ್ಲಿ ಕೆಲವನ್ನು ಉಲ್ಲೇಖಿಸಬಹುದಾಗಿದೆ. ಮೈಸೂರಿನ ಮಹಲಿಂಗೇಶ್ವರ ಮಠದಲ್ಲಿ ಶ್ರಾವಣ ಮಾಸದ ಪ್ರಯುಕ್ತ 'ಒಡೆಹಲ್ಲ ಬಂಕಯ್ಯ'ನೆಂಬ ಶರಣನನ್ನು ಕುರಿತು ಪ್ರವಚನ ನೀಡುತ್ತಿದ್ದರು. ಆಗ ಪ್ರವಚನಕಾರರು ಅಂತಹ ಮಹಾನ್ ಪವಾಡಪುರುಷರು ಇಂದು ಎಲ್ಲಿ ಕಾಣಬರುವರು ಎಂದು ಪ್ರಶ್ನಿಸಿದರು. ಆ ಕೂಡಲೇ ಶ್ರೀ ಗುರುಮಲ್ಲೇಶ್ವರರು ತಮ್ಮ ಯೋಗವಿದ್ಯೆಯಿಂದ ಕರುಳ ಪವಾಡವನ್ನು ಮೆರೆಯುತ್ತಾರೆ. ಯೋಗದಲ್ಲಿ ಸಾಮಾನ್ಯವಾಗಿ ಕರುಳನ್ನು ಶುದ್ಧಮಾಡಿಕೊಳ್ಳುವ ವಿಧಾನವಿದೆ. ಶಿರಡಿ ಸಾಯಿಬಾಬಾ ಅವರು ಕೂಡ ಇಂತಹ ಪವಾಡವನ್ನು ಮೆರೆದ ಉಲ್ಲೇಖವಿದೆ. ಅಂತೆಯೇ ಮಹಾ ಮಹಿಮಾನ್ವಿತರಾದ ಶ್ರೀ ಗುರುಮಲ್ಲೇಶ್ವರರು ತಮ್ಮ ಕರುಳ ಪವಾಡದಿಂದ ಜನರಲ್ಲಿ ಜಾಗೃತಿಯನ್ನುಂಟುಮಾಡಿರುತ್ತಾರೆ.

ಮೈಸೂರಿನಲ್ಲಿ ನೆಲೆಸಿದ್ದ ಗುರುಮಲ್ಲೇಶ್ವರರು ದೇವನೂರಿಗೆ ಬಂದು ನೆಲೆಸಿದ್ದು ಕೂಡ ಒಂದು ಪವಾಡವೇ. ಹೇಗೆಂದರೆ ದೇವನೂರು ಗ್ರಾಮದ ಪಟೇಲ್ ಸುಬ್ಬೇಗೌಡರ ಧರ್ಮಪತ್ನಿ ಶಂಕರಮ್ಮನವರಿಗೆ ಬಹಳ ದಿನಗಳಿಂದ ಒಂದು ಬ್ರಹ್ಮಪಿಶಾಚಿ ಹಿಡಿದಿತ್ತು. ಏನು ಮಾಡಿದರೂ ಅದರಿಂದ ಬಿಡುಗಡೆಯಾಗಿರಲಿಲ್ಲ. ಆಗ ಪಟೇಲ್ ಸುಬ್ಬೇಗೌಡರು ಶ್ರೀ ಗುರುಮಲ್ಲೇಶ್ವರರ ಪವಾಡವನ್ನು ತಿಳಿದು ಮೈಸೂರಿಗೆ ಧಾವಿಸಿ ತಮ್ಮ ಗ್ರಾಮಕ್ಕೆ ಬಂದು ಬ್ರಹ್ಮಪಿಶಾಚಿ ಯಿಂದ ಬಿಡುಗಡೆ ಮಾಡಬೇಕೆಂದು ಅಂಗಲಾಚಿ ಬೇಡುತ್ತಾರೆ. ಅವರ ಪ್ರಾರ್ಥನೆಯನ್ನು ಮನ್ನಿಸಿದ ಶ್ರೀ ಗುರುಮಲ್ಲೇಶ್ವರರು ಮೈಸೂರನ್ನು ತೊರೆದು ದೇವನೂರಿಗೆ ಬಂದು ತಮ್ಮ ದಿವ್ಯಶಕ್ತಿಯಿಂದ ಬ್ರಹ್ಮಪಿಶಾಚಿಯನ್ನು ಓಡಿಸಿ ಪಟೇಲ್ ಸುಬ್ಬೇಗೌಡರನ್ನು ಉದ್ಧರಿಸುತ್ತಾರೆ. ಈ ಸುದ್ದಿಯನ್ನು ತಿಳಿದ ಸುತ್ತಮುತ್ತಲ ಗ್ರಾಮಸ್ಥರೆಲ್ಲರೂ ಶ್ರೀ ಗುರು ಮಲ್ಲೇಶ್ವರರ ದರ್ಶನ ಮಾಡುತ್ತಾರೆ. ಅವರ ಭಕ್ತರ ಸಂಖ್ಯೆ ಹೆಚ್ಚಾದಂತೆ ಪಟೇಲ್ ಸುಬ್ಬೇಗೌಡರು ಪೂಜ್ಯರ ತಂಗುವಿಕೆಗೆ ಒಂದು ಮನೆಯನ್ನು ವ್ಯವಸ್ಥೆ ಮಾಡಿ ದೇವನೂರಿನಲ್ಲೇ ನೆಲೆಸುವಂತೆ ಪ್ರಾರ್ಥಿಸುತ್ತಾರೆ.

ಒಮ್ಮೆ ಶ್ರೀ ಗುರುಮಲ್ಲೇಶ್ವರರು ಮೈಸೂರು ಜಿಲ್ಲೆ ನರಸೀಪುರ ತಾಲ್ಲೂಕಿನ ಮೂಗೂರಿನಲ್ಲಿ ಸಂಚಾರ ಮಾಡುತ್ತಿರುತ್ತಾರೆ. ಆ ಊರಿನ ಮಾದಪ್ಪನೆಂಬ ಭಕ್ತನ ಮನೆಗೆ ದಯಮಾಡಿಸುತ್ತಾರೆ. ಗುರುಗಳ ಜೊತೆಗೆ ಹಲವಾರು ಜನ ಶಿಷ್ಯರೂ ಕೂಡ ಬರುತ್ತಾರೆ. ಆದರೆ ಇಷ್ಟು ಜನಕ್ಕೆ ಹೇಗೆ ಪ್ರಸಾದ ವ್ಯವಸ್ಥೆ ಮಾಡುವುದು ಎಂದು ತೋಚದಾದ ಮಾದಪ್ಪನನ್ನು ಕಂಡು 'ಗುಳಿ ತುಂಬಾ ಜೋಳ ತುಂಬಿಕೊಂಡು, ಅಡುಗೆ ಮಾಡಲು ಜೋಳವಿಲ್ಲವೆಂದು ಹೇಳುತ್ತೀಯಾ ಮಾದಪ್ಪ, ತೆಗೀ ನಿನ್ನ ಗುಳೀನ ನೋಡೋಣ' ಎನ್ನುತ್ತಾರೆ. ಆಶ್ಚರ್ಯವೆಂದರೆ ಖಾಲಿಯಿದ್ದ ಗುಳಿ ತುಂಬಾ ಜೋಳ ಕಾಣಿಸುತ್ತದೆ. ಗುಳಿ ತುಂಬಿದ ಜೋಳದಿಂದ ಮಾದಪ್ಪ ಪ್ರಸಾದ ಸಿದ್ಧಪಡಿಸಿ ಬಂದ ಭಕ್ತಾದಿಗಳಿಗೆಲ್ಲಾ ಉಣಬಡಿಸುತ್ತಾನೆ.

ಒಮ್ಮೆ ಚಾಮರಾಜನಗರ ತಾಲ್ಲೂಕಿನ ಕುದೇರು ಗ್ರಾಮದ ಕಿನ್ನಾರಿ ಸುಬ್ಬಣ್ಣ ಮತ್ತು ಅವರ ಧರ್ಮಪತ್ನಿ ಪಾರ್ವತಮ್ಮನವರ ಕೋರಿಕೆಯನ್ನು ಮನ್ನಿಸಿ ಕುದೇರಿಗೆ ಶ್ರೀ ಗುರುಮಲ್ಲೇಶ್ವರರು ದಯಮಾಡಿಸುತ್ತಾರೆ. ಗುರುಗಳಿಗೆಂದೇ ದಂಪತಿಗಳು ಹೋಳಿಗೆಯನ್ನು ಸಿದ್ಧಪಡಿಸುತ್ತಾರೆ. ಆದರೆ ಬಂದ ಭಕ್ತಾದಿಗಳ ಸಂಖ್ಯೆ ಹೆಚ್ಚಾಗುತ್ತದೆ. ಎಲ್ಲರಿಗೂ ಹೋಳಿಗೆಯನ್ನು ಹೇಗೆ ಬಡಿಸುವುದು ಎಂಬುದು ದಂಪತಿಗಳ ಚಿಂತೆ. ಈ ಎಲ್ಲವನ್ನು ಬಲ್ಲ ಶ್ರೀ ಗುರುಮಲ್ಲೇಶ್ವರರು 'ತತ್ತಾಮ್ಮಾ ತಣಿಗೇನ, ನೀಡಮ್ಮಾ ಪ್ರಸಾದಾನ' ಎನ್ನುತ್ತಾರೆ. ವಿಧಿಯಿಲ್ಲದೆ ಪಾರ್ವತಮ್ಮನವರು ಎಲ್ಲ ಪದಾರ್ಥಗಳನ್ನು ಗುರುಗಳ ಮುಂದೆ ಇಟ್ಟು ನಮಸ್ಕರಿಸಿ ಬಡಿಸಲು ಪ್ರಾರಂಭಿಸುತ್ತಾರೆ. ಆಶ್ಚರ್ಯವೆಂದರೆ ಬಂದು ಸೇರಿದ ಎಲ್ಲ ಭಕ್ತಾದಿಗಳಿಗೂ ಹೋಳಿಗೆ ಪ್ರಸಾದವಾಗುತ್ತದೆ. ಅದನ್ನು ಕಂಡು ದಂಪತಿಗಳಿಬ್ಬರೂ ಆಶ್ಚರ್ಯಚಕಿತರಾದಾಗ ಗುರುಗಳು "ಈಗೇನ್ಮಹಾ ಆಗಿರೋದು, ಈ ಗುರುಮಲ್ಲಯ್ಯ ಕಣ್ಮುಚ್ಚಿಕೊಂಡು ಕೂತ್ಕೊಳ್ತಾನಲ್ಲಾ ಆಗ ನೋಡಿ, ಜನ ಹಾಸಿದ ಬಟ್ಟಲನ್ನು (ಎಲೆಯನ್ನು) ಎತ್ತದೆ ಉಣ್ಣದೆ" ಎಂಗರು. ಅವರು ಹೇಳಿದ ಮಾತು ಇಂದಿಗೂ ಶ್ರೀಮಠದಲ್ಲಿ ನಡೆಯುತ್ತಿರುವುದು ಪವಾಡಸದೃಶವಾದ ಘಟನೆಯಲ್ಲದೆ ಮತ್ತೇನೂ ಅಲ್ಲ.

ಗುಂಡ್ಲುಪೇಟೆ ತಾಲ್ಲೂಕು ಕುಲ್ಗಾಣದ ಗ್ರಾಮದವರು ಎನ್ನಲಾದ ಪುಟ್ಟಮ್ಮ ನೆಂಬುವರು ಮೈಸೂರಿನಲ್ಲಿ ನೆಲೆಸಿ ವಾರಾಂಗನೆ ಪುಟ್ಟಮ್ಮನೆಂದು ಹೆಸರು ಮಾಡಿರುತ್ತಾರೆ. ಒಮ್ಮೆ ಶ್ರೀಗಳು ಪುಟ್ಟಮ್ಮನವರ ಮನೆಗೆ ಹೋಗಿ ಪ್ರಸಾದ ಸಿದ್ಧಪಡಿಸಲು ಹೇಳಿ ಸಂಚಾರಕ್ಕೆ ಹೊರಡುತ್ತಾರೆ. ಅವರು ಬರುವುದು ತುಂಬಾ ದಿನಗಳಾಗುತ್ತವೆ. ಆದರೆ ಪುಟ್ಟಮ್ಮ ಪ್ರಸಾದವನ್ನು ಸಿದ್ಧಪಡಿಸಿ ಗುರುಗಳ ಆಗಮನಕ್ಕಾಗಿ ಕಾಯುತ್ತಾಳೆ. ತಿಂಗಳುಗಳ ಮೇಲೆ ಶ್ರೀ ಗುರುಮಲ್ಲೇಶ್ವರರು ಬರುತ್ತಾರೆ. ಅವಳು ಮಾಡಿಟ್ಟ ಪ್ರಸಾದದ ಪಾತ್ರೆಗಳ ಮುಚ್ಚಳವನ್ನು ತೆಗೆದರೆ ಆಗ ಮಾಡಿದ ಪದಾರ್ಥಗಳಂತೆ ಬಿಸಿಬಿಸಿಯಾಗಿ ಸ್ವಚ್ಛವಾಗಿರುತ್ತವೆ. ಇದನ್ನು ಕಂಡ ಪುಟ್ಟಮ್ಮನವರಿಗೆ ಇದೆಲ್ಲ ಶ್ರೀ ಗುರುಮಲ್ಲೇಶ್ವರರ ಪವಾಡವೆಂದು ತಿಳಿದು ಭಕ್ತಿಯಿಂದ ನಮಸ್ಕರಿಸಿ ಪ್ರಸಾದವನ್ನು ಶ್ರೀ ಗುರುಮಲ್ಲೇಶ್ವರರಿಗೆ ಅರ್ಪಿಸಿ ಬಂದ ಭಕ್ತಾದಿಗಳಿಗೆ ಉಣಬಡಿಸುತ್ತಾಳೆ.

ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಗ್ರಾಮದ ಚಂದ್ರಪ್ಪ ಮತ್ತು ಇವರ ಧರ್ಮಪತ್ನಿ ಹೊನ್ನಮ್ಮ ಇವರಿಗೆ ಸಂಗಪ್ಪನೆಂಬ ಮಗನಿದ್ದ. ಆತ ಜ್ವರಪೀಡಿತನಾಗಿ ಮಲಗುತ್ತಾನೆ. ಆಗ ದಂಪತಿಗಳಿಬ್ಬರು ಗುರುಮಲ್ಲೇಶ್ವರರನ್ನು ಕಂಡು ತಮ್ಮ ಊರಿಗೆ ಬಂದು ತಮ್ಮ ಮಗನನ್ನು ಕಾಪಾಡಬೇಕೆಂದು ಪ್ರಾರ್ಥಿಸುತ್ತಾರೆ. ದೂರದಲ್ಲಿದ್ದ ಗುರುಮಲ್ಲೇಶ್ವರರು ಬರುವಷ್ಟರಲ್ಲಾಗಲೇ ಸಂಗಪ್ಪ ತೀರಿಕೊಳ್ಳುತ್ತಾನೆ. ಅವನ ಮನೆಯವರು ಅಂತ್ಯಸಂಸ್ಕಾರಕ್ಕಾಗಿ ರುದ್ರಭೂಮಿಗೆ ತೆಗೆದುಕೊಂಡು ಹೋಗಿರುತ್ತಾರೆ. ಆಗ ಅಲ್ಲಿಗೆ ದಯಮಾಡಿಸಿದ ಶ್ರೀ ಗುರುಮಲ್ಲೇಶ್ವರರು ಏಕದೃಷ್ಟಿಯಿಂದ ನೋಡುತ್ತಾ

ಸಂಗಪ್ಪನ ಮೇಲೆ ತಮ್ಮ ಅಮೃತಹಸ್ತವನ್ನು ಇಡುತ್ತಾರೆ. ಮಲಗಿದ್ದ ಶಿಶು ಎದ್ದೇಳುವಂತೆ ಸಂಗಪ್ಪ ಮೇಲೆದ್ದು ಶ್ರೀ ಗುರುಮಲ್ಲೇಶ್ವರರಿಗೆ ನಮಸ್ಕರಿಸುತ್ತಾನೆ.

ಈ ಎಲ್ಲ ಪವಾಡಗಳಿಗಿಂತಲೂ ಅತ್ಯಂತ ಮುಖ್ಯವಾದದ್ದು, ಯಾವ ಅಧಿಕಾರಕ್ಕೂ ಮಣಿಯದೆ ಜನಪರವಾದ ಕಾಯಕ ದಾಸೋಹದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಭಕ್ತಾದಿಗಳಲ್ಲಿ ಧರ್ಮದ ಬಗೆಗೆ ಜಾಗೃತಿಯನ್ನುಂಟುಮಾಡಿದ್ದು. ಮೈಸೂರು ಪ್ರಾಂತ್ಯದ ತುಂಬೆಲ್ಲಾ ಸಂಚಾರ ಮಾಡಿ ಕಂಥೆಭಿಕ್ಷೆ ಮಠಗಳನ್ನು ಸ್ಥಾಪಿಸಿ, ಬಸವಾದಿ ಶರಣರ ಜೀವನ ಸಂದೇಶಗಳನ್ನು ಜನಮಾನಸದಲ್ಲಿ ಬಿತ್ತಿ, ಅನುಷ್ಠಾನಗೊಳಿಸಿದ ಕೀರ್ತಿ ಪೂಜ್ಯ ಶ್ರೀ ಗುರುಮಲ್ಲೇಶ್ವರರಿಗೆ ಸಲ್ಲುತ್ತದೆ. ಹನ್ನೆರಡನೇ ಶತಮಾನದ ತರುವಾಯ ಶ್ರೀ ಸಿದ್ಧಲಿಂಗೇಶ್ವರರ ನೇತೃತ್ವದಲ್ಲಿ ನಡೆದ ಚಳುವಳಿಯಂತೆಯೇ ೧೮-೧೯ನೇ ಶತಮಾನದಲ್ಲಿ ಪೂಜ್ಯ ಶ್ರೀ ಗುರುಮಲ್ಲೇಶ್ವರರು ಬಸವ ಧರ್ಮವನ್ನು ಪೊರೆದು ಸಂರಕ್ಷಿಸಿದ ಹಿರಿಮೆ ಇವರದು.

ಶ್ರೀ ಗುರುಮಲ್ಲೇಶ್ವರರ ಮಹಿಮೆಯನ್ನು ತಿಳಿದ ಮೈಸೂರಿನ ದೊರೆಗಳಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಒಮ್ಮೆ ಗುರುಗಳನ್ನು ತಮ್ಮ ಅರಮನೆಗೆ ಬರಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾರೆ. ಅರಮನೆಗೆ ದಯಮಾಡಿಸಿದ ಗುರುಗಳಿಗೆ ಮಹಾರಾಜರು ಭಕ್ತಿಪೂರ್ವಕವಾಗಿ ನಮಿಸಿ, ಉನ್ನತ ಆಸನದಲ್ಲಿ ಕೂರಿಸಿ, ಪೂಜಿಸಿ, ಚಿನ್ನದ ಹರಿವಾಣದಲ್ಲಿ ಮುತ್ತು, ರತ್ನ, ಚಿನ್ನಾಭರಣಗಳನ್ನು ತುಂಬಿ ಕಾಣಿಕೆಯಾಗಿ ಸ್ವೀಕರಿಸ ಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾರೆ. ಆಗ ಪೂಜ್ಯರು ನಕ್ಕು "ಮಹಾರಾಜರೇ ಇವು ಯಾರ ಸ್ವತ್ತು? ಪ್ರಜೆಗಳವು ಅಲ್ಲವೆ? ಇವು ನ್ಯಾಯವಾಗಿ ಅವರಿಗೇ ಸೇರಬೇಕೇ ವಿನಹ ನಮ್ಮಂಥವರಿಗಲ್ಲ" ಎಂದು ಅತ್ಯಂತ ನಯವಾಗಿ ತಿರಸ್ಕರಿಸುತ್ತಾರೆ. ಹಾಗಾದರೆ ನನ್ನ ಭಕ್ತಿಯ ಕಾಣಿಕೆಯನ್ನು ಅರ್ಪಿಸಲು ಏನು ಮಾಡಬೇಕೆಂದು ಕೇಳಿದಾಗ "ತನು ಮನಗಳನ್ನು ದಂಡಿಸಿ ತಮ್ಮ ಸತ್ಯಶುದ್ಧ ಕಾಯಕದಿಂದ ಸಂಪಾದಿಸಿ ತಂದದ್ದನ್ನು ಸ್ವೀಕರಿಸುತ್ತೇನೆ" ಎಂದು ತಿಳಿಸಿ ಅರಮನೆಯಿಂದ ಬೀಳ್ಕೊಳ್ಳುತ್ತಾರೆ. ಈ ಘಟನೆಯಿಂದ ಮನಃಪರಿವರ್ತಿತರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಮಾರುವೇಷದಲ್ಲಿ ಹೋಗಿ ಕಮ್ಮಾರನ ಕುಲುಮೆಯಲ್ಲಿ ಕಬ್ಬಿಣ ಬಡಿದು ಸಂಪಾದಿಸಿದ ಒಂದು ಹಾಗವನ್ನು (ನಾಲ್ಕಾಣೆ) ತಂದು ಗುರುಮಲ್ಲೇಶ್ವರರಿಗೆ ಭಕ್ತಿಯ ಕಾಣಿಕೆಯಾಗಿ ಮನಃಪೂರ್ವಕವಾಗಿ ಅರ್ಪಿಸುತ್ತಾರೆ. ಆಗ ಗುರುಮಲ್ಲೇಶ್ವರರು ಅದನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿ, ಕಣ್ಣಿಗೆ ಒತ್ತಿಕೊಂಡು ಇದು ನಿಜವಾಗಲೂ ಈ ಗುರುಮಲ್ಲಪ್ಪನಿಗೆ ಪ್ರಿಯವಾದದ್ದೆಂದು ಸ್ವೀಕರಿಸುತ್ತಾರೆ. ಮೈಸೂರಿನ ಮಹಾರಾಜರನ್ನು ಪರಿವರ್ತಿಸಿ ಜನಪರವಾದ ಚಿಂತನೆಗಳನ್ನು ಬೋಧಿಸಿ ರಾಜಗುರುಗಳೆಂದು ಮನ್ನಣೆಗೆ ಪಾತ್ರರಾದವರು ಶ್ರೀ ಗುರುಮಲ್ಲೇಶ್ವರರು. ಕೇವಲ ಅರಮನೆ-ಗುರುಮನೆಗಳಷ್ಟೇ ಅಲ್ಲ ಎಲ್ಲ ಭಕ್ತರನ್ನು ಉದ್ಧರಿಸಿ ಪವಾಡವನ್ನು ಮೆರೆದ ಅಘಟಿತ ಘಟನಾ ಮಹಿಮಾನ್ವಿತರು ಶ್ರೀ ಗುರುಮಲ್ಲೇಶ್ವರರು.

ಶ್ರೀ ಗುರುಮಲ್ಲೇಶ್ವರ ಸಂಪ್ರದಾಯದ ಭಿಕ್ಷದ (ದಾಸೋಹದ) ಶಾಖಾ ಮಠಗಳ ವಿವರ:

ನಂಜನಗೂಡು ತಾಲ್ಲೂಕು (ಮೈಸೂರು ಜಿಲ್ಲೆ): ೧) ದೇವನೂರು (ಮೂಲಮಠ ಮತ್ತು ಪ್ರಧಾನವಾದ ಮಠ) ೨) ಬದನವಾಳು ೩) ಬಸವಟ್ಟಿಗೆ ೪) ಭುಜಗೈಯನ ಹುಂಡಿ ೫) ಕುರಹಟ್ಟಿ ೬) ಹೆಜ್ಜಿಗೆ ೭) ಮುಳ್ಳೂರು ೮) ಹೊರಳವಾಡಿ ೯) ನಗರ್ಲೆ ೧೦) ತಾಯೂರು ೧೧) ನವಿಲೂರು ೧೨) ಹುಲ್ಲಹಳ್ಳಿ ೧೩) ಶಿರಮಳ್ಳಿ ೧೪) ಹಗಿನವಾಳು ೧೫) ಸೂರಳ್ಳಿ ೧೬) ಕಸುವಿನಹಳ್ಳಿ ೧೭) ಹೆಬ್ಯ ೧೮) ತುಂನೇರಳೆ ೧೯) ಹೊಸಕೋಟೆ ೨೦) ಆಲತ್ತೂರು ೨೧) ಹದಿನಾರು ೨೨) ಎಡಿಯಾಲ ೨೩) ಕುರುಬರ ಹುಂಡಿ ೨೪) ವರಳ್ಳಿಮಠ ೨೫) ಕೆ.ಆರ್.ಪುರ ೨೬) ಹರದನಹಳ್ಳಿ ೨೭) ನಂಜನಗೂಡು.

ಟೀ. ನರಸೀಪುರ ತಾಲ್ಲೂಕು (ಮೈಸೂರು ಜಿಲ್ಲೆ): ೧) ಮೂಗೂರು ೨) ಬುರುಬೂರು ೩) ಹಿರಿಯೂರು ೪) ಮಾಡ್ರಳ್ಳಿ ೫) ಕರೋಹಟ್ಟಿ ೬) ಬೆಟ್ಟದ ಹೊಸೂರು ೭) ತಡಿಮಾಲಂಗಿ ೮) ನೀಲಸೋಗೆ ೯) ಬಿಲ್ಗೆರೆ ಹುಂಡಿ ೧೦) ಜಾಲಹಳ್ಳಿ ೧೧) ದೊಡ್ಡನ ಹುಂಡಿ ೧೨) ತುಂಬಲ ೧೩) ಬಿನಕನಹಳ್ಳಿ ೧೪) ವೀರಪ್ಪ ಒಡೆಯರ ಹುಂಡಿ ೧೫) ಕೊತ್ತೇಗಾಲ ೧೬) ಆದಿಬೆಟ್ಟಹಳ್ಳಿ ೧೭) ಹೊಸ ಮಾಲಂಗಿ.

ಮಳವಳ್ಳಿ ತಾಲ್ಲೂಕು (ಮಂಡ್ಯ ಜಿಲ್ಲೆ): ೧) ಚಿಕ್ಕಬಾಗಿಲು ೨) ಹಣಕೊಳದ ಮಠ ೩) ನೆಲ್ಲೀಗೆರೆ ೪) ದೊಡ್ಡ ಬೂದಳ್ಳಿ ೫) ಕದಬೂಹಳ್ಳಿ ೬) ಕುಂದೂರು ಬೆಟ್ಟದ ಮಠ ೭) ಬೊಮ್ಮನಹಳ್ಳಿ ೮) ಬೊಪ್ಪೇಗೌಡನಪುರ ೯) ಬೆಳಕವಾಡಿ ೧೦) ಹಲಸಳ್ಳಿ ೧೧) ಸಾತನೂರು ೧೨) ಎಲೆಕುಂದೂರು ೧೩) ರಾಗಿಬೊಮ್ಮನಹಳ್ಳಿ ೧೪) ಹೊಸಹಳ್ಳಿ ೧೫) ದೊಡ್ಡಬೆರಳ್ಳಿ ೧೬) ಅಕ್ಕಾಬಾಗಿಲು.

ಕೊಳ್ಳೇಗಾಲ ತಾಲ್ಲೂಕು (ಚಾಮರಾಜನಗರ ಜಿಲ್ಲೆ): ೧) ಕಾಮಗೆರೆ ೨) ಚೆನ್ನಾಲಿಂಗನಹಳ್ಳಿ ೩) ಜಿ.ಕೆ. ಹೊಸೂರು ೪) ಆಲಹಳ್ಳಿ ೫) ರಾಮಾಪುರ ೬) ಬಂಡಹಳ್ಳಿ ೭) ತಿಮ್ಮರಾಜಪುರ ೮) ಮುಳ್ಳೂರು ೯) ತೇರಂಬಳ್ಳಿ ೧೦) ಕೆಂಪನ ಪಾಳ್ಯ ೧೧) ಲಕ್ಕರಸನಹುಂಡಿ ೧೨) ಹನೂರು ೧೩) ಉಗನೆ ೧೪) ಕೊಳ್ಳೇಗಾಲ ಟೌನ್ ೧೫) ತಡಿಮಾಲಂಗಿ ೧೬) ಚಿಲಕವಾಡಿ ೧೭) ಕುಣಗಳ್ಳಿ ಬೂದಿತಿಟ್ಟು ೧೮) ಕೊಂಗರಹಳ್ಳಿ ೧೯) ಮಂಗಲ ೨೦) ಆನಾಪುರ ೨೧) ವಡೆಯರ ಪಾಳ್ಯ ೨೨) ದೊಡ್ಡಹಿಂದುವಾಡಿ ೨೩) ಭೂತಾಳಪುರ ೨೪) ಅಲಗಾಪುರ ೨೫) ಕಜ್ಜಿ ಹುಂಡಿ ೨೬) ತೆಳ್ಳನೂರು ೨೭) ದೊಮ್ಮನಗದ್ದೆ ೨೮) ಪಿ.ಜಿ. ಪಾಳ್ಯ ೨೯) ತಡಗುಣಿ ಹೊಸೂರು ೩೦) ಶಾಗ್ಯಂ ೩೧) ಬೆಟ್ಟದ ಹೊಸೂರು ೩೨) ಕಣ್ಣೂರು.

ಚಾಮರಾಜನಗರ ತಾಲ್ಲೂಕು: ೧) ಉಡಿಗಾಲ ೨) ಮಾದಾಪುರ ೩) ಭೋಗಾಪುರ ೪) ಬದನಗುಪ್ಪೆ ೫) ಬಾಣಹಳ್ಳಿ ೬) ಬಾಗಳಿ ೭) ಕಮರವಾಡಿ

೮) ಹೆಗ್ಗವಾಡಿ ೯) ಮೇಲಾಜಿಪುರ ೧೦) ಹರವೆ ೧೧) ನಂಜೇದೇವನಪುರ ೧೨) ದಿಡ್ಡಾಪುರ ೧೩) ಮೊಸ್ಸೂರು ೧೪) ಸಾಗಡೆ ೧೫) ಉಗನಿಯದ ಹುಂಡಿ ೧೬) ಅರಕಲವಾಡಿ ೧೭) ಕಟ್ಟವಾಡಿ ೧೮) ಕೊತ್ತವಾಡಿ ೧೯) ಛತ್ರದ ಹೊಸೂರು ೨೦) ಬಿಸಲವಾಡಿ ೨೧) ಉಮ್ಮತ್ತೂರು ೨೨) ಕುದೇರು.

ಗುಂಡ್ಲುಪೇಟೆ ತಾಲ್ಲೂಕು (ಚಾಮರಾಜನಗರ ಜಿಲ್ಲೆ): ೧) ಬೊಮ್ಮನಹಳ್ಳಿ ೨) ಕಲ್ಲಹಳ್ಳಿ ೩) ಕಿಲಗೆರೆ ೪) ದೇಪಾಪುರ ೫) ಗೋಪಾಲಪುರ ೬) ಕಂದೆಗಾಲ ೭) ಬರಟಹಳ್ಳಿ ೮) ಬಲಚವಾಡಿ ೯) ಗುರುವಿನಪುರ ೧೦) ಬಾಚಹಳ್ಳಿ ೧೧) ಬೆಟ್ಟದಪುರ ೧೨) ಕಬ್ಬಹಳ್ಳಿ ೧೩) ಕೊಡಗಾಪುರ ೧೪) ಸೋಮಹಳ್ಳಿ ೧೫) ಭೋಗಯ್ಯ ಹುಂಡಿ (೧೬) ಕುರುಬರ ಹುಂಡಿ ೧೭) ಬೊಮ್ಮಲಾಪುರ.

ಮೈಸೂರು ತಾಲ್ಲೂಕು (ಮೈಸೂರು ಜಿಲ್ಲೆ): ೧. ಮೈಸೂರು ನಗರ ೨) ದೂರ ೩) ಆಯರಹಳ್ಳಿ ೪) ದೇವಲಾಪುರ ೫) ಸೊಳ್ಳೆಪುರ ೬) ಬಸಳ್ಳಿಹುಂಡಿ ೭) ದಾರಿಪುರ ೮) ಬರಡನಪುರ ೯) ಕಿರಾಳು ೧೦) ಸೋಮನಪುರ.

ಕೆ.ಆರ್. ನಗರ ತಾಲ್ಲೂಕು (ಮೈಸೂರು ಜಿಲ್ಲೆ): ೧) ಹಾಡ್ಯ ೨) ಲಾಲಂದೇವನ ಹಳ್ಳಿ.

ಯಳಂದೂರು ತಾಲ್ಲೂಕು (ಚಾಮರಾಜನಗರ ಜಿಲ್ಲೆ): ೧) ಕಿನಕಳ್ಳಿ ೨) ಕೆಸ್ತೂರು ೩) ಬೂದಿತಿಟ್ಟು.

ಹೆಚ್.ಡಿ. ಕೋಟೆ ತಾಲ್ಲೂಕು (ಮೈಸೂರು ಜಿಲ್ಲೆ): ೧) ದಡದಹಳ್ಳಿ ೨) ಕಿತ್ತೂರುಂಡಿ ೩) ಪುರ ೪) ಬೆಳತ್ತೂರು ೫) ಬೀರಂಬಳ್ಳಿ ೬) ಹೊಮ್ಮರಗಳ್ಳಿ ೭) ಹಂಚೀಪುರ ೮) ಮಾದಾಪುರ ೯) ಬೀಚನಹಳ್ಳಿ ೧೦) ಜಕ್ಕಹಳ್ಳಿ ೧೧) ಹರದನಹಳ್ಳಿ.

ಪಾಂಡವಪುರ ತಾಲ್ಲೂಕು (ಮಂಡ್ಯ ಜಿಲ್ಲೆ): ೧) ತಾಳಶಾಸನ ಮಠ

ಮಂಡ್ಯ ತಾಲ್ಲೂಕು (ಮಂಡ್ಯ ಜಿಲ್ಲೆ): ೧) ಮಾಚಹಳ್ಳಿ ಮಠ

ಕನಕಪುರ ತಾಲ್ಲೂಕು (ಬೆಂಗಳೂರು ಜಿಲ್ಲೆ): ೧) ಸಾತನೂರು ೨) ಬೌರಿಂಗ್ ಪೇಟೆ.

ತಾಳವಾಡಿ ಫಿರ್ಕಾ (ತಮಿಳುನಾಡು ರಾಜ್ಯ): ೧) ಇಗ್ಗಲೂರು ೨) ಗುಂಟಾಪುರ ೩) ಚಿಕ್ಕಹಳ್ಳಿ ೪) ಹೊಂಗಳವಾಡಿ ೫) ತಿಗಣಾರು ೬) ಕರಳವಾಡಿ.

■

* ಮೇಲ್ಕಂಡ ಕಂಥೆಭಿಕ್ಷದ ಮಠಗಳ ಪಟ್ಟಿಯನ್ನು 'ನಿರಂಜನ', ಶ್ರೀ ಗುರುಮಲ್ಲೇಶ್ವರ ಸಂಸ್ಮರಣ ಶತಮಾನೋತ್ಸವ ಸಂಪುಟ, ದೇವನೂರು ಮಠದಿಂದ ಬಳಸಿಕೊಳ್ಳಲಾಗಿದೆ. ಅನುಮತಿಯಿತ್ತ ಪ್ರೊ. ಡಿ.ಎಸ್. ಸದಾಶಿವಮೂರ್ತಿ ಅವರಿಗೆ ಆಭಾರಿ.

ಶರಣ ಪರಂಪರೆ ಮತ್ತು ಶ್ರೀ ಗುರುಮಲ್ಲೇಶ್ವರರು

■ ಪ್ರೊ. ಡಿ.ಎಸ್. ಸದಾಶಿವಮೂರ್ತಿ
ನಂ. ೯, ಬ್ಲಾಕ್ ೨೫, ಜೆ.ಎಸ್.ಎಸ್. ಬಡಾವಣೆ, ಮೈಸೂರು-೧೧

ದೇವನೂರಿನ ಶ್ರೀ ಗುರುಮಲ್ಲೇಶ್ವರರು ಬಸವ ಪರಂಪರೆಯ ಮುಂದುವರಿಕೆಯ ಕೊಂಡಿಯೆಂದರೆ ತಪ್ಪಾಗಲಾರದು. ಬಸವಾದಿ ಶರಣರ ವಿಚಾರ ಧಾರೆಗಳೇ ಜೀವನಮಾರ್ಗವೇ ಗುರುಮಲ್ಲೇಶ್ವರರ ಬದುಕಿನ ಉಸಿರು ಹಾಗೂ ಬದುಕಿನ ಮಾರ್ಗ ವಾದವು. ಈ ಭಾಗದ ಜನರಿಗೆ ಬಸವಣ್ಣನವರು ಬೇರೆ ಅಲ್ಲ, ಗುರುಮಲ್ಲೇಶ್ವರರು ಬೇರೆ ಅಲ್ಲ. ಗುರುಮಲ್ಲೇಶ್ವರರಲ್ಲೆ ಭಕ್ತಸಮುದಾಯ ಬಸವಣ್ಣ ನವರನ್ನು ಕಂಡಿತು. ಧಾರ್ಮಿಕವಾಗಿ, ಸಾಮಾಜಿಕ ವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಕೆಲವು ವಿಚಾರಗಳಲ್ಲಿ ಗುರುಮಲ್ಲೇಶ್ವರರು ಬಸವಣ್ಣನವರ ಹಾದಿಯನ್ನೆ ಅನುಸರಿಸಿದವರು.



ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ನಾಡಿನಲ್ಲಿ ಸಂಭವಿಸಿದ ಕ್ರಾಂತಿಕಾರಕ ಬದಲಾವಣೆಗಳ ಹಿನ್ನೆಲೆಯಲ್ಲಿ ೧೨ನೇ ಶತಮಾನ ನಾಡಿನ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬಹುದಾದ ಕಾಲ. ಬಹುಕಾಲ ದಿಂದ ಸಮಾಜದ ವಿವಿಧ ಸ್ಥರಗಳಲ್ಲಿ ಕಟ್ಟಿದ್ದ ಕಿಲುಬನ್ನು ತೊಳೆದು ಬೆಳಗಿದ ಕಾಲ ಅದು. ಜಗಜ್ಯೋತಿ ಬಸವೇಶ್ವರರ ನೇತೃತ್ವದಲ್ಲಿನ ಬಹುದೊಡ್ಡ ಶರಣ ಪರಂಪರೆ ತಮ್ಮ ವೈಚಾರಿಕ ಚಿಂತನೆಗಳಿಂದ, ಜನಪರ ಆಲೋಚನೆಗಳಿಂದ, ಸಮಾಜಮುಖಿ ಕಾರ್ಯಗಳ

ಮೂಲಕ ನಾಡಿನಲ್ಲಿ ಒಂದು ಅದ್ಭುತವಾದ ಬದಲಾವಣೆಯನ್ನು ತರುವ ಪ್ರಯತ್ನ ಮಾಡಿತು. ಅಣ್ಣ ಬಸವಣ್ಣನವರ ಮುಂದಾಳುತನದಲ್ಲಿ ವಿವಿಧ ವರ್ಗಕ್ಕೆ ಸೇರಿದ ಶರಣರು ಕಾಯಕ ಮತ್ತು ದಾಸೋಹ ತತ್ವಗಳ ಮೂಲಕ ನಾಡಿನ ಅನೇಕ ಜ್ವಲಂತ ಸಮಸ್ಯೆಗಳ ನಿವಾರಣೆಗೆ ಕಾರ್ಯತತ್ಪರರಾದರು. ಇವರ ಚಿಂತನೆಗಳು ಅಂದಿಗಷ್ಟೆ ಸೀಮಿತವಾಗಿರದೆ ಇಂದಿಗೂ, ಮುಂದೆಯೂ ಅವಶ್ಯಕವೆನಿಸಿವೆ. ಯಾವುದೇ ದೇಶ ಅಥವಾ ಸಮಾಜ ಎದುರಿಸುತ್ತಿರುವ ಹಸಿವು, ಬಡತನ, ಅಸಮಾನತೆ, ನಿರುದ್ಯೋಗ ಮೊದಲಾದ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ 'ಕಾಯಕ' ಮತ್ತು 'ದಾಸೋಹ' ತತ್ವಗಳ ನಿಜಾಚರಣೆಯ ಮೂಲಕ ಆದರ್ಶ ಸಮಾಜದ ಹಾಗ ಕಲ್ಯಾಣ ರಾಜ್ಯ ನಿರ್ಮಾಣದ ಕನಸನ್ನು ಸಾಕಾರಗೊಳಿಸಿದವರು ಅವರು. ಬಸವಣ್ಣನವರಿಂದ ಲಿಂಗವಂತ ಧರ್ಮದಲ್ಲಿ ಒಂದು ಹೊಸ ಅಲೆ, ಪ್ರಾರಂಭವಾಗಿ ಬಹಳಷ್ಟು ಶ್ರೀಸಾಮಾನ್ಯರನ್ನು ತನ್ನೆಡೆಗೆ ಸೆಳೆಯಿತು. ಅಣ್ಣನವರ ವಿಚಾರಗಳಿಗೆ ಮಾರುಹೋದ ಅನೇಕರು ದೇಶ-ವಿದೇಶಗಳಿಂದ (ಕಾಶ್ಮೀರ ಹಾಗೂ ಅಫ್‌ಘಾನಿಸ್ತಾನ) ಕಲ್ಯಾಣದೆಡೆಗೆ ಬಂದು ಬಸವಣ್ಣನವರ ಅನುಯಾಯಿಗಳಾದರು. ಬಸವಣ್ಣನವರ ವಿಚಾರಗಳು ಸರಳವೂ ಅನುಸರಣೀಯವೂ ಆದ್ದರಿಂದ ವಿವಿಧ ವರ್ಗಕ್ಕೆ ಸೇರಿದ ಜನಸಮುದಾಯ ವನ್ನು ತನ್ನತ್ತ ಸೆಳೆದವು. ವಿವಿಧ ವೃತ್ತಿ, ವರ್ಗ, ಕೋಮುಗಳಿಗೆ ಸೇರಿದ ಜನ, ವಿವಿಧ ಭಾವನೆಗಳನ್ನು ಹೊಂದಿದ್ದ ಜನರು ಅಣ್ಣನವರಿಂದ ಲಿಂಗಾಂಗಿಗಳಾದರು, ಶರಣರಾದರು, ವಚನಕಾರರೂ ಆದರು. ಈ ಕಾರಣಕ್ಕಾಗಿ ಶರಣತತ್ವ ವಿಶ್ವಮಾನ್ಯ ವಾಯಿತು. ವೀರಶೈವಧರ್ಮ ವಿಶ್ವಧರ್ಮವೆನಿಸಿತು. ಈ ಧರ್ಮದ ಮಹತ್ವ ಲೋಕಕ್ಕೆ ಅರಿವಾಯಿತು.

ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಾದ ನಾಡೋಜ ಪ್ರೊ. ದೇ.ಜ.ಗೌ. ಅವರು ಹೇಳಿರುವ ಹಾಗೆ "ವೀರಶೈವ ಧರ್ಮ ಸ್ವಾನುಭಾವ, ಲೋಕಾನುಭವ ಮತ್ತು ಶಿವಾನುಭವಗಳ ತ್ರಿವೇಣಿಸಂಗಮವನ್ನು ಸ್ಥಾಪಿಸಿದ ಧರ್ಮ. ದೇವಲೋಕವನ್ನು ಮರ್ತ್ಯಲೋಕದಲ್ಲಿ ಸ್ಥಾಪಿಸಿದ ಧರ್ಮ. ಸರ್ವ ಸಿದ್ಧಾಂತ ಯೋಗಗಳನ್ನು ಸಮನ್ವಯ ಗೊಳಿಸಿದ, ಕುಲಗೋತ್ರ, ಲಿಂಗ ವಯೋಭೇದವಿಲ್ಲದ ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆ, ಸೋದರತ್ವಗಳ ಆಧಾರದ ಮೇಲೆ ವಿಶ್ವಕಲ್ಯಾಣವನ್ನೇ ಗುರಿಯಾಗುಳ್ಳ ಸರ್ವೋದಯ ಸಮಾಜವನ್ನು ಸೃಷ್ಟಿಸಲು ಹಂಬಲಿಸಿದ ಧರ್ಮ. ಕಾಯಕ ಮತ್ತು ದಾಸೋಹಗಳ ಮೂಲಕ ಮಾತ್ರವೇ ಸಮಾಜ ಕಲ್ಯಾಣ, ಲೋಕಶಾಂತಿ ಸಾಧ್ಯವೆಂದು ಸ್ಪಷ್ಟಪಡಿಸಿದ ಧರ್ಮ." ಇಂಥ ವಿಶಿಷ್ಟ ಹಾಗೂ ಮಹತ್ವಪೂರ್ಣ ಧರ್ಮದ ಮೂಲಕ ಬಸವಣ್ಣನವರು ಸಮಾಜದಲ್ಲಿ ಬಹುಮುಖೀ ಬದಲಾವಣೆಯನ್ನು ತರುವ ಪ್ರಯತ್ನ ಮಾಡಿದರು. ಇವರ ಪ್ರಯತ್ನದ ಫಲವಾಗಿ ಸಮಾಜದಲ್ಲಿ ಹೊಸತನದ ಉಗಮ ವಾಯಿತು. ಜನಸಮುದಾಯಕ್ಕೆ ನೂತನ ಜೀವನ ಮಾರ್ಗವೊಂದು ದೊರಕಿತು. ಬದುಕಿನ ಬಗ್ಗೆ ಭರವಸೆ ಲಭಿಸಿತು.


ಆದರೆ, ಕಾರಣಾಂತರಗಳಿಂದ ಕಲ್ಯಾಣದಲ್ಲಿ ಉಂಟಾದ ಕ್ರಾಂತಿಯ ಪರಿಣಾಮವಾಗಿ ವಿಶ್ವಮಾನ್ಯವಾಗಿದ್ದ ಧರ್ಮದ ಬೆಳಕಿಗೆ ಗ್ರಹಣ ಹಿಡಿದಂತಾಯಿತು. ಕೆಲವು ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಒತ್ತಡಗಳಿಂದ ಈ ಧರ್ಮ ಮಸುಕಾಗತೊಡಗಿತು. ಆದರೆ ಬಸವಾದಿ ಶರಣರು ಹಾಕಿದ್ದ ಅಸ್ತಿಭಾರ ಅಷ್ಟು ಸುಲಭವಾಗಿ ಸಡಿಲವಾಗಲಿಲ್ಲ. ಹಾಗಾಗಿ ಆ ಧರ್ಮ ತನ್ನ ಸಂಪೂರ್ಣ ಅಸ್ತಿತ್ವವನ್ನೇನು ಕಳೆದುಕೊಳ್ಳಲಿಲ್ಲ. ಮುಂದೆ ಚರಕುಲ ಸಾರ್ವಭೌಮರೆನಿಸಿದ ಶ್ರೀ ತೋಂಟದ ಸಿದ್ಧಲಿಂಗ ಶರಣರಿಂದ, ಅವರ ನೂರೊಂದು ವಿರಕ್ತರಿಂದ, ಪ್ರೌಢದೇವರಾದಿಯಾಗಿ ಅನೇಕ ಶರಣರು, ಸಾಹಿತಿಗಳು, ವಚನ ಸಂಗ್ರಹಕಾರರು, ಸಂಪಾದನಾಕಾರರು ಹಾಗೂ ಹೊಸ ಹೊಸ ವಚನಕಾರರಿಂದ ಈ ಧರ್ಮ ಮತ್ತೆ ಬೆಳಗಲು ಪ್ರಾರಂಭಿಸಿತು. ದುರಾದೃಷ್ಟ ವಶಾತ್ ಮತ್ತೆ ದೇಶದಲ್ಲಾದ ಕೆಲವು ರಾಜಕೀಯ ಬದಲಾವಣೆಗಳು, ವಿದೇಶಿಯರ ಆಗಮನ ಮೊದಲಾದವುಗಳಿಂದ ಈ ಧರ್ಮದ ಮೇಲೆ ಕೆಟ್ಟ ಪರಿಣಾಮ ವನ್ನುಂಟುಮಾಡಿದವು. ಹಾಗಾಗಿ ವೀರಶೈವ ಧರ್ಮವನ್ನು ಮತ್ತೆ ಸಾಮಾಜೀಕರಿಸಿ ಜನಸಮುದಾಯವನ್ನು ಶರಣಧರ್ಮದೆಡೆಗೆ ಸೆಳೆಯುವ ಕೆಲಸ ಅವಶ್ಯಕವೆನಿಸಿತು. ನಮ್ಮೆಲ್ಲರ ಪುಣ್ಯವೋ ಏನೋ ನಮ್ಮ ನಾಡಿನ ಅನೇಕ ಭಾಗಗಳಲ್ಲಿ ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ಈ ಧರ್ಮವನ್ನು ಪುನರ್ನಿರ್ಮಿಸಿ ಸಮಾಜೀಕರಿಸುವ ಕೆಲಸ ಅನೇಕ ಶರಣರ ನೇತೃತ್ವದಲ್ಲಿ ನಡೆಯಿತು. ಇಂತಹ ಅನೇಕ ಶರಣರಲ್ಲಿ ಬಸವ ವಿಚಾರ ಧಾರೆಯನ್ನು ಯಾವ ಬದಲಾವಣೆಯೂ ಇಲ್ಲದೆ ಜನಸಾಮಾನ್ಯರ ಜೋಪಡಿಗೆ ತಂದವರು ಬಸವ ಪರಂಪರೆಯ ಶರಣರಾದ ದೇವನೂರಿನ ಸ್ವಲೀಲಾ ಮಹಾತ್ಮ ಶ್ರೀ ಗುರುಮಲ್ಲೇಶ್ವರರು.

ಮಹಾತ್ಮ ಶ್ರೀ ಗುರುಮಲ್ಲೇಶ್ವರರು (೧೮೨೭-೧೮೯೯): ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ನ್ಯಾಮತಿ ಬಳಿಯ ಚವುಳಂಗ ಗ್ರಾಮದ ಶರಣ ದಂಪತಿಗಳಾದ ಶ್ರೀಮತಿ ಶರ್ವಾಣಮ್ಮ ಮತ್ತು ಶ್ರೀ ಶರಣಪ್ಪನವರ ಸುಪುತ್ರರು. ಕಾರಣಾಂತರಗಳಿಂದ ಚವುಳಂಗದಿಂದ ಮೈಸೂರಿನ ಚೌಕೀಮಠದಲ್ಲಿ ನೆಲೆಸಿದ್ದ ಈ ದಂಪತಿಗಳ ಪುತ್ರರತ್ನಕ್ಕೆ "ಗುರುಮಲ್ಲು" ಎಂದು ನಾಮಕರಣ ಮಾಡಿದವರು ಚೌಕೀಮಠದ ಹಿರಿಯ ಶ್ರೀಗಳಾಗಿದ್ದ ಶ್ರೀ ಗುರುಮಲ್ಲ ಸ್ವಾಮಿಗಳು. ಇವರಿಗೆ ಶರಣಪ್ಪ ಸ್ವಾಮಿಗಳೆಂಬ ಹೆಸರೂ ಇತ್ತು. ಚೌಕೀಮಠದ ಪಕ್ಕದಲ್ಲಿದ್ದ ಮತ್ತೊಂದು ಮಠ ಶ್ರೀ ಮಹಾಲಿಂಗೇಶ್ವರ ಮಠ. ಬೆತ್ತಲೆಗುಂಡೆ ಸ್ವಾಮಿಗಳು ಈ ಮಠದ ಗುರುಗಳಾಗಿದ್ದರು. ಈ ಇಬ್ಬರ ಗುರುಗಳ ಕಾರುಣ್ಯದ ಶಿಶುವಾಗಿ ಬೆಳೆದವರು ಗುರುಮಲ್ಲೇಶ್ವರರು ಬೆತ್ತಲೆಗುಂಡೆ ಶ್ರೀಗಳು ಗುರುಮಲ್ಲೇಶ್ವರರಿಗೆ ಆಧ್ಯಾತ್ಮದ ಮಾರ್ಗದರ್ಶನ ಮಾಡಿದರು. ಕಂತೆಭಿಕ್ಷದ ಕಾಯಕದ ದೀಕ್ಷೆ ನೀಡಿದರು. ಅವರು ಅಂದು ನೀಡಿದ ಈ ದೀಕ್ಷೆ ಮುಂದೆ ಗುರುಮಲ್ಲೇಶ್ವರರಿಂದ ದೇವನೂರಿನಲ್ಲಿ ಸ್ಥಾಪನೆಯಾದ ಮಠದ ಗುರುಪರಂಪರೆಯ ಕಾಯಕಕ್ಕೆ ಸೈದ್ಧಾಂತಿಕವಾದ ಅಡಿಪಾಯ

ಹಾಕಿದವರು ಮಹಾಲಿಂಗೇಶ್ವರ ಮಠದ ಬೆತ್ತಲೆಗುಂಡೆ ಶ್ರೀಗಳು ಹಾಗೂ ಚೌಕೀಮಠದ ಶ್ರೀಗಳು ಎಂದರೆ ತಪ್ಪಾಗಲಾರದು.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದ ಪಟೇಲ್ ಸುಬ್ಬೇಗೌಡರ ಧರ್ಮಪತ್ನಿ ಶ್ರೀಮತಿ ಶಂಕರಮ್ಮನವರಿಗೆ ಹಿಡಿದಿತ್ತೆನ್ನಲಾದ ಬ್ರಹ್ಮಪಿಶಾಚಿಯು ಬಹಳಷ್ಟು ವರ್ಷಗಳಿಂದ ಅವರನ್ನು ಹಿಂಸಿಸುತ್ತಿತ್ತು. ಗೌಡರೇನೆಲ್ಲಾ ಮಾಟ-ಮಂತ್ರಗಳನ್ನು, ಯಂತ್ರ-ತಂತ್ರಗಳನ್ನು ಮಾಡಿಸಿದರೂ ಅದು ಶಂಕರಮ್ಮನವರಿಂದ ಬಿಡುಗಡೆಯಾಗಿರಲಿಲ್ಲ. ಅಷ್ಟೊತ್ತಿಗಾಗಲೇ ಮೈಸೂರಿನಲ್ಲಿ ಗುರುಮಲ್ಲೇಶ್ವರರ ಕರುಳ ಪವಾಡ ಹಾಗೂ ಅನೇಕ ಸಾಧನೆ ಸಿದ್ಧಿಗಳು ಮನೆ ಮಾತಾಗಿದ್ದವು. ಜನ ತಮ್ಮ ಕಷ್ಟಗಳ ನಿವಾರಣೆಗೆ ಇವರ ಬಳಿಬಂದು ಪರಿಹಾರ ಪಡೆದು ಸಂತೋಷದಿಂದ ಹಿಂದಿರುಗುತ್ತಿದ್ದರು. ಇದನ್ನು ತಿಳಿದವರು ಸುಬ್ಬೇಗೌಡರಿಗೆ ಒಂದು ಸಲಹೆ ನೀಡಿ, ನೀವು ಮೈಸೂರಿಗೆ ಹೋಗಿ ಮಹಾತ್ಮರಾದ ಗುರುಮಲ್ಲೇಶ್ವರರನ್ನು ಭೇಟಿ ಮಾಡಿ ನಿಮ್ಮ ಕಷ್ಟವನ್ನು ನಿವೇದಿಸಿ ಅವರನ್ನು ಇಲ್ಲಿಗೆ ಕರೆದುಕೊಂಡು ಬನ್ನಿ. ಅವರ ದರ್ಶನದಿಂದ ನಿಮ್ಮ ಮನೆಯವರಿಗೆ ಮುಕ್ತಿ ಸಿಗಬಹುದೆಂದರು. ಈ ಮಾತನ್ನು ಕೇಳಿದ ಸುಬ್ಬೇಗೌಡರು ತಡಮಾಡದೆ ಮೈಸೂರಿಗೆ ಬಂದು ಗುರುಮಲ್ಲೇಶ್ವರರನ್ನು ಕಂಡು ತಮ್ಮ ಕುಟುಂಬದ ಸಮಸ್ಯೆಯನ್ನು ನಿವೇದಿಸಿ, ದಯಮಾಡಿ ಗುರುಗಳು ತಮ್ಮ ಊರಿಗೆ ದಯಮಾಡಿಸಿ ಆ ಬ್ರಹ್ಮಪಿಶಾಚಿಯನ್ನು ಬಿಡುಗಡೆಗೊಳಿಸಿ ನಮಗೆ ನೆಮ್ಮದಿ ನೀಡಬೇಕೆಂದು ಪ್ರಾರ್ಥಿಸಿಕೊಂಡರು. ಸುಬ್ಬೇಗೌಡರ ಕುಟುಂಬದ ಕಥೆಯನ್ನು ಕೇಳಿದ ಗುರುಮಲ್ಲೇಶ್ವರರು ದೇವನೂರಿಗೆ ಹೊರಟುಬಂದರು. ಸುಬ್ಬೇಗೌಡರ ಮನೆಗೆ ಆಗಮಿಸಿದ ಗುರುಮಲ್ಲೇಶ್ವರರು ಬ್ರಹ್ಮಪಿಶಾಚಿ ಆವರಿಸಿದ್ದ ಶಂಕರಮ್ಮನವರ ಮಸ್ತಕದ ಮೇಲೆ ತಮ್ಮ ಭಸ್ಮಭರಿತ ಹಸ್ತವನ್ನಿಟ್ಟ ತಕ್ಷಣವೇ ಬಹುದಿನಗಳಿಂದ ಶಂಕರಮ್ಮನವರನ್ನು ಪೀಡಿಸುತ್ತಿದ್ದ ಪಿಶಾಚಿ ಬಹಳ ಸಂತೋಷದಿಂದ "ಗುರುವೇ ನಿಮ್ಮ ದರ್ಶನದಿಂದ ನನ್ನ ಜನ್ಮ ಇಂದಿಗೆ ಸಾರ್ಥಕವಾಯಿತೆಂದು" ಹೇಳಿ ಶಂಕರಮ್ಮನವರನ್ನು ಬಿಟ್ಟು ಹೋಯಿತು. ಈ ಘಟನೆ ಅಲ್ಲಿ ನೆರದಿದ್ದವರೆಲ್ಲರಿಗೂ ಪವಾಡಸದೃಶವಾಗಿ ಕಂಡಿತು. ಆಗ ಸಾಮಾನ್ಯ ಜನರು ಗುರುಮಲ್ಲೇಶ್ವರರು ಪವಾಡಪುರುಷರೇ ಇರಬೇಕೆಂದು ಭಾವಿಸಿದರು.

ಅನಂತರ ಸುಬ್ಬೇಗೌಡರ ಕುಟುಂಬ ಹಾಗೂ ಅಲ್ಲಿ ನೆರೆದಿದ್ದ ಜನಸ್ತೋಮ ಗುರುಮಲ್ಲೇಶ್ವರರ ಪಾದಗಳಿಗೆ ನಮಸ್ಕರಿಸಿ, 'ಗುರುಗಳೇ ಇನ್ನು ಮುಂದೆ ತಾವು ಇಲ್ಲಿಯೇ ನೆಲೆನಿಂತು ನಮಗೆಲ್ಲಾ ಲಿಂಗತತ್ವೋಪದೇಶ ಮಾಡಿ ನಮ್ಮ ಉದ್ಧರಿಸಬೇಕೆಂದು' ಪ್ರಾರ್ಥಿಸಿಕೊಂಡಿತು. ಇವರೆಲ್ಲರ ಪ್ರಾರ್ಥನೆಗೆ ಓಗೊಟ್ಟ ಗುರುಮಲ್ಲೇಶ್ವರರು ದೇವನೂರಿನಲ್ಲಿ ನೆಲೆ ನಿಲ್ಲಲು ತಮ್ಮ ಒಪ್ಪಿಗೆ ಸೂಚಿಸಿದರು. ಗುರುಗಳು ನೆಲೆ ನಿಲ್ಲಲು ಅಗತ್ಯವಾದ ಎಲ್ಲಾ ವ್ಯವಸ್ಥೆಗಳನ್ನು ಸುಬ್ಬೇಗೌಡರು ಮಾಡಿದರು. ಹೀಗೆ ಗುರು



ಮಲ್ಲೇಶ್ವರರು ದೇವನೂರಿನಲ್ಲಿ ನೆಲೆನಿಂತ ಕ್ಷೇತ್ರವೇ ಮುಂದೆ ತನ್ನ ಅವಿರತ ಕಂತೆ ಭಿಕ್ಷದ ಕಾಯಕ ಹಾಗೂ ನಿತ್ಯ ಅನ್ನದಾಸೋಹದ ಮಣಿಹದಿಂದ ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹಮಠವೆನಿಸಿದೆ.

ಒಂದು ಅಂದಾಜಿನ ಪ್ರಕಾರ ಗುರುಮಲ್ಲೇಶ್ವರರು ಸುಮಾರು ೭೧-೭೨ ವರ್ಷಗಳ ಕಾಲ ಇದ್ದಿರಬೇಕು. ಅದರಲ್ಲಿ ಸು. ೨೩ ವರ್ಷಗಳು ಮೈಸೂರಿನಲ್ಲಿದ್ದು, ೧೯೫೦-೫೧ರ ಸರಿಸುಮಾರಿನಲ್ಲಿ ದೇವನೂರಿಗೆ ಆಗಮಿಸಿ, ಇಲ್ಲಿ ಸು. ೪೯-೫೦ ವರ್ಷಗಳ ಕಾಲವಿದ್ದು, ದೇವನೂರನ್ನು ಒಳಗೊಂಡಂತೆ, ಸುತ್ತಮುತ್ತಣ ನೂರಾರು ಹಳ್ಳಿಗಳಿಗೆ ಸಂಚರಿಸಿ, ಅಲ್ಲಲ್ಲಿ ದಾಸೋಹ(ಭಿಕ್ಷದ)ದ ಮಠಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಕಾಯಕ ಮತ್ತು ದಾಸೋಹಗಳನ್ನು ಜಂಗಮವಾಗಿಸಿದರು. ಮಹಾತ್ಮ ಗುರುಮಲ್ಲೇಶ್ವರರು ೧೮೯೯ರಲ್ಲಿ ಲಿಂಗೈಕ್ಯರಾಗುವ ವೇಳೆಗಾಗಲೇ ಅವರಿಗೆ ಸುಮಾರು ಹದಿನಾರು ಸಾವಿರ ಶಿಷ್ಯರಿದ್ದರೆಂಬುದು ಹಿರಿಯರ ಅಭಿಪ್ರಾಯವಾಗಿದೆ. ಆ ಕಾಲಕ್ಕೆ ಇದು ಸಾಮಾನ್ಯವಾದ ಸಂಖ್ಯೆಯಲ್ಲ, ಅದ್ಭುತವಾದುದು.

ದೇವನೂರಿನ ಶ್ರೀ ಗುರುಮಲ್ಲೇಶ್ವರರು ಬಸವ ಪರಂಪರೆಯ ಮುಂದುವರಿಕೆಯ ಕೊಂಡಿಯೆಂದರೆ ತಪ್ಪಾಗಲಾರದು. ಬಸವಾದಿ ಶರಣರ ವಿಚಾರ ಧಾರೆಗಳೇ ಜೀವನ ಮಾರ್ಗವೇ ಗುರುಮಲ್ಲೇಶ್ವರರ ಬದುಕಿನ ಉಸಿರು ಹಾಗೂ ಬದುಕಿನ ಮಾರ್ಗವಾದವು. ಈ ಭಾಗದ ಜನರಿಗೆ ಬಸವಣ್ಣನವರು ಬೇರೆ ಅಲ್ಲ, ಗುರುಮಲ್ಲೇಶ್ವರರು ಬೇರೆ ಅಲ್ಲ.

ಗುರುಮಲ್ಲೇಶ್ವರರಲ್ಲ ಭಕ್ತಸಮುದಾಯ ಬಸವಣ್ಣನವರನ್ನು ಕಂಡಿತು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಕೆಲವು ವಿಚಾರಗಳಲ್ಲಿ ಗುರುಮಲ್ಲೇಶ್ವರರು ಬಸವಣ್ಣನವರ ಹಾದಿಯನ್ನೆ ಅನುಸರಿಸಿದವರು. ಮೈಸೂರು ಸೀಮೆಯಲ್ಲಿ ಸಂಚರಿಸಿ ವಿಶೇಷವಾಗಿ ಬಸವಾದಿ ಶರಣರ ಪರಂಪರೆಯ ಕಾಯಕ-ದಾಸೋಹ ತತ್ವಗಳನ್ನು ನಿಜಾಚರಣೆಗೆ ತಂದು ಸಮಕಾಲೀನ ಶರಣರಿಂದ 'ಆಚರಣೆಯ ಗುರುಮಲ್ಲಪ್ಪ'ರೆನಿಸಿಕೊಂಡವರು.

ಮಹಾತ್ಮ ಗುರುಮಲ್ಲೇಶ್ವರರು ಬಸವಾದಿ ಶರಣರ ವಿಚಾರಗಳನ್ನು ಕೆಳಕಂಡಂತೆ ಆಚರಿಸಿ ಬೋಧಿಸಿದ್ದಾರೆ.

೧. **ಧರ್ಮದ ಸರಳೀಕರಣ:** ಜನಸಾಮಾನ್ಯರು ಧರ್ಮಾವಲಂಬಿಗಳಾಗುವಂತೆ ಮಾಡಲು ಗುರುಮಲ್ಲೇಶ್ವರರು ಧರ್ಮದ ಆಚರಣೆಯನ್ನು ಸರಳೀಕರಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಭಿಕ್ಷದ ದಾಸೋಹ ಮಠಗಳನ್ನು ಸ್ಥಾಪಿಸಿ, ಅವುಗಳಲ್ಲಿ ಕಂತೆಭಿಕ್ಷದ ಕಾಯಕ, ಅನ್ನದಾಸೋಹ ಹಾಗೂ ಶಿವಭಜನಾ ಗೋಷ್ಠಿಗಳನ್ನು ನಿರಂತರವಾಗಿ ನಡೆಸಿಕೊಂಡು ಬರುವಂತೆ ಮಾಡುವುದರ ಮೂಲಕ ಈ ಕಾರ್ಯವನ್ನು ಕೈಗೊಂಡರು. ಬಹಳ ದಿನಗಳಿಂದ ವೀರಶೈವ ಧರ್ಮಾವಲಂಬಿಗಳಲ್ಲಿ ಬಂದಿದ್ದ ಜಾತಿ, ಗೋತ್ರ, ವರ್ಣ, ಸ್ಥಾವರಪೂಜೆ, ಹೋಮ, ಹವನ ಇತ್ಯಾದಿ ಹಲವಾರು ವೈದಿಕ ಸಂಪ್ರದಾಯಗಳನ್ನು ನಿರಾಕರಿಸಿ, ಎಲ್ಲರೂ ಗುರುವಿನಿಂದ ಲಿಂಗತತ್ವೋಪದೇಶ ಪಡೆದು, ಅಷ್ಟಾವರಣವೇ ಅಂಗವಾಗಿ, ಪಂಚಾಚಾರಗಳೇ ಪ್ರಾಣವಾಗಿ, ಷಟ್‌ಸ್ಥಲ ಮಾರ್ಗದಲ್ಲಿ ನಡೆಯುವುದರ ಮೂಲಕ ಜೀವನ್ಮುಕ್ತರಾಗಬೇಕೆಂದು ತಿಳಿಸಿದರು. ಗುರುಮಲ್ಲೇಶ್ವರರು ಮಡಿ ಮೈಲಿಗೆಗೆ ಮಹತ್ವ ಕೊಡಲಿಲ್ಲ, ಆದರೆ ಅಂತರಂಗ ಶುದ್ಧಿಗೆ ಒತ್ತು ನೀಡಿದರು. ಲಿಂಗಭೇದವಿಲ್ಲದೆ ಗುರುಮಲ್ಲೇಶ್ವರರು ಲಿಂಗತತ್ವೋಪದೇಶ ಮಾಡಿದರು. ಅಷ್ಟೇ ಅಲ್ಲ ಮೈಸೂರಿನ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಲಿಂಗೋಪದೇಶ ಮಾಡಿದರು. ಅನಂತರ ಅರಮನೆಯ ವಿಶಿಷ್ಟ ಅಧಿಕಾರಿಗಳು, ಗುರಿಗಾರರು, ಪಾಳೆಯಗಾರರು, ಭಕ್ಷಿಗಳು, ಅರಸುಮನೆತನದವರು ಹಾಗೂ ವಿವಿಧ ವರ್ಗದ ಜನ ಬಡವ ಶ್ರೀಮಂತರೆಂಬ ಭೇದವಿಲ್ಲದ ಲಿಂಗಧರ್ಮಾವಲಂಬಿಗಳಾದರು. ಒಟ್ಟಾರೆ ಇದೊಂದು ಆಂದೋಲನವೇ ಆಯಿತು.

೨. **ಶ್ರಮದ ಮಹತ್ವ:** ಯಾವುದೇ ವಸ್ತು ಉತ್ಪಾದನೆಯಾಗಬೇಕಾದರೆ ಭೂಮಿ, ಬಂಡವಾಳ, ಸಂಘಟನೆಗಳಂತಹ ಉತ್ಪಾದನಾಂಗಗಳ ಜೊತೆಗೆ ಶ್ರಮವು ಅತ್ಯಗತ್ಯವಾದ ಅಂಗವಾಗಿದೆ ಎಂಬುದು ಬಹಳಷ್ಟು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಶ್ರಮವಿಲ್ಲದ ಭೂಮಿ ಬರಡಾಗುತ್ತದೆ, ಬಂಡವಾಳ ಜಡವಾಗುತ್ತದೆ. ಶ್ರಮವು ದೇಶದ ಜನರ ಅಗತ್ಯಗಳನ್ನು ಪೂರೈಸುವಲ್ಲಿ ಹಾಗೂ ರಾಷ್ಟ್ರಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಶದಲ್ಲಿನ ಎಲ್ಲರೂ ಶ್ರಮವಹಿಸಿ ದುಡಿದಾಗ ನಿರುದ್ಯೋಗ, ಅಸಮಾನತೆಗಳಂತಹ ಸಮಸ್ಯೆಗಳು ದೂರವಾಗುತ್ತವೆ. ಜನ ನೆಮ್ಮದಿಯಿಂದ ಸ್ವಾಭಿಮಾನದ ಜೀವನವನ್ನು ಸಾಗಿಸಬಹು

ದಾಗಿದೆ. ಈ ದೃಷ್ಟಿಯಿಂದ ಶರಣರು ಶ್ರಮ ಅಥವಾ ದುಡಿಮೆಗೆ 'ಕಾಯಕ'ದ ಕಲ್ಪನೆಯನ್ನು ಕೊಟ್ಟರು. ಶ್ರಮಕ್ಕೆ ಆಧ್ಯಾತ್ಮದ ಮೆರಗನ್ನು ನೀಡಿದರು. ಶ್ರಮ ದೇಹವನ್ನು ದಂಡಿಸುತ್ತದೆ. 'ಖಂಡಿಸದೆ ಕರಣವನು, ದಂಡಿಸದೆ ದೇಹವನು, ಉಂಡುಂಡು ಸ್ವರ್ಗಕ್ಕೆ ಹೋಗಲಿಕೆ ಅದನೇನು ರಂಡೆಯಾಳುವಳೇ?' ಎಂದು ಸರ್ವಜ್ಞ ಹೇಳಿರುವುದನ್ನು ನೋಡಿದರೆ ಶ್ರಮದ ಮಹತ್ವದ ಅರಿವಾಗದಿರದು. ಶರಣ ಧರ್ಮದ ಪ್ರತಿಪಾದಕರಾದ ಗುರುಮಲ್ಲೇಶ್ವರರು ಜನಸಾಮಾನ್ಯರಲ್ಲಿ ಕಾಯಕದ ಬಗ್ಗೆ ಗೌರವ ಮೂಡುವಂತೆ ಮಾಡಲು ಮತ್ತು ಶ್ರಮಕ್ಕೆ ಹೆಚ್ಚು ಮಹತ್ವ ನೀಡಲು, ದುಡಿದೇ ತಿನ್ನುವಂತೆ ಮಾಡಲು, ಸಮಾಜ ಸದಾ ಕ್ರಿಯಾಶೀಲವಾಗುವಂತಾಗಲು ಶ್ರಮಕ್ಕೆ ಆದ್ಯತೆ ನೀಡಿದರು. ಒಮ್ಮೆ ದೇವನೂರಿನಲ್ಲಿ ಬರಗಾಲ ಬಂದು ಜನ ಹಸಿವಿನಿಂದ ಬಳಲುತ್ತಿದ್ದಾಗ, ಸುಮ್ಮಸುಮ್ಮನೆ ಇವರಿಗೆ ಅನ್ನದಾಸೋಹ ಮಾಡಿದರೆ ಸರಿ ಬರುವುದಿಲ್ಲವೆಂದು ಭಾವಿಸಿ ಮಠದ ಗೋಡೆಯನ್ನು ನಿರ್ಮಿಸುವ ನೆಪದಲ್ಲಿ ಅವರಿಗೆ ಕೆಲಸ ಕೊಟ್ಟು ಊಟ ಬಡಿಸುತ್ತಿದ್ದರಂತೆ. ಮತ್ತೆ ಮಾರನೇ ದಿನ ಗೋಡೆ ಸರಿ ಬಂದಿಲ್ಲವೆಂದು ಅದನ್ನು ಬೀಳಿಸಿ ಮತ್ತೆ ಮತ್ತೆ ಕಟ್ಟಿಸುತ್ತಿದ್ದರಂತೆ. ಇದರ ಉದ್ದೇಶ ಮಠಕ್ಕೆ ಬಂದವರು ಸುಮ್ಮನೆ ಊಟ ಮಾಡಬಾರದು, ಏನಾದರೂ ಕಾಯಕ ಮಾಡಿ, ತಮ್ಮ ಶ್ರಮವನ್ನು ಸವೆಸಿ ಊಟ ಮಾಡಬೇಕು ಎಂಬ ಸಂದೇಶವನ್ನು ಸಾರುವ ಕಾರ್ಯ ಇದಾಗಿತ್ತು. ಈವೊತ್ತಿಗೂ ದೇವನೂರು ಮಠದಲ್ಲಿ ಈ ಪ್ರತೀತಿಯಿದೆ.

೩. **ಕಂತೆಭಿಕ್ಷದ ಕಾಯಕವನ್ನು ನೆಲೆಗೊಳಿಸಿರುವುದು:** ಬಸವಾದಿ ಪ್ರಮಥರು ಜಗತ್ತಿಗೆ ಕೊಟ್ಟಿರುವ ಅಮೂಲ್ಯವಾದ ಕೊಡುಗೆಗಳಲ್ಲೊಂದು 'ಕಾಯಕತತ್ವ'. ವ್ಯಕ್ತಿ ಕೈಗೊಳ್ಳುವ ಉದ್ಯೋಗ ಅಥವಾ ಕೆಲಸ ಪರಹಿತದಿಂದ ಕೂಡಿದ್ದು, ಸಮಾಜದ ಹಾಗೂ ಆತ್ಮವಿಕಾಸಕ್ಕೆ ಎಂಬ ವಿಶಾಲ ಮನೋಭಾವದಿಂದ ಪ್ರೇರಿತವಾಗಿದ್ದರೆ ಅದು ಕಾಯಕವಾಗುತ್ತದೆ. ಶರಣರು ಇದನ್ನು ಜೀವನದ ಮೌಲ್ಯವನ್ನಾಗಿಸಿದರು. ಇದು ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಮಹತ್ವ ಪಡೆದ ಪರಿಕಲ್ಪನೆಯಾಗಿದೆ. ಅವರು ಪ್ರತಿಪಾದಿಸಿದ್ದು ಸತ್ಯಶುದ್ಧ ಕಾಯಕ. ಇದು ಬಹುಮುಖ ಲಕ್ಷಣಗಳನ್ನೊಳಗೊಂಡಿದ್ದು ವ್ಯಷ್ಠಿ ಮತ್ತು ಸಮಷ್ಠಿಯ ಹಿತವನ್ನು ಅಂತರ್ಗತಗೊಳಿಸಿಕೊಂಡಿದೆ.

ಹನ್ನೆರಡನೇ ಶತಮಾನದಲ್ಲಿ ಪ್ರತಿಪಾದಿಸಿದ ಕಾಯಕತತ್ವವನ್ನು ಹತ್ತೊಂಬತ್ತನೇ ಶತಮಾನದಲ್ಲಿ ಮತ್ತೆ ನಿಜಾಚರಣೆಗೆ ತಂದವರು ಶ್ರೀ ಗುರುಮಲ್ಲೇಶ್ವರರು. ಇದಕ್ಕಾಗಿ ಅವರು ಅನುಷ್ಠಾನಗೊಳಿಸಿದ್ದು ಕಂತೆಭಿಕ್ಷದ ಕಾಯಕ. "ತನಗಾಗಿ ಅಲ್ಲದ, ಅನ್ಯರ ಒಳಿತಿಗಾಗಿ ಜಂಗಮರಾದವರು ತಲೆಯ ಮೇಲೆ ಗೋಟೆಯನ್ನು ಹಾಕಿಕೊಂಡು, ಎಡಗೈ ಹೆಗಲಿಗೆ ಭಿಕ್ಷಾ ಪಾತ್ರೆಯನ್ನೇರಿಸಿ, ಕಾಲಿಗೆ ಜಂಗು ಕಟ್ಟಿ, ಕೈಯಲ್ಲಿ ಗೆಜ್ಜೆ ಶಬ್ದ ಬರುವ ಕೋಲನ್ನು ಹಿಡಿದು ಹೆಜ್ಜೆಹೆಜ್ಜೆಗೂ ಮಂತ್ರಪಠಣ ಮಾಡುತ್ತಾ, ಮನೆಮನೆಗೆ ಹೋಗಿ "ಹರಹರ ಶಿವಶಿವಾ ಶಿವಗಣಂಗಳ ಪರಮ ಕಂತೆಭಿಕ್ಷ"ವೆಂದು ಆದರದಿ ಬೇಡಿ ತಂದು ಸತ್ಪಾತ್ರರಿಗೆ ಅನ್ನದಾಸೋಹ ಮಾಡುವ ಪರಮ ಪವಿತ್ರ ಕಾಯಕವೇ

ಕಂತೆಭಿಕ್ಷದ ಕಾಯಕ. ಜಂಗಮಕ್ಕೆರೆಯುವ ಬಯಕೆ ಭಕ್ತನಿಗಿದ್ದರೂ ಕಾರಣಾಂತರಗಳಿಂದ ನಿತ್ಯ ಜಂಗಮರನ್ನರಸಿ ಹೋಗುವುದು ಸಾಧ್ಯವಾಗದ ಮಾತು. ಆದರೆ, ಜಂಗಮರೇ ಭಕ್ತರ ಮನೆಯಂಗಳಕ್ಕೆ ಹೋದರೆ, ಜಂಗಮರ ಪಾದಸ್ಪರ್ಶದಿಂದ ಭಕ್ತನ ಮನೆಯಂಗಳ ಪವಿತ್ರವಾಯಿತು. ಅಬಾಲವೃದ್ಧರಾದಿಯಾಗಿ ಮನೆಮಂದಿಗೆಲ್ಲಾ ಗುರುದರ್ಶನ ಹಾಗೂ ಗುರುಪಾದ ಸ್ಪರ್ಶನವಾಯಿತು. ಗುರುವಿನ ಸ್ಪರ್ಶದಿಂದ ಭಕ್ತನ ಮನೆಯ ಪದಾರ್ಥ ಪ್ರಸಾದವಾದಂತಾಯಿತು. ಇದು ಒಂದು ಕಡೆಯಾದರೆ, ಉಳ್ಳ ಭಕ್ತನ ಮನೆಯಿಂದ ತಂದ ಪ್ರಸಾದವನ್ನು ಇಲ್ಲದವರಿಗೆ, ಅವಶ್ಯಕತೆ ಇರುವವರಿಗೆ ದಾಸೋಹ ಮಾಡುವುದರಿಂದ ಸಮಾಜದ ಹಸಿವು, ಬಡತನ, ಅಸಮಾನತೆ ದೂರವಾಗುತ್ತವೆ. ಈ ಹಿನ್ನೆಲೆಯಲ್ಲಿ ಪರಿಕಲ್ಪಿತವಾದದ್ದು ಕಂತೆಭಿಕ್ಷದ ಕಾಯಕ. ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು? ಕೋಳಿ ಒಂದು ಕುಟುಕ ಕಂಡಡೆ ಕರೆಯದೆ ತನ್ನ ಕುಲವನೆಲ್ಲವ? ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ, ಕೋಳಿಗಿಂತ ಕರಕಷ್ಟ ಕೂಡಲ ಸಂಗಮದೇವಾ" ಎಂದು ಬಸವಣ್ಣನವರು ಹೇಳಿರುವ ಹಾಗೆ ಮನುಷ್ಯ ತಾನು ಭಗವಂತನಿಂದ ಪಡೆದದ್ದನ್ನು ಹಂಚಿ ತಿನ್ನಬೇಕು ಎಂಬ ವಿಚಾರವನ್ನು ಪ್ರತಿಪಾದಿಸಿದ ಗುರುಮಲ್ಲೇಶ್ವರರು ಸಮಾಜದಲ್ಲಿ ಹಂಚಿ ತಿನ್ನುವ ಸಂಸ್ಕೃತಿಯನ್ನು ಬೆಳೆಸಲು ಈ ಕಾಯಕವನ್ನು ಒಂದು ಸಾಧನವನ್ನಾಗಿ ಮಾಡಿಕೊಂಡರು. 'ಹಂಚಿ ತಿಂದರೆ ಹಸಿವಿಲ್ಲ' ಎಂಬ ನಾಣ್ಣುಡಿಯೊಂದು ನಮ್ಮಲ್ಲಿದೆ. ಈ ಕಾಯಕದಲ್ಲಿ ಮಾನವೀಯ ಮೌಲ್ಯವೂ ಸಹ ಅಡಕವಾಗಿದೆ.

ಗುರುಮಲ್ಲೇಶ್ವರರು ತಮ್ಮ ಗುರುಗಳಾದ ಮಹಾಲಿಂಗೇಶ್ವರ ಮಠದ ಬೆತ್ತಲೆ ಗುಂಡೆಶ್ರೀಗಳಿಂದ ಅನುಗ್ರಹಪೂರ್ವಕವಾಗಿ ಪಡೆದದ್ದು ಕಂತೆಭಿಕ್ಷದ ಕಾಯಕ. ಈ ಕಾಯಕವನ್ನು ಇವರು ತ್ರಿಕರಣಪೂರ್ವಕವಾಗಿ ನಡೆಸಿಕೊಂಡು ಬಂದು, ಶತಮಾನ ಕಳೆದರೂ ಅವರು ಸಂಸ್ಥಾಪಿಸಿದ ದೇವನೂರು ಮಠ ಹಾಗೂ ಅದರ ನೂರಾರು ಶಾಖಾಮಠಗಳಲ್ಲಿ ಈ ಕಾಯಕ ಅನೂಚಾನವಾಗಿ ನಡೆದುಕೊಂಡು ಬರುವಂತೆ ಆಶೀರ್ವದಿಸಿದ್ದಾರೆ.

೪. ದಾಸೋಹಂಭಾವವನ್ನು ಬೆಳೆಸಿರುವುದು: ಕಾಯಕವಿಲ್ಲದೆ ದಾಸೋಹವಿಲ್ಲ, ದಾಸೋಹವಿಲ್ಲದೆ ಕಾಯಕ ಸಾರ್ಥಕವಾಗುವುದಿಲ್ಲ. ಕಾಯಕದ ಸಾರ್ಥಕತೆ ಇರುವುದೇ ದಾಸೋಹದಲ್ಲಿ. ದಾಸೋಹಂಭಾವ ಮನುಷ್ಯನ ಅಂತರಂಗ ಬಹಿರಂಗ ಗರ್ವಗಳನ್ನು ಹೊಡೆದೋಡಿಸುತ್ತದೆ. ವ್ಯಕ್ತಿಗೆ ಪ್ರಸಾದ ಲಭಿಸುವುದೇ ದಾಸೋಹದಿಂದ. ಇಂತಹ ಪ್ರಸಾದದಿಂದ ಇಂದ್ರಿಯಗಳು ಶುದ್ಧವಾಗುತ್ತದೆ. ದಾಸೋಹವನ್ನು ವೀರಶೈವರು ಅಪರಿಗ್ರಹವೆನ್ನುತ್ತಾರೆ. ಈ ದಾಸೋಹ ತ್ರಿಕರಣಪೂರ್ವಕವಾಗಿ ನಡೆಯಬೇಕು. ಕಾಯದ ದಾಸೋಹದಿಂದ ಸಾಮಾಜಿಕ ಹಿತ, ವಾಚಾ ಮಾಡುವ ದಾಸೋಹದಿಂದ ಭಗವಂತನ ಕಾನೂನು ಪಾಲನೆ ಮತ್ತು ಮನಸಾ ಮಾಡುವ ದಾಸೋಹದಿಂದ ಅಸಮಾನತ ದೂರವಾಗುತ್ತದೆ. ಈ ರೀತಿಯ ದಾಸೋಹ ಗುರುಲಿಂಗಜಂಗಮ ಸೇವೆಯ ಮೂಲಕ

ನಡೆಯಬೇಕು. ಇಂತಹ ದಾಸೋಹದಿಂದ ಮನುಷ್ಯನಲ್ಲಿ ಕಿಂಕರಭಾವ ಮೂಡುತ್ತದೆ. ಇದರಿಂದ ಶಂಕರತ್ವವು ಸಿದ್ಧಿಸುತ್ತವೆ. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಅಣ್ಣನವರ ಸೂಕ್ತಿಗೆ ಪೂರಕವಾದ ತತ್ವವೇ ದಾಸೋಹತತ್ವ.

ಈ ತತ್ವವನ್ನು ಸಹ ನಿಜಾಚರಣೆಗೆ ತಂದವರು ಗುರುಮಲ್ಲೇಶ್ವರರು. ಅನ್ನದಾಸೋಹ, ಧಾನ್ಯದಾಸೋಹವನ್ನು ನಿರಂತರವಾಗಿ ನಡೆಸಿಕೊಂಡು ಬರುವಂತೆ ಈ ಭಾಗದ ಜನರ ಮೇಲೆ ಪ್ರಭಾವ ಬೀರಿರುವವರು ಇವರು. ತಾವು ಅನುಷ್ಠಾನ ಗೊಳಿಸಿದ ಕಂತೆಭಿಕ್ಷ ಕಾಯಕಕ್ಕೆ ಪೂರಕವಾಗಿ ಈ ತತ್ವವನ್ನು ಅವರು ಆಚರಿಸಿದರು. ಆ ಕಾರಣಕ್ಕಾಗಿಯೇ ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠದ ಶಾಖಾಮಠಗಳನ್ನು ಭಿಕ್ಷದ ಹಾಗೂ ದಾಸೋಹದ ಮಠಗಳು ಎನ್ನುತ್ತಾರೆ. ಈ ಮಠಗಳ ಜಂಗಮರು ಸದಾ ಮುಗಿದ ಕೈ, ಬಾಗಿದ ತಲೆಯವರಾಗಿ ಯಾವುದೇ ವ್ಯತ್ಯಾಸವೆನಿಸದೆ ಜಂಗಮರಿಗೆ ಶಿರಬಾಗಿ ನಮಿಸುತ್ತಾರೆ. ಇಂದಿಗೂ ದೇವನೂರು ಮಠದಲ್ಲಿ ನಿತ್ಯ ಸಹಸ್ರಾರು ಮಂದಿಗೆ ನಿತ್ಯ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ನಿರ್ವಂಚಕ ಗುರುಲಿಂಗ ಜಂಗಮಕ್ಕೆ ದಾಸೋಹವ ಮಾಡಲು ತನು ಕೆಡದು, ಮನ ಕೆಡದು, ಧನ ಕೆಡದು, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ಎಂಬಂತೆ, ದೇವನೂರು ಮಠದ ಭಕ್ತರು ಇಂದಿಗೂ ಗುರುಲಿಂಗಜಂಗಮಕ್ಕೆ ತನುಮನಧನಗಳನ್ನು ಭಕ್ತಿಪೂರ್ವಕವಾಗಿ ಸಮರ್ಪಿಸಿ ಕೊಳ್ಳುತ್ತಿದ್ದಾರೆ. ಇದನ್ನು ಗಮನಿಸಿದಾಗ ಗುರುಮಲ್ಲೇಶ್ವರರು ಬಸವಾದಿ ಪ್ರಮಥರ ದಾಸೋಹತತ್ವದ ಅನುಷ್ಠಾನದ ವಿಷಯದಲ್ಲಿ ಅದ್ಭುತವಾದ ಸಾಧನೆ ಮಾಡಿದ್ದಾರೆ ಎನ್ನಬಹುದು.

೫. ಮಹಿಳಾ ಕಲ್ಯಾಣ: ಸಮಾಜದಲ್ಲಿ ಕಂಡುಬರುತ್ತಿದ್ದ ಲಿಂಗ ಅಸಮಾನತೆಯನ್ನು ಹೋಗಲಾಡಿಸಿ ಅವರಿಗೆ ಸಮಾನತೆ ಕೊಡಲು ಪ್ರಯತ್ನಿಸಿದವರು ಬಸವ ಪರಂಪರೆಯವರು. ಸ್ತ್ರೀಯರಿಗೆ ಎಲ್ಲಾ ರೀತಿಯ ಅವಕಾಶಗಳನ್ನು ಕಲ್ಪಿಸಿ ಸಮಾಜದ ಮುಂಚೂಣಿಗೆ ತರುವಲ್ಲಿ ಬಸವಣ್ಣನವರು ಸಾಕಷ್ಟು ಪರಿಶ್ರಮಿಸಿದರು. ಆದರೆ ದುರ್ದೈವ, ಕಲ್ಯಾಣ ಕ್ರಾಂತಿಯ ನಂತರ ನಮ್ಮ ಸಮಾಜದಲ್ಲಿ ಮತ್ತೆ ಹೆಣ್ಣಿನ ಸ್ಥಾನಮಾನಗಳಿಗೆ ಧಕ್ಕೆ ಉಂಟಾಯಿತು. ವರದಕ್ಷಿಣೆ, ದೇವದಾಸಿ ಪದ್ಧತಿ ಮೊದಲಾದವುಗಳ ಹೆಸರಿನಲ್ಲಿ ಹೆಣ್ಣಿನ ಶೋಷಣೆ ಪ್ರಾರಂಭಗೊಂಡಿತು. ಆದರೆ, ಮಹಾತ್ಮ ಗುರುಮಲ್ಲೇಶ್ವರರು ಮಹಿಳಾ ಕಲ್ಯಾಣದ ಬಗೆಗೂ ಚಿಂತಿತರಾಗಿ ಕಾರ್ಯೋನ್ಮುಖರಾದರು. ಈ ದಿಕ್ಕಿನಲ್ಲಿ ಅವರು ನಿತ್ಯ ಸುಮಂಗಳೆಯಾದ ಕುಲಗಾಣದ ಪುಟ್ಟಮ್ಮನವರಿಗೆ ಲಿಂಗತತ್ವೋಪದೇಶ ಮಾಡಿ ಅವಳನ್ನು ಸಾತ್ವಿಕಮಾರ್ಗಕ್ಕೆ ತಂದರು. ದೇವದಾಸಿ ಕುಟುಂಬಕ್ಕೆ ಸೇರಿದ ಮೂಗೂರಿನ ದೇವಾಜಮ್ಮ ಹಾಗೂ ನಟುವರ ದೇವಣ್ಣನವರಿಗೂ ಲಿಂಗೋಪದೇಶ ಮಾಡಿ ಸಮಾಜದಲ್ಲಿ ಅವರಿಗೆ ಗೌರವ ತಂದುಕೊಟ್ಟರು. ಗುರುಮಲ್ಲೇಶ್ವರರು ಸ್ತ್ರೀ-ಪುರುಷ ಭೇದವೆಣಿಸದೆ ಎಲ್ಲರಿಗೂ ಉಪದೇಶ ನೀಡಿದರು. ಈ ಕಾರಣಕ್ಕಾಗಿಯೇ

ಇಂದಿಗೂ ದೇವನೂರು ಮಠಕ್ಕೆ ಅಸಂಖ್ಯಾತ ಮಹಿಳಾ ಭಕ್ತರಿದ್ದಾರೆ. ಅವರೆಲ್ಲ ಸುಸಂಸ್ಕೃತರೂ ಆಗಿದ್ದಾರೆ.

೬. **ಸಮಾನ ಮನೋಭಾವವನ್ನು ಬೆಳೆಸಿದ್ದು** : ಬಹು ಹಿಂದಿನಿಂದಲೂ ನಮ್ಮ ಸಮಾಜದಲ್ಲಿ ಮೇಲು-ಕೀಳು, ಬಡವ-ಬಲ್ಲಿದ, ಮಾಲೀಕ-ಕಾರ್ಮಿಕ, ಸ್ತ್ರೀ-ಪುರುಷ ಎನ್ನುವ ಭೇದಭಾವಗಳು ಅಸ್ತಿತ್ವದಲ್ಲಿದ್ದವು. ಇವು ಸಬಲರಿಂದ ದುರ್ಬಲರ ಶೋಷಣೆಗೂ ಅವಕಾಶ ಮಾಡಿದ್ದುಂಟು. ಸಾಮಾಜಿಕ, ಧಾರ್ಮಿಕ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಈ ವರ್ಗಗಳ ನಡುವೆ ವ್ಯತ್ಯಾಸಗಳನ್ನು ಮಾಡಲಾಗುತ್ತಿತ್ತು. ಈ ಎಲ್ಲಾ ವ್ಯತ್ಯಾಸಗಳನ್ನು ನಿವಾರಿಸುವ ದೃಷ್ಟಿಯಿಂದ ೧೨ನೇ ಶತಮಾನದ ಶರಣರು ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಕ್ರಾಂತಿ ಮಾಡಿದರು. ಎಲ್ಲಾ ಭೇದಭಾವ ಗಳನ್ನು ಮರೆತು ಅವರು ಮಾನವೀಯತೆಗೆ ಬೆಲೆ ಕೊಟ್ಟರು. ವ್ಯಕ್ತಿಯ ಯೋಗ್ಯತೆಗೆ ಬೆಲೆ ಕೊಡುವಂತೆ ಮಾಡಿದರು. ಕಾಯಕ-ದಾಸೋಹ ತತ್ವಗಳ ಮೂಲಕ ಯಾವುದೇ ತರತಮ ಭೇದವಿರದ ಸರ್ವಸಮಾನ ಮನೋಭಾವದ ಸಮಾಜವನ್ನು ನಿರ್ಮಿಸ ಬಯಸಿದರು. ಬಸವ ಪರಂಪರೆಯ ತತ್ವಗಳನ್ನು ಸಮಾಜದಲ್ಲಿ ಮತ್ತೆ ಸ್ಥಿರೀಕರಿಸುವ ಕಾರ್ಯದಲ್ಲಿ ತೊಡಗಿದ ಗುರುಮಲ್ಲೇಶ್ವರರು ಸಹ ಯಾವುದೇ ವರ್ಗ, ಲಿಂಗ, ಮಡಿ, ಮೈಲಿಗೆ, ಬಡವ, ಬಲ್ಲಿದರೆಂಬ ಭೇದವೆಣಿಸದೆ ಲಿಂಗತತ್ವೋಪದೇಶ ಮಾಡಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಿದ್ದರು. ಶ್ರೀಗಳವರು ಹೀಗೆ ಉಪದೇಶ ನೀಡುವಾಗ ಜನರ ಬಾಹ್ಯ ಆಡಂಬರಕ್ಕಿಂತ ಅಂತರಂಗದ ಶುದ್ಧತೆಗೆ ಮಾನ್ಯತೆ ನೀಡುತ್ತಿದ್ದರು. ಮೈಸೂರು ಮಹಾರಾಜರಾದಿಯಾಗಿ, ಮುಸ್ಲಿಮರಾದ ಮೌಲಾನಾ ಪೀರ್ ಮತ್ತು ಅವನ ತಾಯಿ, ಬ್ರಾಹ್ಮಣರಾದ ಮಾಧವರಾಯರು ಹಾಗೂ ಸಮಾಜದಲ್ಲಿ ಶೋಷಣೆಗೊಳಗಾಗಿದ್ದ ವಿವಿಧ ಶೋಷಿತ ವರ್ಗದ ಜನರಿಗೂ ಉಪದೇಶ ನೀಡಿದ ಗುರುಮಲ್ಲೇಶ್ವರರು ಅಣ್ಣನವರು ಹೇಳಿರುವ ಹಾಗೆ 'ಇವನಾರವ ಇವನಾರವ, ಇವನಾರವ ಎಂದೆನಿಸದೆ ಇವ ನಮ್ಮವ ಇವ ನಮ್ಮವ, ಇವ ನಮ್ಮವನೆಂದೆನಿಸುತ್ತಿದ್ದರು.'

೭. **ಸಮನ್ವಯತೆ:** ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮ ವಿಶೇಷವೆಂದು, ಕಂಥೆ ಬೊಂತೆಯ ಜಂಗಮ ಬಂದಡೆ ಹೀನನೆಂದು, ಕಂಡೆನಾದಡೆ ಪಂಚಮಹಾಪಾತಕ! ಇದು ಕಾರಣ ಅನ್ನ, ವಸ್ತ್ರ, ಧನ ಮಾಟದಲ್ಲಿ ಎರಡಾಗಿ ಕಂಡೆನಾದಡೆ ನರಕದಲ್ಲಿಕ್ಕುವ ಕೂಡಲ ಸಂಗಮದೇವಾ! -ಬೆಲೆ ಬಾಳುವ ವಸ್ತ್ರವನ್ನು ಧರಿಸಿ ಬಿರುದು ಬಾವಲಿಗಳನ್ನು ಒಳಗೊಂಡು ಬರುವ ಜಂಗಮರು ಶ್ರೇಷ್ಠರೆಂದು, ಹರಕು ಚಿಂದಿಬಟ್ಟೆ ಧರಿಸಿ ಬರುವ ಜಂಗಮರು ಕೀಳೆಂದು ಭಾವಿಸಿ; ತಾವು ನೀಡುವ ಅನ್ನ, ಬಟ್ಟೆ, ಕಾಣಿಕೆಗಳಲ್ಲಿ ಎರಡಾಗಿ ಕಂಡಡೆ ಅದು ಪಂಚಮಹಾಪಾತಕ. ಆಗ ಭಗವಂತ ತನ್ನನ್ನು ನರಕದಲ್ಲಿಕ್ಕುವ ಎಂದು ಬಸವಣ್ಣನವರು ತಮ್ಮ ಈ ವಚನದಲ್ಲಿ ಹೇಳುತ್ತಾರೆ. ಅಂದರೆ ಅಣ್ಣನವರು ಎಲ್ಲರನ್ನು ಒಂದೇ ರೀತಿ ಕಾಣುವ ಆಶಯವನ್ನು ಹೊಂದಿದ್ದಾರೆ. ಆಚಾರ-ವಿಚಾರಗಳಲ್ಲಿ ಅಭಿನವ ಬಸವೇಶ್ವರರೇ ಆದ ಗುರುಮಲ್ಲೇಶ್ವರರು ಸಹ ತಮ್ಮ ಮಠಕ್ಕೆ ಯಾರೇ ಜಂಗಮರು

ಬಂದರೂ ಅವರಲ್ಲಿ ಭೇದವೆಣಿಸದೆ ಎಲ್ಲರನ್ನು ಸಮನ್ವಯ ದೃಷ್ಟಿಯಿಂದ ನೋಡುತ್ತಿದ್ದರು. ಗೌರವಿಸಿ ಆದರಿಸುತ್ತಿದ್ದರು. ನಾವು ಮೇಲೆಂದು ಭಾವಿಸಿ ಇವರ ಬಳಿ ಬಂದು, ಇವರ ವಿಚಾರ-ಆಚಾರಗಳನ್ನು ನೋಡಿ ತಮ್ಮ ಅಹಂ ಕಳೆದುಕೊಂಡಿರುವುದು ಉಂಟು. ವಿಶೇಷವಾಗಿ ಗುರುಮಲ್ಲೇಶ್ವರರು ಗುರು-ವಿರಕ್ತರ ಸಮನ್ವಯ ಮಾಡಿದ್ದು ಸಹ ಒಂದು ದೊಡ್ಡ ಸಾಧನೆ ಎನ್ನಬಹುದು. ಶತಮಾನ ಕಳೆದರೂ ದೇವನೂರಿನ ಮಠದಲ್ಲಿ ಈ ಸಮನ್ವಯತೆ ಹಾಗೆ ಮುಂದುವರೆದಿದೆ.

೮. ಭಿಕ್ಷದ (ದಾಸೋಹದ) ಮಠಗಳ ಸ್ಥಾಪನೆ: ಮಹಾತ್ಮ ಗುರುಮಲ್ಲೇಶ್ವರರ ಮತ್ತೊಂದು ಮುಖ್ಯವಾದ ಸಾಧನೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಭಿಕ್ಷದ (ದಾಸೋಹದ) ಮಠಗಳ ಸ್ಥಾಪನೆ ಮಾಡಿದ್ದು. ಭಕ್ತರ ಕೋರಿಕೆಯಂತೆ ಊರಿಂದೂರಿಗೆ ಸಂಚರಿಸುತ್ತಿದ್ದ ಗುರುಮಲ್ಲೇಶ್ವರರು ತಾವು ತಂಗುತ್ತಿದ್ದ ಅನೇಕ ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪಿಸಿ, ಅಲ್ಲೊಬ್ಬರು ಜಂಗಮರನ್ನಿರಿಸಿ ಕಂತೆಭಿಕ್ಷದ ಕಾಯಕ ಮಾಡಿ, ನಿತ್ಯ ಅನ್ನದಾಸೋಹ ಮಾಡುವುದರ ಜೊತೆಗೆ ಶಿವಾನುಭವ ಗೋಷ್ಠಿ, ಶಿವಭಜನೆ ಮೊದಲಾದ ಚಟುವಟಿಕೆಗಳು ನಿರಂತರ ನಡೆಯುವಂತೆ ಆಶೀರ್ವದಿಸಿದ್ದಾರೆ. ಅವರ ಕಾಲದಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆ, ಚೆನ್ನನಿಂಗನಹಳ್ಳಿ, ಜಿ.ಕೆ. ಹೊಸೂರು ಗ್ರಾಮಗಳಲ್ಲಿ, ಚಾಮರಾಜನಗರ ತಾಲ್ಲೂಕಿನ ಬದನಗುಪ್ಪೆ ಮತ್ತು ಉಡಿಗಾಲ ಗ್ರಾಮಗಳಲ್ಲಿ ಹಾಗೂ ಟಿ. ನರಸೀಪುರ ತಾಲ್ಲೂಕಿನ ಮೂಗೂರು ಮತ್ತು ಕುರುಬೂರು ಗ್ರಾಮಗಳಲ್ಲಿ ಭಿಕ್ಷದ ಮಠಗಳು ಪ್ರಾರಂಭವಾದವು. ಅನಂತರ ದೇವನೂರು ಮಠದ ಗುರುಪರಂಪರೆಯ ವಿವಿಧ ಶ್ರೀಗಳವರು ಸಹ ತಮ್ಮ ತಮ್ಮ ಸೇವಾವಧಿಯಲ್ಲಿ ಇಂಥ ಮಠಗಳ ಸ್ಥಾಪನೆಯ ಕೈಂಕರ್ಯವನ್ನು ಮುಂದುವರೆಸಿದರು. ಪರಿಣಾಮವಾಗಿ ಒಂದು ಅಂದಾಜಿನ ಪ್ರಕಾರ ದೇವನೂರು ಮಠಕ್ಕೆ ಮೂರು ನೂರಕ್ಕೂ ಹೆಚ್ಚಿನ ಭಿಕ್ಷದ ಶಾಖಾಮಠಗಳಿವೆ. ಗುರುಮಲ್ಲೇಶ್ವರರಿಂದ ಚಾಲನೆಗೊಂಡ ಈ ಮಠಗಳು ಯಾವುದೇ ನಿರ್ದಿಷ್ಟವಾದ ಪಂಥ, ಸ್ಥಲ, ವಂಶಪಾರಂಪರ್ಯದ ಆಡಳಿತಕ್ಕೆ ಒಳಪಡೆದ ಸ್ವತಂತ್ರ ಅಸ್ತಿತ್ವವುಳ್ಳವಾಗಿವೆ. ಇವು ಶರಣಸ್ಥಲಕ್ಕೆ ಸೇರಿದ ಮಠಗಳಾಗಿವೆ. ಸಮಷ್ಠಿಯ ಹಿತಕ್ಕಾಗಿ ಸ್ಥಾಪನೆಯಾದ ಮಠಗಳಾಗಿವೆ. ಇಂತಹ ಮಠಗಳ ಮೂಲಕ ಮಹಾತ್ಮ ಗುರುಮಲ್ಲೇಶ್ವರರು 'ಕಾಯಕ ಮತ್ತು ದಾಸೋಹ' ತತ್ವಗಳನ್ನು ಜಂಗಮವಾಗಿಸಿ ಸಮಾಜ ಸದಾ ಕ್ರಿಯಾಶೀಲವಾಗುವಂತೆ ಮಾಡಿದ್ದಾರೆ.

ಮಹಾತ್ಮ ಗುರುಮಲ್ಲೇಶ್ವರರು ಕೆಲವು ಪವಾಡಗಳನ್ನು ಮೆರೆದಿದ್ದರೆಂಬುದು ಭಕ್ತರ ಅಭಿಪ್ರಾಯವಾಗಿದೆ. ಉಪಮಿಸಬಾರದ ಉಪಮಾತೀತರು ನಿಮ್ಮ ಶರಣರು ಅನ್ನುವ ಬಸವಣ್ಣನವರ ವಾಣಿಯಂತೆ ಉಪಮಿಸಲಾರದ ಶರಣರಾದ ಗುರು ಮಲ್ಲೇಶ್ವರರು ಕರುಳ ಪವಾಡ, ಪ್ರಾಣದಾನ ಪವಾಡ, ಬ್ರಹ್ಮಪಿಶಾಚಿಯನ್ನು ಮುಕ್ತಗೊಳಿಸಿದ ಪವಾಡ, ಖಾಲಿಯಾಗಿದ್ದ ಗುಳಿ ತುಂಬಾ ಜೋಳ ಮಾಡಿದ ಪವಾಡ,

ಪೋಳಿಗೆ ಪವಾಡ, ತಂಗಳನ್ನ ಬಿಸಿ ಮಾಡಿದ ಪವಾಡಗಳು ಗುರುಮಲ್ಲೇಶ್ವರರ ಬದುಕಿನ ಸುತ್ತ ಹೆಣೆದಿವೆ. ಇವೆಲ್ಲವೂ ಸಮಾಜದ ಒಳಿತಿಗೆ ಘಟಿಸಿರುವಂತಹವು ಎಂದರೆ ತಪ್ಪಾಗಲಾರದು. ಈ ಎಲ್ಲಾ ಪವಾಡಗಳಿಗಿಂತ, ಮಹಾತ್ಮ ಗುರುಮಲ್ಲೇಶ್ವರರು ಬಸವಾದಿ ಶರಣರ ಕಾಯಕ, ದಾಸೋಹ, ಮಾನವೀಯತೆ, ಸಮಾನತೆ, ಧಾರ್ಮಿಕತೆ ವಿಚಾರಗಳಲ್ಲಿ ಮಾಡಿರುವ ಸಾಧನೆಗಳೇ ನಿಜವಾದ ಪವಾಡಗಳು ಎಂದರೆ ತಪ್ಪಾಗಲಾರದು. ತಮ್ಮ ಕರುಳ ಪವಾಡದ ಹಿನ್ನೆಲೆಯಲ್ಲಿ ಕಾಣಿಕೆ ನೀಡಬಂದ ಮೈಸೂರು ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಕಾಯಕದ ಮಹತ್ವವನ್ನು ತಿಳಿಸಿ ಸ್ವತಃ ಮಹಾರಾಜರೇ ಮಾರುವೇಷದಲ್ಲಿ ಕಾಯಕ ಮಾಡಿ ಕಾಣಿಕೆ ತಂದು ಒಪ್ಪಿಸುವಂತೆ ಮಾಡಿದವರು ಗುರುಮಲ್ಲೇಶ್ವರರು. ಬಸವ ತತ್ವಗಳನ್ನು ತಮ್ಮ ಅಮೃತಹಸ್ತದಲ್ಲಿಟ್ಟು ಪೊರೆದವರು ಇವರು. ಶರಣರು ಹೇಗೆ ನಡೆ-ನುಡಿಗಳಲ್ಲಿ ಒಂದಾದ ಬದುಕನ್ನು ಸಾಗಿಸಿದರೋ ಹಾಗೆಯೇ ಗುರುಮಲ್ಲೇಶ್ವರರು ಸಹ ವಿಚಾರ-ಆಚಾರಗಳಲ್ಲಿ ಏಕವಾಗಿದ್ದುಕೊಂಡು ಸಮಕಾಲೀನರಿಂದ 'ಆಚರಣೆಯ ಗುರುಮಲ್ಲಪ್ಪ'ನೆಂದು ಕರೆಸಿಕೊಂಡಿದ್ದರು. ಗುರುಮಲ್ಲೇಶ್ವರರು ಲಿಂಗವಾಗಿ (೧೮೯) ಶತಮಾನ ಕಳೆದರೂ ದೇವನೂರಿನ ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠದಲ್ಲಿ ಅನ್ನದಾಸೋಹಕ್ಕಾಗಿ ಅನುಷ್ಠಾನಗೊಳಿಸಿದ ಕಂತೆಭಿಕ್ಷದ ಕಾಯಕ, ದೇವನೂರು ಮಠದಲ್ಲಿ ಅಷ್ಟೇ ಅಲ್ಲ, ಅದರ ನೂರಾರು ಶಾಖಾಮಠಗಳಲ್ಲೂ ಇಂದಿಗೂ ಚ್ಯುತಿಬಾರದೆ ಹಾಗೆ ನಡೆದುಕೊಂಡು ಬರುತ್ತಿದ್ದು ನಿತ್ಯ ಅನ್ನದಾಸೋಹದ ಕಾರ್ಯ ನಡೆಯುತ್ತಿದೆ. ಅನ್ನದಾಸೋಹಕ್ಕಾಗಿ ಶತಮಾನದ ಹಿಂದೆ ಹಚ್ಚಿದ ಬೆಂಕಿ ಇಂದಿಗೂ ಆರಿಲ್ಲ. ಭಕ್ತಿ ಪ್ರಧಾನವಾದ, ಭಕ್ತರ ಮಠ ಇದಾಗಿದೆ. ಬಹುಬೇಗ ಜನಸಾಮಾನ್ಯರನ್ನು ತನ್ನತ್ತ ಆಕರ್ಷಿಸಿದ ಮಠ ಇದು. ಈ ಮಠದ ನಿಜವಾದ ಸಂಪತ್ತು ಭಕ್ತರೇ ಆಗಿದ್ದಾರೆ. ಕಂತೆಭಿಕ್ಷದ ಕಾಯಕ ಹಾಗೂ ನಿತ್ಯ ಅನ್ನದಾಸೋಹಗಳೇ ಈ ಮಠದ ಆಧಾರ ಸ್ತಂಭಗಳು. ಆದರೆ ಬದಲಾದ ಕಾಲಮಾನ ಹಾಗೂ ಅವಶ್ಯಕತೆಗಳ ದೃಷ್ಟಿಯಿಂದ ಈ ಎರಡು ತತ್ವಗಳ ಜೊತೆಗೆ ಶ್ರೀಮಠದ ಇಂದಿನ ಪೀಠಾಧಿಪತಿಗಳಾದ ಶ್ರೀ ಮಹಾಂತ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ ಗುರುಮಲ್ಲೇಶ್ವರರ ಮಹಾವಿದ್ಯಾಪೀಠವನ್ನು ಸ್ಥಾಪಿಸಿ, ಕೆಲವು ವಿದ್ಯಾರ್ಥಿನಿಲಯಗಳು, ಪ್ರೌಢಶಾಲೆಗಳು, ಕಿರಿಯ ಕಾಲೇಜು, ಪಾಲಿಟೆಕ್ನಿಕ್ ಹಾಗೂ ಐ.ಟಿ.ಐ. ಕಾಲೇಜುಗಳನ್ನು ಪ್ರಾರಂಭಿಸಿ ಜ್ಞಾನಾನ್ನ ದಾಸೋಹ ಕಾರ್ಯವನ್ನು ಮಾಡುತ್ತಿದೆ. ಮಹಾತ್ಮ ಗುರುಮಲ್ಲೇಶ್ವರರ ಆಶೀರ್ವಾದದ ಬಲದಿಂದ ದೇವನೂರು ಮಠ ಇಂದು ಒಂದು ಜಾಗೃತ ಸ್ಥಳವಾಗಿದೆ. ಬಸವಾದಿ ಶರಣರ ತತ್ವಗಳೇ ಈ ಮಠದ ಜೀವಾಳ. ಬಸವತತ್ವಗಳ ಸಂರಕ್ಷಣೆ, ಆಚರಣೆ ಬೋಧನೆಗಳೆ ಶ್ರೀಮಠದ ಮಹಾಮಣಿಹವಾಗಿದೆ.

■

ದೇವನೂರು ಮಠದ ಗುರು ಪರಂಪರೆ

■ ಪ್ರೊ. ಮಲೆಯೂರು ಗುರುಸ್ವಾಮಿ
೬೩೫, ಮಹಾಮನೆ, ಆಶ್ರಮ ರಸ್ತೆ, ಹಿನಕಲ್, ಮೈಸೂರು-೧೭

ಶ್ರೀಮಠದ ಗುರುಪರಂಪರೆಗೆ ಸುದೀರ್ಘವಾದ ಚರಿತ್ರೆ ಇಲ್ಲದೇ ಇದ್ದರೂ, ದೀರ್ಘಕಾಲ ಜನಮಾನಸವನ್ನು ಬೆಳ್ಳಂಬೆಳಕಾಗಿಸುವ ಸಾಧಕ ಶ್ರೇಷ್ಠರು ಶ್ರೀಮಠದ ಸಾರಥ್ಯವನ್ನು ವಹಿಸುವುದರ ಮೂಲಕ ಸಮಾಜದಲ್ಲಿ 'ಶರಣ ಪ್ರಜ್ಞೆ' ಜೀವಂತವಾಗಿರುವಂತೆ ಮಾರ್ಗದರ್ಶನ ಮಾಡಿದ್ದಾರೆ.



ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೇವನೂರು, ಶ್ರೀ ಗುರು ಮಲ್ಲೇಶ್ವರರ ಸಾಧನಾ ಕ್ಷೇತ್ರ. ಇವರ ಪೂರ್ವಾಶ್ರಮದ ತಂದೆ-ತಾಯಿಗಳು ಶಿವಮೊಗ್ಗ ಜಿಲ್ಲೆಯ ನ್ಯಾಮತಿ ಬಳಿಯ ಸವುಳಂಗದವರು. ಕಾರಣಾಂತರಗಳಿಂದ ಅವರು ಮೈಸೂರು ನಗರದ ದೀವಟಿಗೆ ಬೀದಿಯಲ್ಲಿದ್ದ (ಇಂದಿನ ಬಸವೇಶ್ವರ ರಸ್ತೆ) ಚೌಕಿಮಠಕ್ಕೆ ಬಂದು ಆಶ್ರಯ ಪಡೆಯುತ್ತಾರೆ. ಶ್ರೀ ಗುರು ಮಲ್ಲೇಶ್ವರರು ಬಾಲ್ಯ ಮತ್ತು ಯೌವನದ ದಿನಗಳಲ್ಲಿಯೇ ತಮ್ಮ ಸಾಧನೆಯ ಸಾಧ್ಯತೆಗಳನ್ನು ಮೆರೆದದ್ದು ಇಲ್ಲಿಯೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಕರುಳು ಪವಾಡವನ್ನು ಮಾಡುವುದರ ಮೂಲಕ ರಾಜಪೂಜಿತರೂ ಆಗಿ, ಅಂದಿನ ಅರಮನೆಯ ಆಪ್ತವಲಯದಲ್ಲಿ ಮಾತ್ರವಲ್ಲ, ಈ ಪ್ರಾಂತ್ಯದಲ್ಲೆಲ್ಲಾ ಮನೆಮಾತಾಗುತ್ತಾರೆ. ಬಹುದೊಡ್ಡ ಅಂಗಸಾಧಕರೂ, ಯೋಗಪಟು ಗಳೂ ಆಗಿದ್ದ ಗುರುಮಲ್ಲೇಶ್ವರರು ಮುಸಲ್ಮಾನ್ ವರ್ಗದವರಲ್ಲಿಯೂ ಭಕ್ತಿಭಾವಕ್ಕೆ ಭಾಜನರಾಗಿರುತ್ತಾರೆ. ಮೈಸೂರು

ನಗರದ ಮೌಲಾನ ಫೀರ್ ಇವರ ಅನುಯಾಯಿ ಯಾಗಿದ್ದ. "ಕಂಥೆ ಭಿಕ್ಷದ ಕಾಯಕ"ದ ಪರಿಕಲ್ಪನೆಗೆ ಒಂದು ವಿಶೇಷವಾದ ಆಯಾಮವನ್ನು ತಂದುಕೊಟ್ಟವರು ಇವರು. ಇಂದಿಗೂ ಈ ಮಠದ ಪರಂಪರೆಗೆ ಸೇರಿದ ಮಠಗಳು ಈ ಕಾಯಕವನ್ನು ನಿರಂತರವಾಗಿ ಮುಂದುವರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎನ್ನುವ ಮಾತಿಗೆ ಈ ಕಾಯಕದಲ್ಲಿ ಅನೇಕ ಸಮಾಜೋಧಾರ್ಮಿಕ ಸೂಕ್ಷ್ಮಗಳನ್ನು ಗುರುತಿಸಬಹುದು. ಒಂದು ಸಮೂಹ ಏಕೋಭಾವದಿಂದ ತಮ್ಮ ಪ್ರಾರ್ಥನೆಯನ್ನು ಸಲ್ಲಿಸುವ ನಾದ ಮಾಧ್ಯಮ ಭಜನೆ. ಇದೊಂದು ಜನಪದ ಕಲೆಯೂ ಹೌದು. ಇದು ಕೆಲವು ವಿಶೇಷ ದಿನಗಳಲ್ಲಿ ಭಕ್ತಸಮೂಹ ಇಡೀ ದಿನ 'ಜಾಗರ'ವಿರುವ ಸಮರ್ಥ ಸಾತ್ವಿಕ ಮಾಧ್ಯಮವೂ ಹೌದು. ಇಂತಹ ಒಂದು ವಿಶೇಷ ಪ್ರಕಾರವನ್ನು ಭಕ್ತಸಮೂಹದಲ್ಲಿ ಬೆಳೆಸಿದ ಕೀರ್ತಿ ಶ್ರೀ ಗುರುಮಲ್ಲೇಶ್ವರರಿಗೆ ಸಲ್ಲುತ್ತದೆ.

ಒಂದು ದುಷ್ಟಶಕ್ತಿಯ ಚೇಷ್ಟೆಯ ಪರಿಹಾರಾರ್ಥವಾಗಿ ಶ್ರೀ ಗುರು ಮಲ್ಲೇಶ್ವರರು ಮೈಸೂರು ನಗರದಿಂದ ದೇವನೂರಿಗೆ ಆಗಮಿಸುತ್ತಾರೆ. ಅಲ್ಲಿನ ಮುಖಂಡ ಪಟೇಲ್ ಸುಬ್ಬೇಗೌಡರ ಪತ್ನಿ ಶಂಕರಮ್ಮನವರು ಭೂತಚೇಷ್ಟೆಗೆ ಒಳಗಾಗಿ ಪರಿತಪಿಸುತ್ತಿದ್ದರು. ಅವರನ್ನು ಆ ಸಂಕಟದಿಂದ ಪಾರುಮಾಡಲು ಇಲ್ಲಿಗೆ ಬಂದ ಗುರುಮಲ್ಲೇಶ್ವರರು, ಭಕ್ತ ಜನರ ಕೋರಿಕೆಯ ಮೇರೆಗೆ ಅಲ್ಲಿಯೇ ನೆಲೆ ನಿಲ್ಲುತ್ತಾರೆ. ತಮ್ಮ ಸರಳ ಸಮಾಜ ಆಚಾರ-ವಿಚಾರಗಳಿಂದ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಅಪಾರ ಶಿಷ್ಯರನ್ನು ಸಂಪಾದಿಸುತ್ತಾರೆ. ನಿಂತಲ್ಲಿ ನಿಲ್ಲದೆ ನಿತ್ಯವೂ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುತ್ತಾ, ಭಕ್ತರ ಮನೆಗಳಲ್ಲಿಯೇ ವಾಸ್ತವ್ಯ ಮಾಡುತ್ತಾ, ಇಡೀ ರಾತ್ರಿ ಭಕ್ತಸಮೂಹದೊಡನೆ ಭಜನೆ ಮಾಡುತ್ತಾ ಅವರ ಹೃದಯಗಳಲ್ಲಿ ಸಾತ್ವಿಕತೆಯ ಬೀಜ ಮೊಳೆತು ಕುಡಿಯೊಡೆಯುವಂತೆ ಮಾಡುತ್ತಿದ್ದರು.


ಕೇವಲ ಒಂದುನೂರು ವರ್ಷಗಳ ಹಿಂದೆ ಇದ್ದಂತಹ ಈ ಮಹಾಪುರುಷರು ಜನಸಮೂಹದ ಮೇಲೆ ಬೀರಿದ ಪ್ರಭಾವ ವರ್ಣನಾತೀತವಾದುದು. ಈಗಲೂ ಈ ಭಾಗದಲ್ಲಿ ಸಹಪಂಕ್ತಿ ಭೋಜನ ಮಾಡುವ ಶುಭಕಾರ್ಯಗಳಲ್ಲಿ, ಮಠಮಾನ್ಯಗಳಲ್ಲಿ ಪ್ರಸಾದ ಸ್ವೀಕಾರ ಸಂದರ್ಭದಲ್ಲಿ "ಅಲಕ ನಿರಂಜನ ಶ್ರೀಗುರು ಮಲ್ಲೇಶ್ವರ ಮಹಾಪ್ರಭೋ" ಎಂದು ಏಕಕಂಠದಿಂದ, ಮೈಉಬ್ಬಿ, ಮನ ತುಂಬಿ ಉಗ್ಘಡಿಸುವುದನ್ನು ಕಾಣುತ್ತೇವೆ. ಈ ಭಾಗದಲ್ಲಿ ಪಟ್ಟದ ಮಠಗಳಿವೆ, ವಿರಕ್ತ ಮಠಗಳಿವೆ, ಗುರು ಮಠಗಳಿವೆ, ದಾಸೋಹ ಮಠಗಳಿವೆ. ಪ್ರಾದೇಶಿಕವಾಗಿ ಆಯಾ ಮಠಗಳಿಗೆ ತಕ್ಕಂತೆ ಶಿಷ್ಯಸಮುದಾಯವೂ ಇದೆ. ಆದರೆ ಈ ಎಲ್ಲ ಮಠಗಳಲ್ಲಿಯೂ ಸಹಪಂಕ್ತಿ ಭೋಜನದ ಸಂದರ್ಭದಲ್ಲಿ "ಶ್ರೀಗುರು ಮಲ್ಲೇಶ್ವರ"ರ ಹೆಸರನ್ನೇ ಉಗ್ಘಡಿಸುವುದು ಅನೂಚಾನವಾಗಿ ನಡೆದು ಬಂದಿದೆ. ಅಷ್ಟರಮಟ್ಟಿಗೆ ಅವರ ಪ್ರಭಾವ ಜನಮನದಲ್ಲಿ ಬೇರು, ಬಿಳಿಲುಗಳನ್ನು ಬಿಟ್ಟಿರುವುದು ಸರ್ವವಿಧಿತ.

ಭಿಕ್ಷದ ರಾಚಪ್ಪ ಸ್ವಾಮಿಗಳು: ಶ್ರೀ ಗುರುಮಲ್ಲೇಶ್ವರರು ಧರ್ಮಪ್ರಸಾರ ಮಾಡುವ ದಿನಗಳಲ್ಲಿ ಈ ಭಾಗದ ಕೆಲವು ದೊಡ್ಡ ಗ್ರಾಮಗಳಲ್ಲಿ ವಿಶೇಷವಾಗಿ ವಾಸ್ತವ್ಯ ಮಾಡುತ್ತಿದ್ದರು. ಅಂತಹ ಒಂದು ಊರು ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಮೂಗೂರು. ಇದು ಈ ಭಾಗದ ಒಂದು ಚರಿತ್ರಾರ್ಹವಾದ ಸ್ಥಳ. ತ್ರಿಪುರ ಸುಂದರಮ್ಮಣ್ಣಿ (ತಿಬ್ಬಾದೇವಿ) ಇಲ್ಲಿನ ಪ್ರಮುಖ ಗ್ರಾಮದೇವತೆ. ಕವಿ, ಕಲಾವಿದರು, ನರ್ತಕಿಯರಿಗೆ ಒಂದು ಕಾಲದಲ್ಲಿ ಆಶ್ರಯ ಕೊಟ್ಟಿದ್ದ ಗ್ರಾಮ. ರಾಜಮಹಾರಾಜರುಗಳ ಕಾಲದಲ್ಲಿ ಹೆಚ್ಚು ದೇವದಾಸಿಯರು ಇಲ್ಲಿ ವಾಸಿಸುತ್ತಿದ್ದರು. ಆ ವರ್ಗದಿಂದ ಬಂದಂತಹ ದೇವಣ್ಣ ಎನ್ನುವ ಶ್ರೀಮಂತ ವ್ಯಕ್ತಿ ಶ್ರೀ ಗುರುಮಲ್ಲೇಶ್ವರರ ಬಳಿಗೆ ಬಂದು, ದೇವದಾಸಿಯರ ಮನಸ್ಸನ್ನು ಪರಿವರ್ತಿಸಿ, ಅವರು ಸಾತ್ವಿಕ ಮಾರ್ಗದಲ್ಲಿ ಬದುಕಲು ಅನುವಾಗುವಂತೆ ಅವರಿಗೆ ದೀಕ್ಷೆ ನೀಡಬೇಕೆಂದು ಬೇಡಿಕೊಂಡು ತಮ್ಮ ವಾಸದ ಮನೆಯನ್ನೇ ಧರ್ಮ ಕೇಂದ್ರವನ್ನಾಗಿ ಪರಿವರ್ತಿಸಿದ್ದರು. ಈ ಹಿನ್ನೆಲೆಯಲ್ಲಿ ಪೂಜ್ಯರು ಆಗಾಗ ಮೂಗೂರಿಗೆ ತೆರಳಿ ವಾಸ್ತವ್ಯ ಹೂಡುತ್ತಿದ್ದರು. ಇವರ ಪ್ರಭಾವಕ್ಕೆ ಒಳಗಾದ ಅಲ್ಲಿನ ಎಲ್ಲ ದೇವದಾಸೀ ಕುಟುಂಬಗಳೂ ದೀಕ್ಷೆ ಪಡೆದು ಬದುಕಿನ ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮನ್ನು ಕಾಯಕದಲ್ಲಿ ತೊಡಗಿಸಿಕೊಂಡಿದ್ದರು.

ಈ ದಿನಗಳಲ್ಲಿ ಮೂಗೂರಿನ ಶ್ರೀಮಂತರ ಮನೆಯ ಯುವಕನೋರ್ವ ಗುರುಮಲ್ಲೇಶ್ವರರ ವ್ಯಕ್ತಿತ್ವಕ್ಕೆ ಮಾರುಹೋಗಿ ತನ್ನ ಶ್ರೀಮಂತ ಮನೆಯನ್ನು ತೊರೆದು ಗುರುಗಳ ಅನುಯಾಯಿಯಾಗುತ್ತಾನೆ. ಆ ಯುವಕನೇ ಮೂಗೂರಿನ ರಾಚಪ್ಪ. ಗುರುಮಲ್ಲೇಶ್ವರರ ನಂತರ ಅವರ ಗದ್ದುಗೆ ಪೂಜಾಕೈಂಕರ್ಯಗಳನ್ನು ಸಲ್ಲಿಸುತ್ತಾ, ಗುರುಮಲ್ಲೇಶ್ವರರ ತತ್ವಸಿದ್ಧಾಂತಗಳನ್ನು, ಆಚಾರ-ವಿಚಾರಗಳನು ಜನಸಮುದಾಯದಲ್ಲಿ ಬಿತ್ತುತ್ತಾ ಭಿಕ್ಷದ ರಾಚಪ್ಪಾಜಿ, ಭಿಕ್ಷದಾರ್ಯರೆಂದೇ ಖ್ಯಾತಿವಂತರಾಗುತ್ತಾರೆ.

ಸಕಲ ಭೋಗಭಾಗ್ಯಗಳ ನಡುವೆಯೇ ಬೆಳೆದ ರಾಚಪ್ಪ, ಅವೆಲ್ಲಕ್ಕೂ ತಿಲಾಂಜಲಿ ಇತ್ತು, ಶ್ರೀಮಂತಿಕೆಯನ್ನು ಪ್ರತಿನಿಧಿಸುವ ಬೆಲೆಬಾಳುವ ಉಡುಗೆ-ತೊಡುಗೆಗಳನ್ನು ತ್ಯಜಿಸಿ ಕರಿಚಕ್ಕಿನ ಅಂಗಿ, ಅದೇ ವರ್ಣದ ಚಡ್ಡಿ, ತಲೆಯ ಮೇಲೆ ಕುಬಾಲಿ, ಹಣೆಯಲ್ಲಿ ತ್ರಿಪುಂಡ್ರ, ಕೊರಳಲ್ಲಿ ರುದ್ರಾಕ್ಷಿಯನ್ನು ಧರಿಸಿಕೊಂಡು ಎಲ್ಲ ಮೋಹಗಳನ್ನು ತೊರೆದು ಕರ್ಮಯೋಗಿಯಾದದ್ದು ಹೀಗೆ.

ಶ್ರೀಮಠದ ಮೊತ್ತಮೊದಲ ಗುರುವಾಗಿ ಮೆರೆದ ಶ್ರೀ ರಾಚಪ್ಪನವರು ಮೇಲು ಕೀಳೆನ್ನದೆ ಎಲ್ಲ ಕರ್ತವ್ಯಗಳನ್ನೂ ಮಾಡತೊಡಗಿದರು. ದನದ ಕೊಟ್ಟಿಗೆಯಲ್ಲಿ ಕಸ ಗುಡಿಸುವುದರಿಂದ ಹಿಡಿದು, ಅಡುಗೆ ಮಾಡಿ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡುವುದು; ಶ್ರೀಮಠಕ್ಕೆ ಸೇರಿದ ಜಮೀನಿನಲ್ಲಿ ಸ್ವತಃ ನೇಗಿಲು ಹಿಡಿದು ಉಳುಮೆ ಮಾಡುವುದರಿಂದ ಹಿಡಿದು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಭಕ್ತಾದಿಗಳಿಂದ ಶ್ರೀಮಠಕ್ಕೆ ದಾಸೋಹಕ್ಕೆ ದವಸ ಧಾನ್ಯಗಳನ್ನು ಸಂಗ್ರಹಿಸಿ ತರುವುದು -ಹೀಗೆ



ಶ್ರೀ ಭಿಕ್ಷದಾರ್ಯರ ಕರಸಂಜಾತರಾದ ಶ್ರೀ ಶಿವಬಸವ ಸ್ವಾಮಿಗಳು

ಸೇವಕನೊಡನೆ ಸೇವಕರಂತೆ, ಜನಸಾಮಾನ್ಯರೊಡನೆ ಸಾಮಾನ್ಯರಂತೆ ಬೆರೆತು ಎಲ್ಲರಲ್ಲೂ ಆತ್ಮಸ್ಥೈರ್ಯವನ್ನು ತುಂಬುತ್ತಿದ್ದರು. ಇಂದಿನ ಶ್ರೀಮಠದ ಬೃಹತ್ ಕಟ್ಟಡದ ರೂವಾರಿಗಳು ಭಿಕ್ಷದ ರಾಚಪ್ಪ ಸ್ವಾಮಿಗಳು. ಭಿಕ್ಷದಾರ್ಯರ ಈ ಕ್ರಿಯಾಶಕ್ತಿಗೆ ಮಾರುಹೋಗಿ ಅನೇಕ ಶ್ರೀಮಂತರು ಉದಾರ ಹೃದಯದಿಂದ ನೆರವು ನೀಡಲು ಮುಂದೆ ಬರುತ್ತಿದ್ದರು. ಆದರೆ ಭಿಕ್ಷದಾರ್ಯರು ಅದನ್ನು ಪ್ರಜ್ಞಾಪೂರ್ವಕವಾಗಿಯೇ ತಿರಸ್ಕರಿಸುತ್ತಿದ್ದರು. ಅವರು ಬಯಸುತ್ತಿದ್ದುದು ಭಕ್ತರ ಹೃದಯ ಸಂಪತ್ತಿನ ಭಿಕ್ಷವನ್ನೇ ಹೊರತು ಸಂಪತ್ತಿನ ಭಿಕ್ಷವನ್ನಲ್ಲ.

ದೇವನೂರಿನ ಸಮೀಪದಲ್ಲಿ ಇರುವ ಗ್ರಾಮ ಅಳಗಂಚಿ ಎನ್ನುವುದು. ಅಲ್ಲಿ ಅರಮನೆಗೆ ಸೇರಿದ್ದ ದೊಡ್ಡ ಹುಲ್ಲುಗಾವಲು ಇತ್ತು. ಮೇವಿನ ಕಾಲಕ್ಕೆ ಅರಮನೆಯ ಹಸುಗಳು ಅಲ್ಲಿ ತಿಂಗಳುಗಟ್ಟಲೆ ತಂಗುತ್ತಿದ್ದವು. ಆ ದಿನಗಳಲ್ಲಿ ಅಂದಿನ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಅಲ್ಲಿಗೆ ಭೇಟಿ ಕೊಡುತ್ತಿದ್ದರು. ಒಂದೆರಡು ದಿನಗಳು ಅಲ್ಲಿ ಅವರ ವಾಸ್ತವ್ಯವೂ ಇರುತ್ತಿತ್ತು. ಈ ಹುಲ್ಲುಗಾವಲಿನ ಪಕ್ಕದಲ್ಲಿಯೇ ಶ್ರೀಮಠದ ಒಂದಿಷ್ಟು ಜಮೀನು ಇತ್ತು. ಭಿಕ್ಷದಾರ್ಯರು ಅಲ್ಲಿ ಆಳುಕಾಳುಗಳ ಜೊತೆ ತಾವೂ ದುಡಿಮೆ ಮಾಡುತ್ತಿದ್ದರು. ಗೋವುಗಳ ನಡುವೆ ಅಡ್ಡಾಡುತ್ತಿದ್ದ ನಾಲ್ವಡಿಯವರಿಗೆ ಅವರ ಪರಿಚಾರಕರು ಒಮ್ಮೆ ಅಷ್ಟು ದೂರದಲ್ಲಿ ರೈತರೊಡನೆ ದುಡಿಮೆ ಮಾಡುತ್ತಿದ್ದ ಭಿಕ್ಷದ ರಾಚಪ್ಪಾಜಿಯವರನ್ನು ತೋರಿಸುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಪೂಜ್ಯ ಭಿಕ್ಷದಾರ್ಯರ ಬಗ್ಗೆ ಕೇಳಿ ತಿಳಿದಿದ್ದರು. ಅವರ ಬಗ್ಗೆ ಏನೇನೋ ಕಲ್ಪಿಸಿಕೊಂಡಿದ್ದರು. ಆದರೆ ಅವರು ಹೀಗೆ ಇಷ್ಟು ಸರಳಾತಿ ಸರಳರಾಗಿ ಇರುತ್ತಾರೆಂದು ಅವರು ಊಹಿಸಿಯೂ ಇರಲಿಲ್ಲ. ಧರ್ಮಗುರುಗಳೆಂದರೆ ಅವರ ಕಲ್ಪನೆಯೇ ಬೇರೆಯಿತ್ತು. ಮಹಾರಾಜರವರು ನೇರವಾಗಿ ಇವರಲ್ಲಿಗೆ ನಡೆದು ಬಂದು ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ ನಿಂತುಕೊಂಡರು. ಸ್ವತಃ ಮಹಾರಾಜರೇ ಬಂದು ಮುಂದೆ ಕಿಂಕರಭಾವದಿಂದ ನಿಂತಿದ್ದರೂ ಭಿಕ್ಷದಾರ್ಯರಿಗೆ ಅದು ವಿಶೇಷವಾಗಿಯೇನೂ ಕಾಣಲಿಲ್ಲ. ಒಬ್ಬ ಸಾಮಾನ್ಯನನ್ನು ಉದ್ದೇಶಿಸಿ ಮಾತನಾಡುವ ಧಾಟಿಯಲ್ಲಿಯೇ ಮಹಾರಾಜರೊಡನೆಯೂ ತಮ್ಮ ಸಹಜ ಶೈಲಿಯಲ್ಲಿ ಮಾತನಾಡಿದರು. ನಾಲ್ವಡಿಯವರ ಅಚ್ಚರಿಗೆ ಇದು ಮತ್ತಷ್ಟು ಕಾರಣವಾಯಿತು.



ಶ್ರೀ ಭಿಕ್ಷದಾರ್ಯರ ಕರಸಂಜಾತರಾದ
ಶ್ರೀ ಶಿವಪ್ಪ ಸ್ವಾಮಿಗಳು

"ತಾವು ಅರಮನೆಗೆ ಆಗಮಿಸಿ ನಮ್ಮ ಪೂಜೆಯನ್ನು ಸ್ವೀಕರಿಸಬೇಕು, ನಮ್ಮ ಪರಿವಾರಕ್ಕೂ ತಮ್ಮ ದರ್ಶನಾಶೀರ್ವಾದಗಳು ಲಭ್ಯವಾಗಬೇಕು" ಎಂದು ವಿನಂತಿಸಿದರು.

ಈ ಮಾತನ್ನು ಆಲಿಸಿದ ಭಿಕ್ಷದಯ್ಯನವರು "ಎಲ್ಲವಕ್ಕೂ ಕಾಲ ಕೂಡಿಬರಬೇಕು. ನಮ್ಮ ಗುರು ಸಾರ್ವಭೌಮರಾದ ಶ್ರೀ ಗುರುಮಲ್ಲೇಶ್ವರರು ಕರುಳಿನ ಪವಾಡ ಮಾಡಿದ ಸ್ಥಳವನ್ನು ದರ್ಶಿಸಿ ಪುನೀತನಾಗಬೇಕೆಂಬ ಆಸೆ ನನಗೂ ಇದೆ. ನಾನು ಮೊದಲೇ ಹೇಳಿದ ಹಾಗೆ ಕಾಲ ಕೂಡಿಬರಲಿ" ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

ಸ್ವಲ್ಪ ಹೊತ್ತು ಮೌನವಾಗಿ ನಿಂತ ಮಹಾರಾಜರು, "ನಾವು ಅರಮನೆಯಿಂದ ಬೆಲೆಬಾಳುವ ರೇಷ್ಮೆ ವಸ್ತ್ರಗಳನ್ನು ಕಳುಹಿಸಿಕೊಡುತ್ತೇನೆ. ದಯವಿಟ್ಟು ಇನ್ನು ಮುಂದೆ ತಾವು ಅದನ್ನು ಯಾವಾಗಲೂ ಧರಿಸಬೇಕು" ಎಂದು ಬಿನ್ನವಿಸಿಕೊಂಡರು.

ಗುರುಗಳು ನಸುನಕ್ಕು "ತಾವು ಎಷ್ಟಾದರೂ ಮಹಾರಾಜರು; ನಾನೊಬ್ಬ ಸಾಮಾನ್ಯ. ಗುರುಸಾರ್ವಭೌಮರ ಸೇವಕ ಮಾತ್ರ. ನಿಮ್ಮ ಬಾಳ ಬಟ್ಟೆ ಒಂದಾದರೆ, ನಮ್ಮಂತಹವರ ಬಾಳ ಬಟ್ಟೆ ಬೇರೊಂದು ತೆರನಾದುದು. ಅವರ ಬಟ್ಟೆಗೆ ತಕ್ಕಂತೆ ಅವರವರ ಬಟ್ಟೆ" ಎಂದರು.

ನಾಲ್ವಡಿಯವರು ಭಿಕ್ಷದಾರ್ಯರ ಮಾತಿನ ಧ್ವನಿಯನ್ನು ಗುರ್ತಿಸಿ ಮೌನವಾದರು. ಪೂಜ್ಯರು ಸಾಮಾನ್ಯರು ಪರಿಭಾವಿಸುವ ಯಾವ ಪವಾಡವನ್ನು ಮಾಡಿದವರಲ್ಲ. ಕೆಲವೊಮ್ಮೆ ಅವರ ದೃಷ್ಟಿ, ಮಾತುಗಳಿಂದ ಆಗುತ್ತಿದ್ದ ಕಾರ್ಯಗಳೇ ಪವಾಡಸದೃಶ ವಾಗಿರುತ್ತಿದ್ದುವು. ಆಗಾಗ ಅಚ್ಚರಿ ಮೂಡಿಸುವ ಅನಿರೀಕ್ಷಿತ ಘಟನೆಗಳು ನಡೆದಿರುವುದಕ್ಕೆ ಅನೇಕ ಉದಾಹರಣೆಗಳಿವೆ.

ಶಿವಪ್ಪ ಸ್ವಾಮಿಗಳು: ಭಿಕ್ಷದ ರಾಜಪ್ಪ ಸ್ವಾಮಿಗಳ ಮಹಾಕರ್ತೃತ್ವ ಶಕ್ತಿಗೆ ಹೆಗಲು ಕೊಟ್ಟು ನಿಂತು ಅನೇಕ ಕೆಲಸಗಳನ್ನು ಆಗುಮಾಡಿದವರು ಶ್ರೀ ಶಿವಪ್ಪ ಸ್ವಾಮಿಗಳವರು. "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು ಕಣಾ ಅನುಗೊಂಬನಿತು ಕಾಯಕಂ ನಡೆಯುತಿರಬೇಕು" ಎನ್ನುವ ಸಿದ್ಧರಾಮರ ವಾಣಿಯಂತೆ ನಿರಂತರ ಕಾರ್ಯಕ್ರಮದಲ್ಲಿ ನಿಜಧರ್ಮವನ್ನು ಕಂಡವರು. ಚಾಮರಾಜನಗರ ತಾಲ್ಲೂಕಿನ ಬಾಗಳಿ ಗ್ರಾಮದವರಾದ ಶಿವಸ್ವಾಮಿಯವರು ಗುರು ಭಿಕ್ಷದಾರ್ಯರ ವ್ಯಕ್ತಿತ್ವದ ಪ್ರಭಾವಲಯಕ್ಕೆ ಸಿಕ್ಕಿ ವೈರಾಗ್ಯ ಪರರಾಗಿ, ಇವರನ್ನು ನೆರಳಿನಂತೆ ಹಿಂಬಾಲಿಸಿದರು. ನಡೆನುಡಿಗಳಲ್ಲಿ ಅಭಿನ್ನರಾಗಿ ಬದುಕಿದ ಶ್ರೀ ಶಿವಪ್ಪ ಸ್ವಾಮಿಗಳು ಈ ಭಾಗದಲ್ಲಿ ಅಸಂಖ್ಯಾತ ಶಿಷ್ಯರನ್ನು

ಸಂಪಾದಿಸಿದರು. ನೂರಾರು ಶಾಖಾಮಠಗಳು ನಿರ್ಮಾಣಗೊಂಡವು. ಶ್ರೀಮಠದ ಸನಿಹದಲ್ಲಿಯೇ ಇರುವಂತಹ ಕಲ್ಯಾಣಿ ಪೂಜ್ಯರ ನಿರ್ಮಿತಿ. ಶ್ರೀ ಗುರುಮಲ್ಲೇಶ್ವರರ ಗದ್ದುಗೆಯ ಮುಂಭಾಗದ ದೊಡ್ಡ ಹಜಾರ, ಅದಕ್ಕೆ ದಕ್ಷಿಣಾಭಿಮುಖವಾದ ಸುಂದರ ಕಮಾನು, ಕಮಾನಿನ ಮೇಲ್ಭಾಗದಲ್ಲಿ ಮುಪ್ಪಿನ ಸ್ವಾಮಿಗಳ ಮೂರ್ತಿ ಹಾಗೂ ಒಳಭಾಗದ ಭಿತ್ತಿಯ ಮೇಲ್ಭಾಗದಲ್ಲಿ ಶಿವನ ಪಂಚವಿಂಶತಿ ಲೀಲೆಗಳು -ಇವೆಲ್ಲವನ್ನು ಸುಂದರವಾಗಿ ನಿರ್ಮಿಸಿದ ಕೀರ್ತಿ ಶ್ರೀ ಶಿವಪ್ಪ ಸ್ವಾಮಿಯವರಿಗೆ ಸಲ್ಲುತ್ತದೆ. ತಾವು ಶ್ರೀಮಠದ ಸಾರಥ್ಯವನ್ನು ವಹಿಸಿಕೊಂಡು ತನಗೆ ಬಿಡುವು ಮಾಡಿಕೊಡಬೇಕೆಂದು ಭಿಕ್ಷದಾರ್ಯರು ಹೇಗೆಲ್ಲಾ ಕೋರಿಕೊಂಡರೂ ಶ್ರೀ ಶಿವಪ್ಪ ಸ್ವಾಮಿಗಳು 'ಆಳಿಗೇಕೆ ಅರಸನ ಸ್ಥಾನ' ಎಂದು ನಯವಾಗಿಯೇ ಹೇಳಿ, ಕೊನೆಯ ತನಕ ಅವರ ನೆರಳಾಗಿಯೇ ಬದುಕಿದರು.

ಶ್ರೀ ತೋಂಟದಾರ್ಯ ಸ್ವಾಮಿಗಳು: ಮೂಗೂರಿನವರಾದ ಪೂಜ್ಯರು ಭಿಕ್ಷದಾರ್ಯರ ಕ್ರಿಯಾಶಕ್ತಿಗೆ ಮಾರುಹೋಗಿ ಶ್ರೀಮಠಕ್ಕೆ ಬಂದು ಶ್ರೀ ಕರ್ತೃಗದ್ದುಗೆಯ ಪೂಜಾಕೈಂಕರ್ಯವನ್ನು ಮಾಡುತ್ತಾ ಇಲ್ಲಿಯೇ ನೆಲೆನಿಂತರು. ಭಿಕ್ಷದಾರ್ಯರು ತಮ್ಮ ಅವಸಾನ ಕಾಲದಲ್ಲಿ ಭಕ್ತರ ಒತ್ತಾಯದ ಕೋರಿಕೆಯ ಮೇರೆಗೆ ತಮ್ಮ ಉತ್ತರಾಧಿಕಾರಿಯ ಹೆಸರನ್ನು ಸೂಚಿಸಬೇಕಾಗಿ ಬಂದಾಗ, ನೇಮನಿಷ್ಠೆಗಳಿಂದ ಪೂಜಾಕೈಂಕರ್ಯವನ್ನೆಸಗುತ್ತಿದ್ದ ಶ್ರೀ ತೋಂಟದಾರ್ಯರ ಹೆಸರನ್ನು ಸೂಚಿಸಿದ್ದರು. ಶ್ರೀ ತೋಂಟದಾರ್ಯರು ನೋಡುವುದಕ್ಕೆ ತುಂಬಾ ತೇಜಸ್ವಿಯಾಗಿದ್ದರು. ಮೈಸೂರು ನಗರದಲ್ಲಿ ಕೆಲವು ಕಾಲ ಲೌಕಿಕ ವಿದ್ಯಾಭ್ಯಾಸವನ್ನು ಮಾಡಿದ್ದರು. ಅವರ ನಿರರ್ಗಳವಾದ ಮಾತುಗಾರಿಕೆ, ದೃಷ್ಟಿಮಾತ್ರದಿಂದಲೇ ಸಮೂಹವನ್ನು ಆಕರ್ಷಿಸುವ ಶಕ್ತಿ -ಇವುಗಳಂತೂ ಅತ್ಯದ್ಭುತವಾಗಿದ್ದುವು. ಅವರ ಅಯಸ್ಕಾಂತದಂತಹ ಆಕರ್ಷಣೆಯಿಂದ ಅವರಿದ್ದ ಕಡೆ ಭಕ್ತಸಮೂಹ ಎಡಬಿಡದೆ ನೆರೆದಿರುತ್ತಿತ್ತು. ಅಭಿನವ ಬಸವಣ್ಣನವರೆಂದೇ ಅವರನ್ನು ಹಾಡಿಹೊಗಳುತ್ತಿದ್ದರು. ಭಿಕ್ಷದಾರ್ಯರು ಶ್ರೀಮಠದ ಜವಾಬ್ದಾರಿಯನ್ನು ಇವರಿಗೆ ವಹಿಸಿಕೊಡುವಾಗ ಒಂದು ಕಿವಿ ಮಾತನ್ನು ಹೇಳಿದ್ದರು. "ನನ್ನನ್ನು ಕಂಡಹಾಗೇ, ಎಲ್ಲರನ್ನು ಕಾಣು" ಎನ್ನುವುದೇ ಆ ಮಾತು. ಶ್ರೀ ತೋಂಟದಾರ್ಯರು ಆಜೀವಪರ್ಯಂತ ಆ ಗುರುವಾಣಿಗೆ ಊನ ಬರದಂತೆ ನಡೆದುಕೊಂಡು ಬಂದರು. ಈ ಕಾರಣಕ್ಕಾಗಿಯೇ ಇವರ ಕಾಲಮಾನದಲ್ಲಿ ಶ್ರೀಮಠಕ್ಕೆ ಆದಷ್ಟು ಶಿಷ್ಯರು ಮತ್ತಾರ ಕಾಲದಲ್ಲಿಯೂ ಆಗಲಿಲ್ಲ. ಇವರ ಕಾಲದಲ್ಲಿ ಶ್ರೀಮಠದ ಸುವರ್ಣ ಮಹೋತ್ಸವ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ನಡೆದ ಅರವತ್ತು ಮೂರು ಪುರಾತನರ ಪೂಜೆಯ ವೈಶಿಷ್ಟ್ಯವನ್ನು ಈ ಭಾಗದ ಜನ ಈಗಲೂ ನೆನೆದುಕೊಳ್ಳುತ್ತಾರೆ.

ಆಯಾಕಾಲದ ಸಾಮಾಜಿಕ ಅಗತ್ಯತೆಗಳಿಗೆ ಸ್ಪಂದಿಸುವ ಸ್ವಭಾವದರಾಗಿದ್ದ ಶ್ರೀ ತೋಂಟದಾರ್ಯರು ವಿದ್ಯೆಯ ಮಹತ್ವವನ್ನು ಅರಿತು ಅದಕ್ಕಾಗಿ ಉಚಿತ ವಿದ್ಯಾರ್ಥಿ ನಿಲಯವೊಂದನ್ನು ಸ್ಥಾಪಿಸಿ ಜಾತಿಮತ ಪಂಥಗಳನ್ನು ಪರಿಗಣಿಸದೆ ಎಲ್ಲರಿಗೂ ಅಲ್ಲಿ ಅವಕಾಶ ಮಾಡಿಕೊಟ್ಟರು. ಮುಂದೆ ಶ್ರೀಮಠವು ಕೈಕೊಂಡ ವಿದ್ಯಾದಾಸೋಹಕ್ಕೆ ಇದೇ

ಮೂಲ ಬೀಜವಾಯಿತು. ಮುಂದೆ ಕೊಳ್ಳೇಗಾಲ, ಮೈಸೂರುಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಯಿತು. ಸುಮಾರು ಎರಡೂವರೆ ದಶಕಗಳ ಕಾಲ ಶ್ರೀಮಠದ ಅಧ್ಯಕ್ಷರಾಗಿದ್ದ ಶ್ರೀ ತೋಂಟದಾರ್ಯರು ೧೭.೨.೧೯೫೭ರಲ್ಲಿ ಲಿಂಗೈಕ್ಯರಾದರು.

ಶ್ರೀ ಶಿವಬಸವ ಸ್ವಾಮಿಗಳು: ಶ್ರೀಗಳವರು ಭಿಕ್ಷದಾರ್ಯರ ಕರಸಂಜಾತರು. ಸದಾ ಜನಜಂಗುಳಿಯಿಂದ ಗಿಜಿಗುಡುತ್ತಿದ್ದ ಮಠದಲ್ಲಿ ಸದಾ ಮೌನಿಯಾಗಿ, ಎರಡು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದವರು. ಇವರ ಕಾಯಕ ಶ್ರೀಮಠದ ಪಾಕಶಾಲೆಯಲ್ಲಿ ನಿತ್ಯದ ಅನ್ನದಾಸೋಹಕ್ಕಾಗಿ ಪಾಕಶಾಲೆಯ ಒಲೆಯ ಬೆಂಕಿಯನ್ನು ನಿರಂತರವಾಗಿ ಕಾಯ್ದುಕೊಂಡು ಬಂದವರು ಇವರು. ಈ ಕರ್ತವ್ಯವೊಂದನ್ನು ಬಿಟ್ಟರೆ ಇವರಿಗೆ ಮಠದ ಬೇರೆಯ ಯಾವುದೇ ವ್ಯವಹಾರಗಳೂ ತಿಳಿಯುತ್ತಿರಲಿಲ್ಲ. ಇವರು ಕರ್ಮಯೋಗಿಗಳಾಗಿದ್ದಂತೆ, ಬಹುದೊಡ್ಡ 'ಜ್ಞಾನಯೋಗಿ'ಗಳು ಎನ್ನುವುದು ಅನೇಕ ಮುಗ್ಧಭಕ್ತರಿಗೆ ತಿಳಿದೇ ಇರಲಿಲ್ಲ. ಶ್ರೀಮಠದ ಪಾಕಶಾಲೆಯ ಒಲೆಯಲ್ಲಿ ಬೆಂಕಿ ಹೇಗೆ ಸದಾಕಾಲವೂ ಉರಿಯುತ್ತಿತ್ತೊ ಹಾಗೆಯೇ ಶ್ರೀ ಶಿವಬಸವ ಸ್ವಾಮಿಗಳವರ ಎದೆಯಲ್ಲಿ ಜ್ಞಾನದ ಬೆಳಕು ಸದಾ ಬೆಳಗುತ್ತಿತ್ತು. ಅವರು ಸಾಂಪ್ರದಾಯಿಕ ಮಾರ್ಗದಲ್ಲಿ ಯಾವ ವಿದ್ಯೆಯನ್ನು ಕಲಿತವರಲ್ಲ, ಆದರೂ ಬಹುಶ್ರುತ ವಿದ್ವಾಂಸರಾಗಿದ್ದರು. ಧಾರ್ಮಿಕ ವಿಷಯಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲವರಾಗಿದ್ದರು. ಅನೇಕ ಮೌಲಿಕ ಕೃತಿಗಳನ್ನು ಸಂಪಾದಿಸುವುದರ ಮೂಲಕ ಶ್ರೀಮಠದ ಕಾರ್ಯಕ್ಷೇತ್ರ ಸಾಹಿತ್ಯ ಕ್ಷೇತ್ರಕ್ಕೂ ಪಾದಾರ್ಪಣ ಮಾಡುವಂತಾದ ಕೀರ್ತಿ ಶ್ರೀ ಶಿವಬಸವಸ್ವಾಮಿಗಳಿಗೆ ಸಲ್ಲಬೇಕು.

೧) ಚನ್ನಪ್ಪ ಕವಿ ವಿರಚಿತ "ಶ್ರೀ ಶರಣ ಲೀಲಾಮೃತ" (ಯಕ್ಷಗಾನ ಬಸವಪುರಾಣ), ೨) ಕಾಲಜ್ಞಾನ ಸಂಗ್ರಹ (ಭಾಗ-೧), ೩) ಸೊನ್ನಲಾಪುರದ ಸಿದ್ಧರಾಮಕೃತ ಸ್ತೋತ್ರ ಗೀತ, ಮಿಶ್ರ ಸ್ತೋತ್ರ ಗೀತ, ಅಷ್ಟಾವರಣ ಸ್ತೋತ್ರ, ೪) ನಂಜುಂಡಕವಿ ಕೃತ "ಶ್ರೀ ಭೈರವೇಶ್ವರ ಕಾವ್ಯ". ಈ ಎಲ್ಲ ಕೃತಿಗಳನ್ನು "ಶ್ರೀ ಗುರುಮಲ್ಲೇಶ್ವರ ಗ್ರಂಥ ರತ್ನಮಾಲಾ" ಎನ್ನುವ ಶಿರೋನಾಮೆಯಲ್ಲಿ ಮೈಸೂರಿನ "ವೀರಶೈವ ವಾಙ್ಮಯ ಪ್ರಕಾಶನ" ಸಂಸ್ಥೆಯವರು ಪ್ರಕಟಿಸಿದ್ದಾರೆ.

ಶ್ರೀ ತೋಂಟದಾರ್ಯರು ಲಿಂಗೈಕ್ಯರಾದ ನಂತರ, ಭಕ್ತಜನರ ಕೋರಿಕೆಯನ್ನು ಮನ್ನಿಸಿ ಎರಡು ವರ್ಷಗಳ ಕಾಲ ಇವರು ಶ್ರೀಮಠದ ಅಧಿಪತಿಗಳಾಗಿರುತ್ತಾರೆ. ಆದರೆ ಭಕ್ತರ ಸಮೂಹದಲ್ಲಿ ಉಂಟಾದ ಅನೇಕ ತೆರನ ಗೊಂದಲಗಳಿಂದ ಶ್ರೀಮಠದ ಉತ್ತರಾಧಿಕಾರಿಯ ಸಮಸ್ಯೆ ನ್ಯಾಯಾಲಯದ ಮೆಟ್ಟಿಲನ್ನು ಏರಿತು. ಇದರಿಂದ ಬೇಸತ್ತ ಪೂಜ್ಯರು ಸ್ವಯಿಚ್ಛೆಯಿಂದ ಪೀಠವನ್ನು ತ್ಯಜಿಸುವುದರ ಜೊತೆಗೆ ದೇವನೂರನ್ನೂ ತ್ಯಜಿಸಿಬಿಟ್ಟರು.

ಶ್ರೀ ಬಸವಣ್ಣ ಸ್ವಾಮಿಗಳು : ಗುಂಡ್ಲುಪೇಟೆ ತಾಲ್ಲೂಕು ಭೋಗಯ್ಯನ ಹುಂಡಿಯಲ್ಲಿ ಶ್ರೀ ಗುರುಮಲ್ಲೇಶ್ವರ ಮಠದ ಶಾಖಾಮಠವೊಂದಿತ್ತು. ಅಲ್ಲಿ ಸುಮಾರು ಹದಿಮೂರು ವರ್ಷಗಳ ಕಾಲ ಕಂಥೇಭಿಕ್ಷದ ಕಾಯಕವನ್ನು ಮಾಡಿಕೊಂಡಿದ್ದ ಅದೇ ಊರಿನ ಬಸವಣ್ಣ ಸ್ವಾಮಿಗಳೇ ಮುಂದೆ ದೇವನೂರಿನ ಮಠದ ಪೀಠಾಧಿಪತಿ

ಗಳಾಗುತ್ತಾರೆ. 'ಪರ ತನ್ನ ಭಕ್ತರ ತಿರಿವಂತೆ ಮಾಡುವ, ಒರೆದು ನೋಡುವ ಸುವರ್ಣದ ಚಿನ್ನದಂತೆ, ಅರೆದು ನೋಡುವ ಕಬ್ಬಿನ ಕೋಲಿನಂತೆ, ಬೆದರದೆ ಬೆಚ್ಚದೆ ಇದ್ದಡೆ, ಕರಪಿಡಿದೆತ್ತಿಕೊಂಬ ನಮ್ಮ ರಾಮನಾಥಾ' ಎನ್ನುವ ದಾಸಿಮಾರ್ಯರ ವಾಣಿಯಂತೆ, ಬಸವಣ್ಣ ಸ್ವಾಮಿಗಳವರು ಬಾಲ್ಯದಿಂದಲೂ ಭಿಕ್ಷದಾರ್ಯರಿಂದ ಪರಿಪರಿಯ ಪರೀಕ್ಷೆಗಳಿಗೆ ಒಳಗಾಗಿ ಉತ್ತೀರ್ಣರಾಗಿದ್ದರು. ಅನೇಕ ಉಗ್ರಶಿಕ್ಷೆಗಳನ್ನು ಚಿತ್ತಸಂಯಮ ದಿಂದ ಸ್ವೀಕರಿಸಿದವರು. ಮೃದುನುಡಿಗಳೇ ಸಕಲ ಜಪಂಗಳಯ್ಯ ಎನ್ನುವಂತೆ ಮಾತನಾಡುತ್ತಿದ್ದ ಪೂಜ್ಯರು ಅಧ್ಯಯನಶೀಲರಾಗಿದ್ದರು. ಇವರು ಅಧಿಕಾರ ವಹಿಸಿ ಕೊಂಡ ದಿನಗಳಲ್ಲಿ ಶ್ರೀಮಠದ ಭಕ್ತರ ನಡುವೆ ಅನೇಕ ಭಿನ್ನಾಭಿಪ್ರಾಯಗಳಿದ್ದುವು. ಮಠದ ಕೆಲಸ ಕಾರ್ಯಗಳು ಈ ಕಾರಣಕ್ಕಾಗಿ ಕುಂಠಿತಗೊಂಡಿದ್ದುವು. ಪೂಜ್ಯರು ಈ ಒಳಗಿನ ಹಾಗೂ ಹೊರಗಿನ ಒತ್ತಡಗಳೆರಡನ್ನೂ ನಿಭಾಯಿಸಿಕೊಂಡು ಶ್ರೀಮಠವನ್ನು ಮುನ್ನಡೆಸಬೇಕಾಗಿತ್ತು. ಶ್ರೀಮಠದ ಚರಿತ್ರೆಯನ್ನು ಕಳಂಕರಹಿತವನ್ನಾಗಿಸುವ ಜವಾಬ್ದಾರಿ ಅವರ ಮೇಲೆ ತುಂಬಾ ಇತ್ತು. ಸೌಮ್ಯಮೂರ್ತಿಗಳಾದ ಶ್ರೀ ಬಸವಣ್ಣ ಸ್ವಾಮಿಗಳು ಅವೆಲ್ಲವನ್ನೂ ಸಮರ್ಥವಾಗಿ ನಿರ್ವಹಿಸಿ ಜಯಶೀಲರಾದರು. 'ಕೊಲುವೆನೆಂಬುದು ದೇವನ ಭಾಷೆ, ಗೆಲುವೆನೆಂಬುದು ಭಕ್ತನ ಭಾಷೆ' ಎನ್ನುವುದು ಶ್ರೀ ಬಸವಣ್ಣ ಸ್ವಾಮಿಗಳ ಜೀವನದಲ್ಲೂ ನಡೆದುಹೋಯಿತು. ಈ ಎಲ್ಲದರ ನಡುವೆ ಅವರು ತಮ್ಮ ವೈಯಕ್ತಿಕ ಸಾಧನೆಗೆ ಪೂರಕವಾದ ಸ್ವಾಧ್ಯಾಯ ಚಿಂತನ ಮಂಥನಗಳಿಂದ ದೂರ ಸರಿಯಲಿಲ್ಲ. ಅನೇಕ ಪ್ರಾರ್ಥನಾ ಗೀತೆಗಳು, ಭಕ್ತಿಗೀತೆಗಳನ್ನು ರಚಿಸಿರುವುದೆ ಇದಕ್ಕೆ ಸಾಕ್ಷಿಯಾಗಿದೆ. ಭಕ್ತಸಮುದಾಯದ ದುರಾದೃಷ್ಟವೋ ಏನೋ ಪೂಜ್ಯರು ತಮ್ಮ ಇಳಿವಯಸ್ಸಿನ ತನಕ ಜೀವಿಸಲೇ ಇಲ್ಲ. ತಮ್ಮ ನಡುಯಸ್ಸಿನಲ್ಲಿಯೇ (೧೯೭೦) ಅವರು ಶಿವಸಾಯುಜ್ಯವನ್ನು ಹೊಂದುತ್ತಾರೆ.

ಆದಿಗುರು ಶ್ರೀ ಗುರುಮಲ್ಲೇಶ್ವರಾದಿಯಾಗಿ ಇಂದಿನ ಪರಮಪೂಜ್ಯ ಶ್ರೀ ಮಹಂತ ಸ್ವಾಮಿಗಳವರೆಗೆ ಶ್ರೀಮಠದ ಎಲ್ಲ ಗುರುಗಳು ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತ ಬದುಕಿ ಸಾಧನೆಗೈದವರು. ಪ್ರಚಾರಕ್ಕೆ ಮನ ತೆತ್ತವರಲ್ಲ. ಅವರಿಗೆ ಅಂದಂದಿನ ಕಾಯಕ ಮುಖ್ಯವಾಗಿತ್ತೇ ವಿನಃ ಮುಂದಿನವರಿಂದ, ಸುತ್ತಮುತ್ತಣವರಿಂದ ಪರಾಕು ಹೇಳಿಸಿಕೊಳ್ಳಬೇಕೆಂಬ ಬಯಕೆ ಹೊಂದಿದವರಲ್ಲ. 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು ಶಿವನ ಡಂಗುರ' ಎನ್ನುವ ಮಾತಿಗೆ ತಕ್ಕಂತೆ ಬದುಕನ್ನು ರೂಪಿಸಿಕೊಂಡವರು. ಈ ಕಾರಣಕ್ಕಾಗಿಯೇ ಶ್ರೀಮಠದ ಭಕ್ತಸಮುದಾಯ ದಲ್ಲಿ ಇಂದಿಗೂ ದೇವನೂರಿನ ಶ್ರೀ ಗುರುಮಲ್ಲೇಶ್ವರ ಮಠಕ್ಕೆ ಎಂದರೆ ಕಾಯಾವಾಚಾ ಮನಸಾ ಭಕ್ತಿ ತುಂಬಿ ಸಂದರ್ಭವೊದಗಿದರೆ ತಮ್ಮೆಲ್ಲವನ್ನೂ ಅರ್ಪಣೆ ಮಾಡುವುದಕ್ಕೆ ಸಿದ್ಧವಿರುವ ಅಸಂಖ್ಯರನ್ನು ಕಾಣುತ್ತೇವೆ. ಗುರುಪರಂಪರೆಯ ನಿಷ್ಕಾಮಕರ್ಮ, ಸರ್ವರನ್ನೂ ಸಮಾನವಾಗಿ ಕಾಣುತ್ತಿದ್ದ ರೀತಿ, ಸತ್ಯಶುದ್ಧ ಕಾಯಕ ಜೀವಿಗಳಿಗೆ ನೀಡುತ್ತಾ ಬಂದಿರುವ ನೈತಿಕ ಒತ್ತಾಸೆ ವೀರಶೈವಮಠ ಪರಂಪರೆಗೆ ಒಂದು ಘನತೆಯನ್ನು ತಂದುಕೊಟ್ಟಿರುವುದು ನಿಜಕ್ಕೂ ಸ್ಮರಣೀಯವಾದ ಅಂಶವಾಗಿದೆ. ■

ಶ್ರೀ ಗುರುಮಲ್ಲೇಶ್ವರರ ಮೆಚ್ಚಿನ ತತ್ವಪದ


ಜ್ಞಪ್ತಿ ಚಿದ್ಬಯಲನ್ನೆ ಸೇರು ಕಂಡ್ಯಾ। ಶುದ್ಧ
ಜ್ಞಪ್ತಿಯ ತಾನಾಗೆ ಮುಕ್ತಿ ಕಂಡ್ಯಾ ||ಪ||

ಶಬ್ದವೆಂಬುವುದಲ್ಲ ಪ್ರಣವ ಕಂಡ್ಯಾ। ಪ್ರಣವ
ಶಬ್ದವು ಕರ್ಣದೀ ಕೇಳು ಕಂಡ್ಯಾ।
ಶಬ್ದಕ್ಕೆ ಸಾಕ್ಷಿ ನೀನಾಗು ಕಂಡ್ಯಾ। ನಿ
ಶಬ್ದ ಭ್ರಮೆಯಾಗಿ ನಿಲ್ಲು ಕಂಡ್ಯಾ ||೧||

ಆಕಾರ ನಾಮವ ಸ್ವಪ್ನ ಕಂಡ್ಯಾ। ನಿ
ರಾಕಾರ ವಸ್ತುವ ನೀನೆ ಕಂಡ್ಯಾ।
ಲೋಕ ಕಲ್ಪಿತವು ನಿನ್ನೊಳಗೆ ಕಂಡ್ಯಾ। ಜಗ
ದೇಕ ಸ್ವರೂಪನ ನೀನೆ ಕಂಡ್ಯಾ ||೨||

ಮತ್ತೆ ಜಡವು ದುಃಖ ಮಾಯ ಕಂಡ್ಯಾ। ಶುದ್ಧ
ಸತ್ತು ಚಿದಾನಂದ ನೀನೆ ಕಂಡ್ಯಾ।
ಮರ್ತ್ಯವೆಂಬುದೆಲ್ಲ ಮಿಥ್ಯ ಕಂಡ್ಯಾ। ನಿ
ವೃತ್ತಿ ಸ್ವರೂಪನ ನೀನೆ ಕಂಡ್ಯಾ ||೩||

ಜೀವ ಪರಮರಿಬ್ಬರಲ್ಲ ಕಂಡ್ಯಾ। ಬೇರೆ
ಜೀವನೊಳಗೆ ಜೀವ ಭ್ರಾಂತು ಕಂಡ್ಯಾ।
ಜೀವ ಪರಮರಿಗೈಕ್ಯ ಸುಳ್ಳು ಕಂಡ್ಯಾ। ಬೇರೆ
ಜೀವ ಸುಳ್ಳೆಂಬುದು ಭ್ರಾಂತು ಕಂಡ್ಯಾ ||೪||



ವೇದಾಂತ ವೇದ್ಯನು ನೀನೆ ಕಂಡ್ಯಾ। ಯೋಗ
ಸಾಧನೆಯೆಂಬುದು ಭ್ರಾಂತು ಕಂಡ್ಯಾ।
ಬೋಧ ಸದ್ಗುರು ಚೆನ್ನ ನೀನೆ ಕಂಡ್ಯಾ।
ವಾದದ ಭೇದಕೆ ನೀನು ದೂರ ಕಂಡ್ಯಾ ||೫||

ಏಕದೇವೋಪಾಸನೆ

■ ಲಿಂ|| ಪ್ರೊ. ಬಸವರಾಜ ಅಮ್ಮಣಗಿ
ನಂ. ೩೫೨, ಬಸವ ನಿಲಯ, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ,
ಮಾರುತಿ ಗುಡಿಯ ಹತ್ತಿರ, ನಾರಾಯಣಪುರ, ಧಾರವಾಡ-೮

ದೇವರ ಮೂರ್ತಿಗಳನ್ನು ಕಳ್ಳರ, ಅರಸರ ಭಯದಿಂದ ನೆಲದಲ್ಲಿ ಹೂಳುತ್ತಿದ್ದರು. ಹೀಗೆ ವಿಕಾರಕ್ಕೊಳಗಾಗುವ ದೇವರನ್ನು ನಂಬುವುದು ಹೇಗೆ? ಆದ್ದರಿಂದ ವಿಕಾರಕ್ಕೆ ಒಳಗಾಗದ ದೇವರನ್ನೇ ನಂಬಿ ಆರಾಧಿಸಬೇಕು, ನೆನೆಯಬೇಕು. ಅದೇ ಏಕೈಕ ದೇವರಲ್ಲಿ ಭಕ್ತಿ ಮಾಡಿ ಮುಕ್ತಿಯನ್ನು ಪಡೆಯಬೇಕು, ಆಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ. ಎರಡೂ ಧರ್ಮಗಳಲ್ಲಿ (ಇಸ್ಲಾಂ ಮತ್ತು ಲಿಂಗಾಯತ) ಮೂರ್ತಿಪೂಜೆಯ ನಿರಾಕರಣೆ ಮತ್ತು ಏಕದೇವೋಪಾಸನೆ ಪ್ರತಿಪಾದನೆ ಚೆನ್ನಾಗಿ ಮೂಡಿಬಂದಿದೆ.

ಮಾನವ ಕಣ್ದೆರೆದು ಈ ಪ್ರಪಂಚವನ್ನು ನೋಡಿದಾಗ ಬೆರಗಾದ. ಇದರ ರಚನೆ ಮಾಡಿದವರಾರು? ಎಂದು ಚಿಂತಿಸಿದ. ಈ ಚರಾಚರ ಸೃಷ್ಟಿಯ ಹಿಂದೆ ಯಾವುದೋ ಒಂದು ನಿಗೂಢ ಶಕ್ತಿಯಿದೆ ಎಂದು ಪರಿಭಾವಿಸಿದ. ಅದನ್ನು ತತ್ ಎಂದ (ಉಪನಿಷತ್ಕಾರ). ಬೃಹತ್ ಆದುದರಿಂದ "ಬ್ರಹ್ಮನ್" ಎಂದೂ ಕರೆದ. ಆಗಲೂ ಅವನಿಗೆ ಸಮಾಧಾನವಾಗದೆ, "ಪರಬ್ರಹ್ಮನ್" ಎಂದ. ಅಂದರೆ ಅತಿ ದೊಡ್ಡದು. ಬುದ್ಧಿ ತರ್ಕವನ್ನು ಮೀರಿದ ಆ ಪರಾತ್ಪರ ಪರಶಕ್ತಿಯನ್ನು "ಪರಮಾತ್ಮ" ಎಂದೂ ಹೆಸರಿಸಿದ. ಅದು "ದಿವ್ಯ"ವಾದುದರಿಂದ ದೇವರೆಂದ. ಇದು ಸ್ತ್ರೀಯೂ



ಅಲ್ಲ, ಪುರುಷನೂ ಅಲ್ಲ "ತತ್" (ಅದು). ಆದರೆ ತನ್ನ ಅನುಕೂಲಕ್ಕಾಗಿ ಬಹು ಧರ್ಮಗಳು ಪುರುಷವಾಚಕವಾಗಿಯೇ ಆ "ಪರಾಶಕ್ತಿ"ಯನ್ನು ಸಂಬೋಧಿಸುತ್ತವೆ. ಮಾನವ ತನ್ನನ್ನು ಆಳುವ, ನಿಯಂತ್ರಿಸುವ ಒಂದೇ ಒಂದಾದ ದೇವರನ್ನು ಆರಾಧಿಸ ತೊಡಗಿದ, ಪ್ರಾರ್ಥಿಸತೊಡಗಿದ. ಇದೇ ಏಕದೇವೋಪಾಸನೆಗೆ ನಾಂದಿಯಾಯಿತು. ಇದು ಸಿಂಧೂನದಿ ತೀರದ ನಾಗರಿಕತೆಯಷ್ಟು ಹಿಂದಕ್ಕೆ ಹೋಗುತ್ತದೆ. ಇಲ್ಲಿಯ ನಿವಾಸಿಗಳಾದ ದ್ರಾವಿಡರು ವಿಗ್ರಹ ಆರಾಧಕರಾಗಿರಲಿಲ್ಲ. ಇವರ ಪೂರ್ವದ ಆದಿವಾಸಿ ಗಳಲ್ಲಿ ಬಹುದೇವೋಪಾಸನೆ ರೂಢಿಯಲ್ಲಿ ಇದ್ದಿರಬೇಕು. ಏಕೆಂದರೆ ಹರಪ್ಪಾ ಮೊಹೆಂಜೋದಾರೋಗಳಿಂದ ಅಗೆದು ತೆಗೆದ ಅಸ್ಥಿಪಂಜರಗಳು ಒಂದೇ ವರ್ಗದ ಜನರಲ್ಲವೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ದ್ರಾವಿಡರು ಏಕದೇವೋಪಾಸನೆಯನ್ನು (ಶಿವಪೂಜೆಯನ್ನು) ಸುಮೇರಿಯನ್‌ರಿಂದ ಪಡೆದಿರಬೇಕೆಂಬ ಅಭಿಪ್ರಾಯವಿದೆ.[೧] ಏಕೆಂದರೆ ಸಿಂಧೂ ನದೀ ತೀರದ ಜನರೊಡನೆ ಇವರ ವ್ಯಾಪಾರೀ ಮತ್ತು ಧಾರ್ಮಿಕ ಸಂಬಂಧವಿತ್ತೆಂದು ವಿದ್ವಾಂಸ ಸಾಂಕ್ರತ್ಯಾಯನ್ ತಮ್ಮ ಗ್ರಂಥದಲ್ಲಿ ಉಲ್ಲೇಖಿಸುತ್ತಾರೆ.[೨] ಇಂದಿನ ಇರಾಕ್ ಕ್ರಿ.ಪೂ. ೬೦೦೦ಕ್ಕಿಂತ ಹಿಂದೆ ಸುಮೇರಿಯನ್ ಸಂಸ್ಕೃತಿಯ ತಾಣವಾಗಿತ್ತು. ಯುಫ್ರಟಿಸ್ ಮತ್ತು ಟೈಗ್ರಿಸ್ ನದಿಗಳ ಮಧ್ಯದ ಪ್ರದೇಶವೇ 'ಮೆಸೆಪೊಟೇಮಿಯಾ' ಆಗಿದ್ದು ಇಲ್ಲಿಯ ಸಂಸ್ಕೃತಿಯನ್ನೇ ಸುಮೇರಿಯನ್ ಸಂಸ್ಕೃತಿ ಎಂದು ಕರೆಯಲಾಗಿದೆ. ಇದು ನಮ್ಮ ಸಿಂಧೂ ನದಿ ಸಂಸ್ಕೃತಿಯಷ್ಟೇ ಶ್ರೇಷ್ಠವಾಗಿತ್ತು. ಇದರ ಇತಿಹಾಸ ಕ್ರಿ.ಪೂ. ೯೦೦೦ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಅಲ್ಲಿಯ ಒಂದು ತಂಡ ಸಿಂಧೂ ನದೀ ತೀರಕ್ಕೆ ಬಂದಿರಬೇಕೆಂಬ ಊಹೆ ಬಹು ಬಲವತ್ತರವಾಗಿದೆ. ಅಥವಾ ದ್ರಾವಿಡರ ಒಂದು ಸಮೂಹ ಅಲ್ಲಿಗೆ ಹೋಗಿ ನೆಲೆ ನಿಂತು ತಮ್ಮ ಸಂಸ್ಕೃತಿಯ ಉತ್ಥಾನವನ್ನು ಮಾಡಿರಬೇಕು. ಬೈಬಲ್ ಮತ್ತು ಕುರ್‌ಆನ್ ಪ್ರಕಾರ ನೂಹ್(ಅ)ರವರು ಆ ಪ್ರದೇಶದ ಪ್ರಥಮ ಪ್ರವಾದಿಯೂ, (ಅವ್ವಲುರ್‌ರಸೂಲ್) ಮಾನವ ಜನಾಂಗದ ಮೊದಲ ಸುಧಾರಕರೂ ಆಗಿದ್ದರು. ಇವರ ಧರ್ಮಪ್ರಚಾರ ಕೇಂದ್ರ ಮೆಸೆಪೊಟೇಮಿಯಾ ಆಗಿತ್ತು ಮತ್ತು ಇವರು ಸುಮೇರಿಯನ್ ಆಗಿದ್ದರು.

"ನೂಹ್(ಅ) ಸಂತತಿಯವರಾದ ಸುಮೇರಿಯನ್‌ರು ಮೂರ್ತಿ ಪೂಜಕರಾಗದೇ ಏಕದೇವೋಪಾಸಕರಾಗಿದ್ದರು. ಕಾರಣ[೩] ಪ್ರವಾದಿ ನೂಹ್(ಅ)*ರವರು ತಮ್ಮ ಜನರನ್ನು ಏಕದೇವ ಸಿದ್ಧಾಂತಕ್ಕೆ ಆಹ್ವಾನಿಸಿದ್ದರೆಂದು ಕುರ್‌ಆನ್ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ.

---

* ಪ್ರವಾದಿ ಮುಹಮ್ಮದ್(ಸ)ರ ಹೊರತಾಗಿ ಇತರ ಪ್ರವಾದಿಗಳ ಹೆಸರು ಬಂದಾಗಲೂ ಅವರಿಗೆ ನಾವು 'ಅಲೈಹಿಸ್ಸಲಾಮ್' (ಅವರ ಮೇಲೆ ಶಾಂತಿ ಇರಲಿ) ಎಂಬ ಸ್ವಸ್ತಿ ವಚನವನ್ನು ಹೇಳುವ ರೂಢಿಯಿದೆ '(ಅ)' ಎಂಬ ಸಂಕೇತವು ಇದನ್ನೇ ಸೂಚಿಸುತ್ತದೆ.

(೪೯.೧೩) ಆದುದರಿಂದ ಅವರ ಅನುಯಾಯಿಗಳು ಕೂಡ ಏಕದೇವ ವಿಶ್ವಾಸಿಗಳಾಗಿದ್ದರು. ಇದೇ ಗ್ರಂಥದಲ್ಲಿ 'ಸುವಾಲ್' ಎಂಬ ದೇವರನ್ನು ಸುಮೇರಿಯನ್‌ರು ಪೂಜಿಸುತ್ತಿದ್ದರೆಂಬ ಉಲ್ಲೇಖ ಬರುತ್ತದೆ. (೭೧:೨೩) ಸಿಂಧೂ ನದಿ ತೀರದ ಜನರು ಪೂಜಿಸುತ್ತಿದ್ದ 'ಶಿವ'ನೇ 'ಸುವಾಲ್' ಆಗಿರಬೇಕೆಂದು ಬುಖಾರಿ ತಮ್ಮ ಗ್ರಂಥ 'ಫತ್ಹುಲ್ ಬಾರಿ'ಯಲ್ಲಿ ಪ್ರಸ್ತಾಪಿಸಿರುತ್ತಾರೆ. ಇದರಿಂದ ತಿಳಿದುಬರುವುದೇನೆಂದರೆ ಶಿವನಾರಾಧನೆಯನ್ನು ದ್ರಾವಿಡರು ಸುಮೇರಿಯನ್‌ರಿಂದ ಅಥವಾ ಸುಮೇರಿಯನ್‌ರು ಭಾರತೀಯರಿಂದ ಪಡೆದಿರಬೇಕು. ಅರಬರು ಕೂಡ ಇವರಿಂದಲೇ ಪಡೆದಿರುವ ಸಾಧ್ಯತೆಯಿದೆ. ಇದು ಏನೇ ಇರಲಿ ಭಾರತಕ್ಕೆ ಆರ್ಯರ ಆಗಮನಕ್ಕಿಂತ ಮುಂಚೆಯೇ ಸಿಂಧೂ ನದೀ ತೀರದ ಸಂಸ್ಕೃತಿಯಲ್ಲಿ ಏಕದೇವೋಪಾಸನೆ ಇದ್ದುದು ಖಚಿತ. ಬಹುಶಃ ಇವರ ಪ್ರಭಾವದಿಂದಲೇ ಆರ್ಯರು ಏಕದೇವೋಪಾಸನೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆಂದು ಕಾಣುತ್ತದೆ.[೪] ಆದ್ದರಿಂದಲೇ ಋಗ್‌ವೇದದಲ್ಲಿ "ಏಕಂ ಸತ್ ವಿಪ್ರಾ ಬಹುಧಾ ವದಂತಿ" 'ಒಂದೇ ದೇವರನ್ನು ತಿಳಿದವರು ಅನೇಕ ಹೆಸರುಗಳಿಂದ ಕರೆಯುತ್ತಾರೆ' ಎಂದು ಹೇಳಲಾಗಿದೆ. ಆದರೆ ದೇವನಾಮಗಳನ್ನು ಹೊಂದಿದ 'ಶಕ್ತಿ' ಒಂದೇ ಆಗಿದೆ. "ಋಗ್ವೇದವು ಯಾವುದೇ ಒಂದು ಮನುಷ್ಯ ದೇವನನ್ನು ಆರಾಧಿಸಲು ಆಜ್ಞಾಪಿಸುವುದಿಲ್ಲ" ಎಂಬ ಸಂಶೋಧಕರ ನುಡಿ ಗಮನಾರ್ಹವಾಗಿದೆ. ('ಋಗ್ವೇದದಲ್ಲಿ' ಲೇ. ವಿ.ವಿ.ಕೆ. ವಾಲತ್, ಪು.೩) ಸೃಷ್ಟಿಗೆ ಮೊದಲು ಪರಮೇಶ್ವರನೇ ಪರಮಾಧಿಕಾರಿಯಾಗಿದ್ದಾನೆಂಬ ಋಗ್‌ವೇದ[೫] ಪ್ರತಿಪಾದಿಸಿದರೆ ಕುರ್‌ಆನ್ ಕೂಡ ಮೊದಲು 'ಆತನೇ ಆದ್ಯನು ಮತ್ತು ಅಂತ್ಯನು, ಬಾಹ್ಯನು ಮತ್ತು ಅಂತರ್ಯನು ಮತ್ತು ಆತನೆ ಸರ್ವ ವಸ್ತುಗಳನ್ನು ಬಲ್ಲವನು' ಹಾಗೆಯೇ ಆತ ತನ್ನ ಅಸ್ತಿತ್ವದಲ್ಲಿ ಸ್ವಯಂಭುವೂ, ಸರ್ವಕ್ಕೆ ಆಗಿ ಆಲಂಬನಾಗಿ ಸರ್ವಾಲಂಬನೆನಿಸಿರುವನು." (ಅ. ೫೭:೩)

ಆದರೆ ಮನುಷ್ಯನ ಅಜ್ಞಾನ, ದುರ್ಬಲ ಮನಸ್ಸು, ಪುರೋಹಿತರು ತಮ್ಮ ಸ್ವಾರ್ಥ ಸಾಧನೆಗಾಗಿ ಪ್ರಚಲನೆಗೆ ತರುವ ಉಪಾಸನೆಯಿಂದಾಗಿ ದೇವರ ಭಿನ್ನ ಭಿನ್ನ ಶಕ್ತಿಗಳನ್ನೇ ಬೇರೆ ಬೇರೆ ದೇವರೆಂದು ಭಾವಿಸಿ ಆರಾಧಿಸುವ ಕ್ರಮ ಆಗಾಗ ಪ್ರಾರಂಭವಾದುದು ಸೃಷ್ಟಿಯ ಪೂಜೆಯಲ್ಲದೆ ಮತ್ತೇನೂ ಅಲ್ಲ. ಈ ನೆಲೆಯಲ್ಲಿ ಬೆಳಕನ್ನು ಕೊಡುವ ಸೂರ್ಯ, ಮಳೆಯನ್ನು ಕೊಡುವ ವರುಣ ಮುಂತಾದವುಗಳನ್ನು ಪೂಜಿಸುವ ಪದ್ಧತಿ ಬಹುದೇವೋಪಾಸನೆಗೆ ಎಡೆಯಾಯಿತು. ಈ ರೀತಿಯ ಧಾರ್ಮಿಕ ಹೀನಸ್ಥಿತಿ, ಸಾಮಾಜಿಕ ಅಸ್ತವ್ಯಸ್ತತೆ, ಅಶಾಂತಿಮಯ ವಾತಾವರಣ ಯಾವುದೇ ದೇಶದಲ್ಲಿ, ಯಾವುದೇ ಕಾಲಕ್ಕೆ ಸಂಭವಿಸಬಹುದು. ಮತ ಧರ್ಮಗಳ ಮೇಲಾಟ, ದೇವರ ಹೆಸರಿನಲ್ಲಿ ಪ್ರಾಣಿಬಲಿ, ನರಬಲಿ ಮುಂತಾದವು ನಡೆದ ಘಟನೆಗಳು ಜಾಗತಿಕ ಧರ್ಮಗಳ ಇತಿಹಾಸದಲ್ಲಿ ಕಾಣಸಿಗುತ್ತವೆ. ಆಗ ಪ್ರವಾದಿಗಳು, ಅವತಾರಿಗಳು ಅವತರಿಸಿ ಏಕದೇವೋಪಾಸನೆಗೆ ಜನರನ್ನು ಮರಳಿ ತರುವ ಪ್ರಯತ್ನಗಳೂ ನಡೆದಿವೆ. ಏಸು,

ಪ್ರವಾದಿ ಮುಹಮ್ಮದ್(ಸ),* ಮಹಾತ್ಮಾ ಬಸವೇಶ್ವರ ಮುಂತಾದವರು ಜನ್ಮವೆತ್ತಿ ಇಂಥ ಕಾರ್ಯವನ್ನೇ ಮಾಡಿದರು. ಈ ನೆಲೆಯಲ್ಲಿ ಅರಬಸ್ತಾನದಲ್ಲಿ ಕ್ರಿ.ಶ. ೬ನೇ ಶತಮಾನದಲ್ಲಿ ಪ್ರ. ಮುಹಮ್ಮದ್(ಸ)ರವರು ಮತ್ತು ಭಾರತದ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಬಸವಣ್ಣನವರು ಧಾರ್ಮಿಕ, ಸಾಮಾಜಿಕ ಬದಲಾವಣೆಗಳನ್ನು ತಂದು ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಸ್ಥಾಪಿಸಿದುದನ್ನು ತೌಲನಿಕವಾಗಿ ಈ ಲೇಖನದಲ್ಲಿ ವಿವೇಚಿಸಲಾಗಿದೆ.

ಇಸ್ಲಾಂ ಪೂರ್ವ ಅರೇಬಿಯಾದ ಧಾರ್ಮಿಕ ಸ್ಥಿತಿ ತೀರ ನಿಕೃಷ್ಟವಾಗಿದ್ದಿತು. ಜನರು ಭೋಗವಿಲಾಸದಲ್ಲಿ ಮುಳುಗಿ ಹೋಗಿದ್ದರು. ನೈತಿಕತೆ ಶೂನ್ಯವಾಗಿತ್ತು. ಕಲಹ, ಕ್ರೌರ್ಯ, ಹಿಂಸೆಗಳು ಸಾಮಾನ್ಯವಾಗಿದ್ದವು. ಸಮಾಜದಲ್ಲಿ ನೆಮ್ಮದಿ, ಸುವ್ಯವಸ್ಥೆಯಿರಲಿಲ್ಲ. ಜನರು ಕಾಬಾದ ಸುತ್ತಲೂ ನಗ್ನ, ಅರೆನಗ್ನರಾಗಿ ಪ್ರದಕ್ಷಿಣೆ ಹಾಕುತ್ತಿದ್ದರು. ಬಹುಸಂಖ್ಯಾತರು ಮೂರ್ತಿಪೂಜೆ, ಬಹುದೇವೋಪಾಸನೆಯಲ್ಲಿ ತೊಡಗಿದ್ದರು. ಕಂಡ ಕಂಡ ಕಲ್ಲುಗಳನ್ನು ಕೂಡ ದೇವರೆಂದು ಪೂಜಿಸುತ್ತಿದ್ದರು. ಈ ಮೂರ್ತಿಪೂಜೆ ಸಿರಿಯಾ ದೇಶದ ಬಳುವಳಿಯಾಗಿತ್ತು. ಒಂದು ಸಲ ಕಾಬಾದ ವ್ಯವಸ್ಥಾಪಕ ಅಮ್ರ್‌ಲಿನ್ ಲಹ್ಮಿ ಎಂಬ ವ್ಯಕ್ತಿ ಮೂರ್ತಿಪೂಜೆಗೆ ಶ್ರೀಕಾರ ಹಾಕಿದ. ಇವನಿಂದಾಗಿ ದೇವರ ವಾಸಸ್ಥಾನವಾಗಿದ್ದ ಕಾಬಾ 'ಸಾಯಿಬ', 'ಮಸೀಲ', 'ಬಹೀರ' ಮುಂತಾದ ವಿಗ್ರಹಗಳ ಪೂಜಾ ಸ್ಥಳವೂ ಆಗಿ ಪರಿಣಮಿಸಿತು. (ಪವಿತ್ರ ಕುರ್‌ಆನ್ (೫:೧೦೩) ಅಲ್ಲದೆ ಇಲ್ಲಿಯ ಜನರ ಮನೆಗಳಲ್ಲಿ ಚಿಕ್ಕಪುಟ್ಟ ವಿಗ್ರಹಗಳೂ ಇದ್ದು ಅವುಗಳ ಪೂಜೆಯೂ ನಡೆಯುತ್ತಿತ್ತು. 'ಹಬಲ್' ಎಂಬ ಮಾನವಾಕೃತಿಯ ಕಲ್ಲಿನ ಮೂರ್ತಿಯನ್ನು ಕಾಬಾದೊಳಗೆ ಪ್ರತಿಷ್ಠಾಪಿಸಲ್ಪಟ್ಟಿತ್ತು. ಅದರ ಮುಂದೆ ಏಳು ಬಾಣಗಳನ್ನು ಇಟ್ಟಿದ್ದ ಪುರೋಹಿತರು ಅವು ಅದೃಷ್ಟದ ಬಾಣಗಳೆಂದು ಜನರನ್ನು ನಂಬಿಸಿ ಸಂಕಟ ಸಮಯದಲ್ಲಿ ಚೀಟಿಯ ಮೂಲಕ ಆ ಅದೃಷ್ಟದ ಬಾಣಗಳನ್ನು ಎತ್ತುವ ಕಾರ್ಯ ಮಾಡುತ್ತಿದ್ದರು. 'ಅಸಾಫ್' ಮತ್ತು 'ನಾಯಿಲ್' ವಿಗ್ರಹಗಳ ಮುಂದೆ ಕುರೈಶ ಕುಲದವರು ಪ್ರಾಣಿಬಲಿ ಕೊಡುತ್ತಿದ್ದರು. 'ಮನ್‌ಫ್' ಎಂಬುದು ಇವರ ಇನ್ನೊಂದು ವಿಗ್ರಹವಾಗಿದ್ದಿತು. ಮೂರ್ತಿಪೂಜೆ ಮತ್ತು ಬಹುದೇವೋಪಾಸನೆ ಎಂಬ ಸಾಂಸರ್ಗಿಕ ರೋಗ ಜನರ ಮುಖಾಂತರ ದೇಶದ ತುಂಬೆಲ್ಲ ಹರಡಿತ್ತು. ಸಿರಿಯಾಕ್ಕೆ ಹೋಗಿಬಂದವರೆಲ್ಲ ಮೂರ್ತಿಗಳನ್ನು ತಂದು ಕಾಬಾದಲ್ಲಿ ಸ್ಥಾಪಿಸಿದ್ದರಿಂದ ಅವುಗಳ ಸಂಖ್ಯೆ ೩೬೦ ಆಗಿದ್ದಿತು.

---

* ಪ್ರವಾದಿ ಮುಹಮದ್ ಅವರ ಹೆಸರು ಹೇಳುವವರು, ಬರೆಯುವವರು ಮತ್ತು ಕೇಳುವವರು ಅವರಿಗಾಗಿ 'ಸಲ್ಲಲ್ಲಾಹು ಅಲೈಹಿವಸಲ್ಲಮ್' ಎಂಬ ಸ್ವಸ್ತಿ ವಚನವನ್ನು ಹೇಳಬೇಕೆಂಬುದು ಇಸ್ಲಾಮಿನ ಒಂದು ಧಾರ್ಮಿಕ ನಿಯಮ. "ಅಲ್ಲಾಹನು ಅವರ ಮೇಲೆ ಶಾಂತಿ ಮತ್ತು ಅನುಗ್ರಹಗಳನ್ನಿರಿಸಲಿ" ಎಂಬುದೇ ಇದರ ಅರ್ಥ. ಪ್ರತಿ ಸಲವೂ ಪ್ರವಾದಿ ಮುಹಮ್ಮದ್‌ರ ಹೆಸರು ಬಂದಾಗ ಈ ವಚನವನ್ನು ಪೂರ್ಣವಾಗಿ ಬರೆಯುವ ಬದಲು '(ಸ)' ಎಂದು ಸಂಕೇತ ರೂಪದಲ್ಲಿ ಬರೆಯಲಾಗುತ್ತದೆ.

ಸು. ೨೫೦೦ ವರುಷಗಳ ಹಿಂದೆ ಇಬ್ರಾಹೀಮ್(ಅ)ರು ಸ್ಥಾಪಿಸಿದ್ದ ಧರ್ಮದ ಗಂಧ ಗಾಳಿಯೂ ಇಲ್ಲದೆ ಏಕದೇವೋಪಾಸನೆಯು ಬಹುದೇವೋಪಾಸನೆಯ ಅಡಿಯಲ್ಲಿ ಹೂಳಲ್ಪಟ್ಟಿತ್ತು. ಇಂಥ ಸಮಯದಲ್ಲಿ ಬೆಳಕಾಗಿ ಮೂಡಿಬಂದ ಮುಹಮ್ಮದ್(ಸ)ರು ಏಕದೇವೋಪಾಸನೆಯನ್ನು ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತರಲು ಪ್ರಯಾಸಪಟ್ಟರು. ಅವರ ಈ ನುಡಿಗಳು:

೧) "ಯಾವುದನ್ನೂ ಸೃಷ್ಟಿಸಲಾಗದೆ ಸ್ವತಃ ಸೃಷ್ಟಿಸಲ್ಪಟ್ಟವುಗಳನ್ನು ಅಲ್ಲಾಹನ ಸಹಭಾಗಿಗಳಾಗಿ ಮಾಡುವವರು ಎಂತಹ ತಿಳಿಗೇಡಿಗಳು? ಅವು ಇವರಿಗೆ ಸಹಾಯ ಮಾಡಲಾರವು, ಸ್ವತಃ ತಮ್ಮ ಸಹಾಯ ಮಾಡಿಕೊಳ್ಳಲು ಅಶಕ್ತವಾಗಿವೆ." (ಪ್ರ. ಕುರ್‌ಆನ್ ೭:೧೯೧-೧೯೨)

ಏಕೈಕ ದೇವರಿಗೆ 'ಲಾತ್', 'ಮನಾತ್', 'ಉರುಝ್ಝ' ಎಂಬ ಪುತ್ರಿಯರನ್ನು ಕಲ್ಪಿಸಿ ಆ ದೇವರುಗಳನ್ನು ಆರಾಧಿಸುವ ಕ್ರಮವನ್ನು ರೂಢಿಸಿಕೊಂಡಿದ್ದರು. ಆದರೆ ಪ್ರವಾದಿ ಮುಹಮ್ಮದ್‌ರು (ಸ) ಇದನ್ನು ಹೊಡೆದುಹಾಕಿ ಹೀಗೆ ಹೇಳಿದರು:

೨) "ಅವನು ಯಾರನ್ನು ತನ್ನ ಪತ್ನಿ ಅಥವಾ ಪುತ್ರನನ್ನಾಗಿ ಮಾಡಿಕೊಂಡಿಲ್ಲ." (ಕು. ೭೨:೩) "ಅವನಿಗೊಬ್ಬ ಬಾಳ ಸಂಗಾತಿಯೇ ಇಲ್ಲದಿರುವಾಗ ಅವನಿಗೆ ಮಗನಾಗುವುದು ಹೇಗೆ?" (ಕುರ್‌ಆನ್-೬.೧೦೧) (ಮಗಳಾಗುವುದೂ ಕೂಡ ಹೇಗೆ?)

೩) "ಯಾರೂ ಆತನಿಗೆ (ಅಲ್ಲಾಹನಿಗೆ) ಸಮಾನರಲ್ಲ" (ಕುರ್‌ಆನ್ ೧೨:೪ ಮತ್ತು ೪೨:೧೧)

೪) "ಅವನಿಗೆ ಸಮಾನವಾಗಿ ಯಾವುದೂ ಇಲ್ಲ. ಅವನೇ ಎಲ್ಲ ವಸ್ತುಗಳನ್ನು ಸೃಷ್ಟಿಸಿದನು" (ಪ.ಕು. ೬:೧೦೧)

೫) "ಆಕಾಶದಲ್ಲಿಯೂ ಭೂಮಿಯಲ್ಲಿಯೂ ಇರುವುದೆಲ್ಲವೂ ಅಲ್ಲಾಹನವೇ ಆಗಿವೆ" (ಪ.ಕು. ೨:೨೮೪)

೬) "ಇವರು ಮಾಡಿಕೊಂಡಿರುವ ಸಹಭಾಗಿಗಳು (ಸಮಾನ ದೇವರುಗಳು) ಅಲ್ಲಾಹನಂತೆ ಏನನ್ನಾದರೂ ಸೃಷ್ಟಿಸಿದ್ದು ಉಂಟೇ?... ಸಕಲ ವಸ್ತುಗಳ ಸೃಷ್ಟಿಕರ್ತನು ಅಲ್ಲಾಹ ಮಾತ್ರ ಮತ್ತು ಅವನು ಏಕೈಕನೂ ಅಜೇಯನೂ ಆಗಿರುತ್ತಾನೆ. ಅವನಿಗಾರೂ ಸಂತಾನವಿಲ್ಲ. ಅವನು ಯಾರ ಸಂತಾನವೂ ಅಲ್ಲ. ಅವನಿಗೆ ಯಾರೂ ಸಮಾನರಲ್ಲ." (ಪು.ಕುರ್‌ಆನ: ೧೩-೧೬)

ಹನ್ನೆರಡನೇ ಶತಮಾನದ ಕರ್ನಾಟಕ ಧಾರ್ಮಿಕ ಪರಿಸ್ಥಿತಿ ಅರಬಸ್ತಾನಕ್ಕಿಂತ ಭಿನ್ನವೇನೂ ಇರಲಿಲ್ಲ. ಮೂರ್ತಿಪೂಜೆಯ, ಬಹುದೇವೋಪಾಸನೆಯ, ಯಜ್ಞಯಾಗ ಗಳ ಬಾಹುಳ್ಯವಿತ್ತು. ಯಜ್ಞಗಳಲ್ಲಿ ಕುರಿ, ಮೇಕೆಗಳಂಥ ಪ್ರಾಣಿಗಳ ಬಲಿ ಕೊಡಲಾಗುತ್ತಿತ್ತು. ಕುಲದೈವ ಮನೆದೈವಗಳಲ್ಲಿ ದೇವರ ಹಂಚಿಕೆಯಾಗಿತ್ತು. ಅಷ್ಟೇ

ಅಲ್ಲಿ ದೈವ ದೈವವೆಂದು ಕಾಲಿಡಲು ಸ್ಥಳವೇ ಇಲ್ಲದ ಸ್ಥಿತಿ ಉಂಟಾಗಿತ್ತು. ದೇವರಲ್ಲಿ ಗಂಡು ದೇವರು, ಹೆಣ್ಣು ದೇವರೆಂದು ವಿಭಜನೆ ಮಾಡಲ್ಪಟ್ಟಿತ್ತು. ಮಾರಿ ಒಂದು ಹೆಣ್ಣು ದೇವತೆ. ಮಾರಿಕವ್ವೆ, ಮಾರಮ್ಮ, ಊರಮಾರಿ, ಹೆಮ್ಮಾರಿ ಮುಂತಾದವು ಮಾರಿಯ ಇತರ ಹೆಸರುಗಳು. ಇವಳ ಬಂಗಾರದ ವಿಗ್ರಹವನ್ನು ಮಾಡಿ ಕೊರಳಲ್ಲಿ ಕಟ್ಟಿಕೊಳ್ಳುವ ರೂಢಿಯಿತ್ತು. ಆದರೆ ಕಷ್ಟ ಬಂದಾಗ ಅದನ್ನು ಮಾರಿ ಹಣ ಪಡೆಯುತ್ತಿದ್ದರು. ಅದಕ್ಕೆ ಪ್ರವಾದಿ ಬಸವಣ್ಣನವರು ಈ ಪದ್ಧತಿಯನ್ನು ವಿಡಂಬಿಸುತ್ತಾರೆ. "ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯ?" ಎಂದು ಪ್ರಶ್ನಿಸುತ್ತ, "ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿಯೇ?" ಎಂದು ಕೇಳುತ್ತ ಈ ದೇವರು ಎಂದೂ ನಮ್ಮನ್ನು ರಕ್ಷಿಸಲಾರದೆಂದು ಹೇಳುತ್ತಾರೆ. ಮಾರಿ ಸ್ತ್ರೀ ದೇವತೆಯಲ್ಲದೆ ಕಾಳಿ, ಭದ್ರಕಾಳಿ, ಚಾಮುಂಡಿ, ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವೀ, ಇಂದ್ರಾಣಿ, ಗಂಗೆ, ಗೌರಿ, ಭೈರವಿ, ಮಾಳಚಿ ಮುಂತಾದ ಸ್ತ್ರೀ ದೇವತೆಗಳನ್ನು ಪೂಜಿಸುವ ಪದ್ಧತಿ ಆಗ ಪ್ರಚಲಿತವಿತ್ತು. ಬಸವಣ್ಣನವರು ತಮ್ಮ ಏಕದೇವೋಪಾಸನೆಯ ಪ್ರತಿಪಾದನೆ ಮತ್ತು ಪ್ರಚಲನೆಯಿಂದ ಇವೆಲ್ಲವುಗಳಿಗೂ ಕುಠಾರಾಘಾತವನ್ನಿತ್ತರು. ಏಕದೇವೋಪಾಸನೆಯನ್ನು ಆಚರಣೆಯಲ್ಲಿ ತರಲು ಪ್ರಯತ್ನಿಸಿ ಸಫಲರಾದರು. ದೇವರ ಕುರುಹು ಆದ ಇಷ್ಟಲಿಂಗವನ್ನು ಪೂಜಿಸಲು ಹೇಳಿದರು. ಇದು ಸಮಾನತೆಯ ಕುರುಹೂ ಆಯಿತು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಎಲ್ಲರೂ ಒಂದೇ ದೇವರ ಅಡಿಯಲ್ಲಿ ಭಕ್ತರಾದರು, ಶರಣರಾದರು. ಆ ದೇವರು ನಮ್ಮ ಪರಂಪರೆಯಲ್ಲಿ ಪ್ರಚಲಿತವಿರುವ ಶಿವನೇ ಹೊರತು ಮತ್ತಾರೂ ಅಲ್ಲ.

ಕುರ್‌ಆನ್‌ದಲ್ಲಿ ಒಬ್ಬನೇ ದೇವರು ಇರುವುದನ್ನು ಒತ್ತುಕೊಟ್ಟು ಮತ್ತು ದೃಢವಾಗಿಯೇ ಹೇಳಲಾಗಿದೆ, ವಿವಿಧ ರೀತಿಯಲ್ಲಿ. "ನಿಮ್ಮ ಪ್ರಭು ಅಲ್ಲಾಹನೇ ಆಗಿರುತ್ತಾನೆ. ಅವನು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನು ಸೃಷ್ಟಿಸಿದನು. ಎಲ್ಲವೂ ಅವನ ಅಧೀನವಾಗಿವೆ..." (೭:೫೪) ಇನ್ನೊಂದೆಡೆ ಹೀಗೆ ಹೇಳಿದೆ: ಅವನು ಆಕಾಶದಿಂದ ಭೂಮಿಯವರೆಗೂ ಲೋಕಾಡಳಿತ ವ್ಯವಸ್ಥೆಯನ್ನು ಮಾಡುತ್ತಾನೆ. (೩೨:೫) "ಆಜ್ಞಾಧಿಕಾರವು ಅಲ್ಲಾಹನ ಹೊರತು ಇನ್ನಾರಿಗೂ ಇಲ್ಲ." (೪೦:೧೧) ಹೀಗೆ ಏಕದೇವನ ಅಸ್ತಿತ್ವವನ್ನು ಮನಮುಟ್ಟುವಂತೆ ನಿರೂಪಿಸಲಾಗಿದೆ.

ಅಲ್ಲಾಹನು ಹೇಗೆ ಸರ್ವಸ್ವತಂತ್ರ, ವಿಶ್ವದ ಅಧಿಪತಿ, ನಿಯಾಮಕ, ಕರ್ತ ಆಗಿದ್ದಾನೊ ಹಾಗೆಯೇ ಬಸವಣ್ಣನವರು ಪ್ರತಿಪಾದಿಸುವ ದೇವರು ಕೂಡ ಏಕೈಕನೂ ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆಗಿದ್ದಾನೆ. "ದೇವನೊಬ್ಬ ನಾಮ ಹಲವು; ಪರಮ ಪತಿವ್ರತೆಗೆ ಗಂಡನೊಬ್ಬ..." (ವ.೬೧೬) ಎಂದು ಪ್ರತಿಪಾದಿಸುತ್ತಾ ಏಕದೇವನ ಇರುವಿಕೆ ಮತ್ತು ನಿಷ್ಠೆಯನ್ನು ದೃಢೀಕರಿಸುತ್ತಾರೆ. ನಮ್ಮೆಲ್ಲರ, ಜಗತ್ತಿನಲ್ಲಿರುವ ಎಲ್ಲ ಜೀವಿ(ಪಶು)ಗಳ ಒಡೆಯನೂ ಆದ 'ಪಶುಪತಿ ಜಗಕ್ಕೇಕೋದೇವ' ಅಲ್ಲದೆ ಸ್ವರ್ಗ-ಮರ್ತ್ಯ (ಭೂಮಿ)ಗಳಲ್ಲಿಯೂ ಕೂಡ ಒಬ್ಬನೇ ಒಬ್ಬ ದೇವ. ಅವನನ್ನು 'ಮಹಾದೇವ'

ನೆಂದು ಕರೆಯಬಹುದೇ ಹೊರತು ಇದಕ್ಕಿಂತ ಬೇರೆ ದೊಡ್ಡ ಶಬ್ದ ಯಾವುದೂ ಇಲ್ಲ. (ವ.೫೨೬) ಭಾರತೀಯ ಪರಂಪರೆಯಲ್ಲಿ ದೇವರನ್ನು 'ಶಿವ', 'ರುದ್ರ', 'ಪಶುಪತಿ', 'ಮಹಾದೇವ' (Almighty) ಎಂಬ ಪದಗಳಿಂದ ಗುರುತಿಸಲಾಗಿದೆ. ಆದರೆ ಇವು ಯಾವೂ ಅವನ ಹೆಸರುಗಳಲ್ಲ. ಗುಣವಿಶೇಷಗಳನ್ನು ಹೇಳುವ ಪದಗಳು ಮಾತ್ರ. ತಮ್ಮ ಏಕದೇವ ನಿಲುವಿಗೆ ಬಸವಣ್ಣನವರು ಶೃತಿಯ ಪ್ರಮಾಣವನ್ನು ಕೊಟ್ಟು ದೃಢೀಕರಿಸುತ್ತಾರೆ. "ವೇದ... ಏಕೋದೇವೋ ರುದ್ರೋನ ದ್ವಿತೀಯಃ" (ವ.೫೨೯) "ಓಂ ದ್ಯಾವಾಭೂಮೀ ಜನಯನ್ ದೇವ" (ಅದೇ, ವ.) ಭೂಮಿ ಆಕಾಶಗಳನ್ನು ಸೃಷ್ಟಿಸಿದ ದೇವರು ಶಿವ, ಕುರ್‌ಆನ್‌ದಂತೆ ಭೂಮಿ ಆಕಾಶಗಳಲ್ಲಿಯೂ ವ್ಯಾಪಿಸಿದ್ದಾನೆ. ಅವನ ಅಧಿಕಾರ ಎಲ್ಲ ವಸ್ತುಗಳ ಮೇಲಿದೆ ಎಂಬುದನ್ನು ಶೃತಿ(ವೇದ)ಗಳು ಸಾರಿ ಹೇಳುತ್ತವೆಂದು ಪ್ರಮಾಣೀಕರಿಸುತ್ತಾರೆ ಬಸವಣ್ಣನವರು. ಈ ಚರಾಚರ ಸೃಷ್ಟಿಯ ಕರ್ತನಾಗಿ ಈ ವಿಶ್ವದ ಮುಖ, ಚಕ್ಷು, ಬಾಹು, ಪಾದ, ಸಕಲ ವಿಸ್ತಾರದ ರೂಹು ಅವನೇ ಆಗಿದ್ದಾನೆಂದು ಇನ್ನೊಂದು ವಚನದಲ್ಲಿ ಹೇಳುತ್ತಾರೆ. (ವ.೫೩೨) ಆ ಪರಮನಿಗೆ ನತಮಸ್ತಕರಾಗಿ ಬಾಗುತ್ತಾರೆ. ನಾವೂ ಅವನಿಗೆ ನಮಸ್ಕರಿಸುವಂತೆ ಬೋಧಿಸುತ್ತಾರೆ. (ವ.೫೩೫) "ಇಬ್ಬರು ದೇವರೆಂದು ಉಬ್ಬಿ ಮತ್ತು ಮಾತನಾಡಬೇಡ, ಒಬ್ಬನೆ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ!" (ವ. ೫೪೫) ಎಂದು ಉಪದೇಶಿಸುತ್ತಾರೆ.

ಕುರಾನದ ಪ್ರಕಾರ ಈಗಾಗಲೇ ಹೆಸರಿಸಿದ ದೇವರುಗಳಲ್ಲದೆ ವದ್, ಸುವಾಲ್, ಯಗೂಸ್, ಯೂಕ್, ನಸ್ರ ಮುಂತಾದ ದೇವರುಗಳ ಪೂಜೆಯೂ ಇಸ್ಲಾಮಿನ ಆರಂಭ ಕಾಲದಲ್ಲಿ ನಡೆಯುತ್ತಿತ್ತು ಮತ್ತು ಅವುಗಳ ಮಂದಿರಗಳೂ ಇದ್ದವು. ಆದರೆ ಇದರ ನಂತರ ದೇವಾಲಯಗಳು ಮಸೀದಿಗಳಾಗಿ ಪರಿವರ್ತಿಸಲ್ಪಟ್ಟವು ಎಂದು ತಿಳಿದುಬರುತ್ತದೆ.

ಇದರಂತೆ ಬಸವಣ್ಣನ ಕಾಲದಲ್ಲಿಯೂ ಸಹ ಹೆಣ್ಣು ದೇವರುಗಳಲ್ಲದೆ ಗಂಡು ದೇವರುಗಳೂ ಅಸ್ತಿತ್ವದಲ್ಲಿದ್ದವು. ಬೆನಕ (ಗಣಪತಿ), ವಿನಾಯಕ, ಮೈಲಾರ, ಜೋಕುಮಾರ, ನಂದಿ (ಬಸವಣ್ಣ), ವೀರಭದ್ರ ಮುಂತಾದ ಪುರುಷ ದೇವರುಗಳಲ್ಲದೆ ನಾಗ, ವೃಕ್ಷ ಅರಳಿಮರ ಇತ್ಯಾದಿ ಮುಂತಾದ ಪ್ರಾಣಿ ಮತ್ತು ಸಸ್ಯಗಳ ಪೂಜೆಯೂ ನಡೆಯುತ್ತಿತ್ತು. ಕಾರಣ ಇದನ್ನೆಲ್ಲವನ್ನೂ ಕಂಡ ಬಸವಣ್ಣನವರು ಇಂಥ ದೇವರುಗಳನ್ನು ವಿಡಂಬಿಸುತ್ತಾರೆ. "ಮಾಣದೆ ಅರಳೆಯ (ಅರಳೆಯ ಗಿಡ/ಅಶ್ವತ್ಥ) ತಿಟ್ಟನೆ ತಿರುಗುವ ಗಾಣದೆತ್ತಿನಂತೆ... ಮಾಣದೆ ಪೂಜಿಸು ಲಿಂಗವ". (ದೇವರ) (ವ.೫೭೮). "ನೀರ ಕಂಡಲ್ಲಿ ಮುಳುಗುವರಯ್ಯಾ, ಮರನ ಕಂಡಲ್ಲಿ ಸುತ್ತುವರಯ್ಯಾ... ನಿಮ್ಮನೆತ್ತ ಬಲ್ಲರು ಕೂಡಸಂಗಮದೇವಾ..." (ವ.೫೭೯) ಸಾಮಾನ್ಯರು ತಮ್ಮ ಬದುಕಿಗೆ ಬೇಕಾಗುವ ವಸ್ತುಗಳನ್ನೆಲ್ಲವನ್ನೂ ದೇವರೆಂದು ಭಾವಿಸಿ ಪೂಜಿಸುವ ಅಜ್ಞಾನಿಗಳನ್ನು ಬಸವಣ್ಣನವರು ಖಂಡಿಸಿ ಏಕದೇವೋಪಾಸನೆಯ ಸಿದ್ಧಾಂತವನ್ನು ಬಲವಾಗಿ ಮಂಡಿಸುತ್ತಾರೆ.

"ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲನಾರಿ ದೈವ ಕಾಣಿರೊ,
ಕೊಳಗ ದೈವ, ಗಿಣ್ಣಲು ದೈವ ಕಾಣಿರೊ,
ದೈವ ದೇವವೆಂದು ಕಾಲಿಡಲಿಂಬಿಲ್ಲ,
ದೈವನೊಬ್ಬನೆ ಕೂಡಲಸಂಗಮದೇವ" (ವ.೫೬೧)

ಪ್ರತಿಯೊಂದು ವಸ್ತು ದೇವರೆಂದು ಆರಾಧಿಸುವ ಅನಿಷ್ಟ ಪದ್ಧತಿ, ಮೂಢ ನಂಬಿಕೆಯ, ಅಜ್ಞಾನದ ಫಲ, ಕಾರಣ ಇದನ್ನು ತೊರೆದು ಪರಾತ್ಪರ ಶಕ್ತಿಯೊಂದನ್ನೇ ಪೂಜಿಸುವುದೇ ಶ್ರೇಷ್ಠ. (ಇಲ್ಲಿ ಕೂಡಲಸಂಗಮದೇವ ಎಂಬುದು ಆ ಅನಂತದ ಹೆಸರೇ ಹೊರತು ಸ್ಥಾವರಲಿಂಗವಲ್ಲ. ಅಲ್ಲದೆ 'ಕೂಡಲಸಂಗಮದೇವ' ಬಸವಣ್ಣನವರ ವಚನಾಂಕಿತವೂ ಹೌದು) ಅದಕ್ಕಾಗಿ ಮತ್ತೆ ಮತ್ತೆ ಏಕದೇವನ ಪೂಜೆಯನ್ನೇ ಪ್ರತಿಪಾದಿಸುತ್ತಾರೆ. "ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ. ಒಬ್ಬನೆ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ!" (ವ.೫೪೫) ಒಬ್ಬನೇ ದೇವರೆಂಬುದು ಸತ್ಯ. ಹಲವು ದೇವರ ಆರಾಧನೆಯಿಂದ ಪ್ರಯೋಜನವಿಲ್ಲ, ಮುಕ್ತಿಯೂ ದೊರೆಯುವುದಿಲ್ಲ.

ಕುರ್‌ಆನ್‌ದಲ್ಲಿ ಒಬ್ಬನೇ ದೇವರು ಇರುವುದನ್ನು ಒತ್ತುಕೊಟ್ಟು ಮತ್ತು ದೃಢವಾಗಿಯೇ ಹೇಳಲಾಗಿದೆ, ವಿವಿಧ ರೀತಿಯಲ್ಲಿ. "...ನಿಮ್ಮ ಪ್ರಭು ಅಲ್ಲಾಹನೇ ಆಗಿರುತ್ತಾನೆ... ಅವನು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನು ಸೃಷ್ಟಿಸಿದನು. ಎಲ್ಲವೂ ಅವನ ಅಧೀನವಾಗಿದೆ..." (೭:೫೪) ಇನ್ನೊಂದೆಡೆ ಹೀಗೆ ಹೇಳಿದೆ: "ಅವನು ಆಕಾಶದಿಂದ ಭೂಮಿಯವರೆಗೂ ಲೋಕಾಡಳಿತ ವ್ಯವಸ್ಥೆಯನ್ನು ಮಾಡುತ್ತಾನೆ." (೩೨:೫) "ಆಜ್ಞಾಧಿಕಾರವು ಅಲ್ಲಾಹನ ಹೊರತು ಇನ್ನಾರಿಗೂ ಇಲ್ಲ." (೪೦:೧೨) "ಅವನ ಪ್ರಭುತ್ವದಲ್ಲಿ ಯಾರೂ ಸಹಭಾಗಿಯಲ್ಲ. ಅವನಿಗೊಬ್ಬ ರಕ್ಷಕ ಮಿತ್ರನಿದ್ದಾನೆನ್ನಲು ಅವನೇನೂ ವಿವಶನಲ್ಲ" (೧:೧೧೧). ಹೀಗೆ ಏಕದೇವನ ಅಸ್ತಿತ್ವವನ್ನು ಮನಮುಟ್ಟುವಂತೆ ನಿರೂಪಿಸಲಾಗಿದೆ.

ಹೀಗೆ ಬಸವಣ್ಣನವರು ಕೂಡ ಸಪ್ರಮಾಣ ಮತ್ತು ತರ್ಕಬದ್ಧವಾಗಿ ಒಬ್ಬನೇ ದೇವರು ಎಂಬುದು ಸತ್ಯ, ಹಲವು ದೈವಗಳೆಂಬುದು ಹುಸಿ ಎಂದು ಪ್ರತಿಪಾದಿಸುತ್ತಾರೆ. ತಮ್ಮ ಇಷ್ಟಾರ್ಥಗಳನ್ನು ಈ ದೇವರುಗಳು ಈಡೇರಿಸುತ್ತವೆಂಬ ಅಜ್ಞಾನ, ಭಯ ಮುಂತಾದ ಕಾರಣಗಳಿಂದ ಅಜ್ಞ ಜನರು ನಂಬಿ ಅವುಗಳನ್ನು ಪೂಜಿಸುವುದು ಅವಿವೇಕವೆಂದು ಮನಗಾಣಿಸುತ್ತಾರೆ. ತಮ್ಮನ್ನು ತಾವು ರಕ್ಷಿಸಿಕೊಳ್ಳಲಾರದ, ತಾವೇ ಬೇಡಿಕೊಳ್ಳುವ ದೇವರುಗಳು ನಮಗೇನು ಕೊಡಬಲ್ಲವು? ಇಂಥ ದೈವಗಳನ್ನು ನಂಬಿ ನಾವು ಕೆಟ್ಟುಹೋಗುತ್ತೇವೆ. ಇವುಗಳಿಗೆ ಬೇಡುವುದು ನಿರರ್ಥಕ. ಇನ್ನು ಕೆಲವು ದೇವರುಗಳು ನಾಯಿಗಿಂತ ಕಡೆಯೆಂದು ಪ್ರವಾದಿ ಬಸವಣ್ಣನವರು ಮೂದಲಿಸುತ್ತಾರೆ. ಮತ್ತು ಮಾರಯ್ಯ ಮುಂತಾದ ನೂರು ದೈವಗಳೆಂಬ ಗಡಿಗೆಗೆ ಏಕೈಕ ದೇವರೆಂಬ

ಬಡಿಗೆ ಅವೆಲ್ಲವುಗಳನ್ನು ಒಡೆದು ಹಾಕುತ್ತದೆಂದು ನಿರೂಪಿಸುತ್ತಾರೆ. ಇದೇ ರೀತಿ ಪ್ರವಾದಿ ಮುಹಮ್ಮದ್(ಸ)ರು ತಮ್ಮ ಕೈಯಲ್ಲಿಯ ಕೋಲಿನಿಂದ ಎಲ್ಲ ಕೀಳುದೈವಗಳನ್ನು ಒಡೆದು ಹಾಕಿದರೆಂಬ ಸಂಗತಿ ತಿಳಿದುಬರುತ್ತದೆ. ಇವರ ಕಾಲಕ್ಕಿಂತ ಬಸವಣ್ಣನವರ ಕಾಲದಲ್ಲಿ ಅರಗಿನಿಂದ, ಲೋಹದಿಂದ ಮಾಡಿದ ದೇವರ ಮೂರ್ತಿಗಳನ್ನು ಪೂಜಿಸುವ ಪದ್ಧತಿ ರೂಢಿಯಲ್ಲಿತ್ತು. ಆದರೆ ಇವು ಕೂಡ ಉರಿಗೆ ಕರಗುವಂಥವುಗಳಾಗಿದ್ದವು. ಕಾರಣ ಬೆಂಕಿಗೆ ಕರಗುವ, ಮುರುಟುವ ದೈವರುಗಳನ್ನು ಪೂಜಿಸುವುದೆಂತು? ಇನ್ನು ಬಂಗಾರದ ದೇವರ ಮೂರ್ತಿಗಳನ್ನು ಮಾಡಿಸಿ ಆರಾಧಿಸುತ್ತಿದ್ದರು. ಆದರೆ ಕಷ್ಟ ಬಂದರೆ ಅವನ್ನೇ ಮಾರಿ ಹೊಟ್ಟೆಹೊರೆದುಕೊಳ್ಳುತ್ತಿದ್ದರು. ಇತರ ದೇವರ ಮೂರ್ತಿಗಳನ್ನು ಕಳ್ಳರ, ಅರಸರ ಭಯದಿಂದ ನೆಲದಲ್ಲಿ ಹೂಳುತ್ತಿದ್ದರು. ಹೀಗೆ ವಿಕಾರಕ್ಕೊಳಗಾಗುವ ದೇವರನ್ನು ನಂಬುವುದು ಹೇಗೆ? ಆದ್ದರಿಂದ ವಿಕಾರಕ್ಕೆ ಒಳಗಾಗದ ದೇವರನ್ನೇ ನಂಬಿ ಆರಾಧಿಸಬೇಕು, ನೆನೆಯಬೇಕು. ಅದೇ ಏಕೈಕ ದೇವರಲ್ಲಿ ಭಕ್ತಿ ಮಾಡಿ ಮುಕ್ತಿಯನ್ನು ಪಡೆಯಬೇಕು. ಆಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ. ಎರಡೂ ಧರ್ಮಗಳಲ್ಲಿ (ಇಸ್ಲಾಂ ಮತ್ತು ಲಿಂಗಾಯತ) ಮೂರ್ತಿಪೂಜೆಯ ನಿರಾಕರಣೆ ಮತ್ತು ಏಕದೇವೋಪಾಸನೆ ಪ್ರತಿಪಾದನೆ ಚೆನ್ನಾಗಿ ಮೂಡಿಬಂದಿದೆ.

ಅಡಿಟಿಪ್ಪಣಿಗಳು

೧. ಭಾರತ ಸಂಸ್ಕೃತಿ ಸಾಮ್ರಾಜ್ಯ ಚರಿತ್ರೆ - ಶ್ರೀ ಪಿ. ಥೋಮಸ್ (ಇಂ) (ಕ) ಪಿ.ಎ. ಜೋಸೆಫ್ ಪು. ೧೮ "ಅವರು ಏಕದೇವ ವಿಶ್ವಾಸಿಗಳಾಗಿದ್ದರೆಂದು ಹೆಚ್ಚಿನ ಸಂಶೋಧಕರ ನಿರ್ಧಾರ."

೨. ದರ್ಶನ್-ದಿಗ್ದರ್ಶನ್ (ಹಿಂದಿ) ಒಂದು ದರ್ಶನ ನಿರೂಪಕ ಗ್ರಂಥ (ಅನು) ಕುಮಾರನ್ ನಾಯರ್, ಪು. ೫೪೨-೫೪೩

೩. ಮೆಸೆಪೊಟೇಮಿಯಾ ಚರಿತ್ರೆ, ಶ್ರೀಕೃಷ್ಣ ಚೈತನ್ಯ.

೪. ಋಗ್ವೇದ ಮ. ೧೦, ಶ್ಲೋ. ೧೨೧, ಋ. ೧

೫. ಋಗ್ವೇದ ಮ. ೧೦, ಶ್ಲೋ. ೮೨, ಋ. ೩

೬. ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಪಿ.ವಿ. ನಾರಾಯಣ, ಪು.೪೮೩

೭. ಬಸವಣ್ಣನವರ ವಚನ ೫೫೬ (ಪು. ೨೨೩)

೮. 'ಕುರ್‌ಆನ್' -ಎಲ್ಲರೂ 'ಓದುವುದ'ಕ್ಕಾಗಿ ಇರುವ ದಿವ್ಯಗ್ರಂಥ.


೯. 'ಅಲ್ಲಾಹ್' ಎಂದರೆ ಅಖಿಲ ಲೋಕಗಳ ಸೃಷ್ಟಿಕರ್ತನೂ, ನಿಯಂತ್ರಕನೂ, ರಕ್ಷಕನೂ, ಪರಿಪಾಲಕನೂ, ಒಡೆಯನೂ, ಪ್ರಭುವೂ ಆಗಿರುವ ಏಕೈಕ ಶಕ್ತಿಯಾಗಿದೆ. ಅರಬಿ ಭಾಷೆಯ ಪ್ರಕಾರ ಮೂಲಾರ್ಥ 'ನೈಜ ಆರಾಧ್ಯ' ಎಂದಾಗಿದೆ.

"Shaivisim is the most anvient religion of the world... this religion of the Indus people, was lined proginotor of Hinduism. The deeper elements in Hindu thought and religion ware largety by contribution of the Dravidian speakers." **-Sir John Marshell**

ಜನಪದ ತ್ರಿಪದಿಗಳಲ್ಲಿ ಮುಕ್ತಾಯಕ್ಕ ಹಾಗೂ ಅಜಗಣ್ಣ

■ ಡಾ. ವಿಜಯಶ್ರೀ ಸಬರದ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ

ಜನಪದರಿಗೆ ಮುಕ್ತಾಯಕ್ಕ ಅಣ್ಣನ ಪ್ರೀತಿಗೆ, ತಾತ್ವಿಕ ವಿಚಾರಕ್ಕೆ ಸ್ಪಂದಿಸುವ ತಂಗಿಯಾಗಿ ಕಾಣುತ್ತಾಳೆ. ತತ್ವಕ್ಕೆ ಅಕ್ಕಳಾಗಿ, ಜ್ಞಾನಿಯಾಗಿ ಕಾಣುತ್ತಾಳೆ. ಅಜಗಣ್ಣ ಬಾಯಿ ಇದ್ದು ಮೌನ ವಾಗಿರುವ, ಇದು ಇಲ್ಲದ್ಹಾಂಗ ಇರುವ ಒಬ್ಬ ಶರಣನಾಗಿ ಕಾಣುತ್ತಾನೆ. ತಂಗಿಗೆ ಕಣ್ಣಾಗಿ ಜತನ ಮಾಡಿದ ಅಣ್ಣನಾಗಿ ಕಾಣುತ್ತಾನೆ. ಅಲ್ಲಮಪ್ರಭು ಅಂತಃಕರಣವುಳ್ಳವನಾಗಿ, ಲೋಕದ ಉದ್ಧಾರಕನಾಗಿ ಕಂಡರೆ ಬಸವಣ್ಣನು ದೇವಸ್ವರೂಪಿಯಾಗಿ ಕಾಣುತ್ತಾನೆ. ಜನಪದರು ಅಜಗಣ್ಣ, ಮುಕ್ತಾಯಕ್ಕ, ಅಲ್ಲಮಪ್ರಭು, ಬಸವಣ್ಣ ಅವರ ವ್ಯಕ್ತಿತ್ವದ ಮಹತ್ವವನ್ನು ತ್ರಿಪದಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ.



ಹನ್ನೆರಡನೆಯ ಶತಮಾನದ ವಚನಕಾರ್ತಿ ಮುಕ್ತಾಯಕ್ಕ ಒಬ್ಬ ಅನುಭಾವಿ, ಜ್ಞಾನಿಯೆಂಬುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದದ್ದು ಅವಳು ಅಜಗಣ್ಣನ ತಂಗಿಯೆಂಬುವುದು. ರಕ್ತಸಂಬಂಧದ ನೆಲೆಯಲ್ಲಿದ್ದ ಇವರ ಅಣ್ಣ-ತಂಗಿಯ ಸಂಬಂಧವು ಮುಂದೆ ಗುರು-ಶಿಷ್ಯ ಸಂಬಂಧಕ್ಕೆ ಬೆಳೆದು ನಿಲ್ಲುತ್ತದೆ. ಮುಕ್ತಾಯಕ್ಕ ತನ್ನ ವಚನಗಳಲ್ಲಿ ಅಜಗಣ್ಣನ ಅಗಲುವಿಕೆಯ ನೋವನ್ನು ವ್ಯಕ್ತಪಡಿಸಿದ್ದಾಳೆ. ಅರಿವು, ಜ್ಞಾನದ ಬಗೆಗೆ

ಅಲ್ಲಮಪ್ರಭುವಿನೊಂದಿಗೆ ತರ್ಕಬದ್ಧವಾಗಿ ಚರ್ಚೆ ಮಾಡಿದ್ದಾಳೆ. ಅಜಗಣ್ಣ ಮುಕ್ತಾಯಕ್ಕನಿಗೆ ಪ್ರೀತಿಯ ಅಣ್ಣನಾಗುವುದರೊಂದಿಗೆ ವಾತ್ಸಲ್ಯಮಯ ಗುರುವೂ ಆಗಿದ್ದನು. ಈ ರೀತಿಯ ಅಣ್ಣ-ತಂಗಿಯರ ಸಂಬಂಧಗಳು ಅಪರೂಪವೆಂದು ಹೇಳಬಹುದು. ಅಜಗಣ್ಣ ತೀರಿಕೊಂಡಾಗ ಮುಕ್ತಾಯಕ್ಕ ದುಃಖಿತಳಾಗಿ ಪ್ರಲಾಪಿಸುತ್ತಾಳೆ. ಆ ಸಂದರ್ಭದಲ್ಲಿ ಮುಕ್ತಾಯಕ್ಕ ಒಬ್ಬ ಸಾಮಾನ್ಯ ಸ್ತ್ರೀಯಂತೆ ಕಾಣುತ್ತಾಳೆ. ಆದರೆ ಮಹಾಜ್ಞಾನಿ ಅಲ್ಲಮಪ್ರಭುವಿನೊಂದಿಗೆ ಅನುಭಾವಿಕ ನೆಲೆಯಲ್ಲಿ ತಾತ್ವಿಕವಾಗಿ ಚರ್ಚೆ ಮಾಡುವಾಗ ಮೇಧಾವಿಯಂತೆ ಕಾಣುತ್ತಾಳೆ. ಹೀಗಾಗಿ ಮುಕ್ತಾಯಕ್ಕನ ನಿಲವು ಶಿವಶರಣೆಯರಲ್ಲೇ ವಿಶಿಷ್ಟವಾಗಿದೆ.

ಮುಕ್ತಾಯಕ್ಕ ಮತ್ತು ಅಜಗಣ್ಣನ ವ್ಯಕ್ತಿತ್ವದ ಮಹತ್ವವನ್ನು ಜನಪದರು ಮೂವತ್ತು ತ್ರಿಪದಿಗಳಲ್ಲಿ ಸರಳವಾಗಿ-ಆತ್ಮೀಯವಾಗಿ ವರ್ಣಿಸಿದ್ದಾರೆ. ಜನಪದರಿಗೆ ಮುಕ್ತಾಯಕ್ಕ ಶರಣೆಯಾಗಿ, ಮಹಾಜ್ಞಾನಿಯಾಗಿ; ಮುಕ್ತಿಗೆ ಪ್ರೇರಣಾಶಕ್ತಿಯಾಗಿ, ಅಂತಃಕರಣವುಳ್ಳ ಅಣ್ಣನ ತಂಗಿಯಾಗಿ ಕಾಣುತ್ತಾಳೆ. ತ್ರಿಪದಿಗಳಲ್ಲಿ ಮುಕ್ತಾಯಕ್ಕನ ಬಗೆಗೆ ಭಕ್ತಿ, ಗೌರವ, ಅನುಕಂಪದ ಭಾವವು ವ್ಯಕ್ತವಾಗಿದೆ. "ಮುಕ್ತಿಯಾ ಪಡಿಲಾಕ ಯಾರಿಗಿ ನೆನಿಬೇಕ ಮುಕ್ತಾಯಿ ಎಂಬ ಶರಣೆಗಿ । ನೆನದರ ಮುಕ್ತಿಯು ಆದ ಶಿವನಲಿ" ಎನ್ನುವಲ್ಲಿ ಮುಕ್ತಾಯಕ್ಕ ನಡೆದ ಮಾರ್ಗದಲ್ಲಿ ತಾವು ನಡೆದರೆ ತಮಗೆ ಶಿವನಲ್ಲಿ ಮುಕ್ತಿ ದೊರೆಯುತ್ತದೆ ಎಂದು ಜನಪದರು ನಂಬಿದ್ದಾರೆ.

> ಅಜಗಣ್ಣನ ತಂಗಿ ನೀ ಜಗದಾಗ ದೊಡ್ಡಕಿ
> ಸಜ್ಜಾದಿ ತತ್ವ ತಿಳಿಸಾಕ। ಮುಕ್ತಾಯಿ
> ವಜ್ಜ ಇಳಸೀದಿ ಅಣ್ಣಂದು॥
>
> ಅಜಗಣ್ಣನ ತಂಗ್ಯಾಗಿ ತತ್ವಕ ಅಕ್ಕಾಗಿ
> ಸೂಜಿ ನಿ ಆದಿ ಧರ್ಮಕ। ಮುಕ್ತಾಯಿ
> ಹಿಂಜಿ ಹಿಂಜಿ ಹೊಲಿದಿ ಎಲ್ಲವ॥

ಎಂದು ಜನಪದರು ಮುಕ್ತಾಯಕ್ಕನನ್ನು ವಿಶಿಷ್ಟವಾದ ರೀತಿಯಲ್ಲಿ ಪರಿಚಯಿಸಿದ್ದಾರೆ. ಮುಕ್ತಾಯಕ್ಕ ಅಜಗಣ್ಣನ ತಂಗಿ. ಅಷ್ಟೇ ಅಲ್ಲ ತತ್ವಕ್ಕೆ ಅಕ್ಕ ಆದವಳು, ಜಗತ್ತಿನಲ್ಲೇ ದೊಡ್ಡಾಕಿ ಎಂದು ಹೆಮ್ಮೆಯಿಂದ ಹೇಳಿದ್ದಾರೆ. 'ಸಜ್ಜಾದಿ ತತ್ವ ತಿಳಿಸಾಕ' ಎನ್ನುವ ವಿಚಾರ ಮತ್ತು 'ವಜ್ಜೆ ಇಳಿಸೀದಿ ಅಣ್ಣಂದು' ಎನ್ನುವ ಮಾತು ಅರ್ಥಪೂರ್ಣವಾಗಿದೆ. ಜನಪದರು ಮುಕ್ತಾಯಕ್ಕನ ಕರ್ತವ್ಯನಿಷ್ಠೆ, ಧರ್ಮನಿಷ್ಠೆಯನ್ನು ಸ್ಮರಿಸಿದ್ದಾರೆ. ತಂಗಿಯಾದವಳು ಅಣ್ಣನ ಭಾರವನ್ನು ಇಳಿಸುವುದರ ಮೂಲಕ ತಂಗಿಯ ಧರ್ಮವನ್ನು ಪಾಲಿಸುವ ಮುಕ್ತಾಯಕ್ಕನ ನಿಲವು ಜನಪದರಿಗೆ ಮುಖ್ಯವಾಗಿ ಕಂಡಿದೆ. ಅಜಗಣ್ಣನಂತೆ ತತ್ವನಿಷ್ಠಳಾಗಿ, ತತ್ವವನ್ನು ತಿಳಿಸುವ ಮಹತ್ವದ ಕೆಲಸವನ್ನು ಮಾಡುವುದರ ಮೂಲಕ 'ಅಣ್ಣನ ವಜ್ಜೆ' ಇಳಿಸುವ ಮುಕ್ತಾಯಕ್ಕ ಜನಪದರ ಗಮನವನ್ನು ಸೆಳೆದಿದ್ದಾಳೆ. 'ಸೂಜಿ ನೀ ಆದಿ ಧರ್ಮಕ। ಮುಕ್ತಾಯಿ ಹಿಂಜಿ ಹಿಂಜಿ ಹೊಲಿದಿ ಎಲ್ಲವ' ಎನ್ನುವಲ್ಲಿ

ಅಧರ್ಮದಿಂದ, ಭ್ರಷ್ಟತೆಯಿಂದ ಹರಿದು ತುಂಡಾದ ಸಮಾಜನ್ನು ಧರ್ಮವೆಂಬ ಸೂಜಿಯಿಂದ ಹೊಲಿಯುವ, ಸರಿಪಡಿಸುವ ಕೆಲಸವನ್ನು ಮಾಡಿರುವ ಮುಕ್ತಾಯಕ್ಕನ ಸಾಧನೆಯನ್ನು ಜನಪದರು ಕಾವ್ಯಾತ್ಮಕವಾಗಿ ಬಣ್ಣಿಸಿದ್ದಾರೆ.

ಅಜಗಣ್ಣನೆಂಬವ ಅವನೆಂತ ಶರಣನು
ಬಾಯಿದ್ದು ಮೌನ ಆಗ್ಯಾನ। ಅಜಗಣ್ಣ
ಅದರಾಗ ಶಿವನ ಕಂಡಾನ॥

ಶರಣರ ನಡಬರಕ ಶಿವನಾಗಿ ಹೊಳದಾನ
ಅರುಯಿಟ್ಟು ಹೆಜ್ಜೆ ಇಟ್ಟಾನ। ಅಜಗಣ್ಣ
ಕುರು ಹಿಡಿದು ಶಿವನ ಕಂಡಾನ॥

ಎಂದು ಅಜಗಣ್ಣನ ಅಧ್ಯಾತ್ಮಿಕ ನಿಲವನ್ನು ವೈಚಾರಿಕ ನೆಲೆಯಲ್ಲಿ ಗುರುತಿಸಿ ಹೇಳುವ ಜನಪದರ ಶೈಲಿ ಗಮನಾರ್ಹವಾಗಿದೆ. ಅಜಗಣ್ಣನ ಶರಣತ್ವವನ್ನು ಕಂಡು, ಅವನೆಂತಹ ಶರಣನೆಂದು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ. ಬಾಯಿದ್ದು ಮೌನವಾಗಿರುವುದು, ಮೌನದಲ್ಲೇ ಶಿವನನ್ನು ಕಾಣುವುದು ಅಜಗಣ್ಣನಂತಹ ಶರಣರಿಗೆ ಮಾತ್ರ ಸಾಧ್ಯ. ಬಾಯಿದ್ದು ಮೌನವಾಗಿರುವುದೆಂದರೆ ಧ್ಯಾನಸ್ಥ ಸ್ಥಿತಿಯಲ್ಲಿರುವುದೆಂದರ್ಥ. ಬದುಕಿನ ಆಗುಹೋಗುಗಳನ್ನು ಧ್ಯಾನಸ್ಥ ಸ್ಥಿತಿಯಿಂದ ಗ್ರಹಿಸಿ ಸಂಯಮದಿಂದ ಬದುಕುವುದೆಂದರ್ಥ. ಅಜಗಣ್ಣನು ಗುಪ್ತ ಭಕ್ತನು. ಬದುಕಿನಲ್ಲಿ ಎಚ್ಚರದಿಂದ ಹೆಜ್ಜೆ ಇಟ್ಟು ಕುರುಹು ಹಿಡಿದು ಶಿವನನ್ನು ಕಂಡ ಅಜಗಣ್ಣನು ತಾನೇ ಶಿವನಾಗುವ ವಿಚಾರ ಮಹತ್ವದ್ದಾಗಿದೆ. "ಶರಣರ ನಡಬರಕ ಶಿವನಾಗಿ ಹೊಳದಾನ" ಎಂದು ಜನಪದರು ಅಜಗಣ್ಣನ ಹಿರಿಮೆಯನ್ನು ಕೊಂಡಾಡಿದ್ದಾರೆ.

ಭಕ್ತಿಭಂಡಾರಿ ಬಸವಣ್ಣನು ತನ್ನ ಸಮಕಾಲೀನ ಶರಣ-ಶರಣೆಯರಿಗೆ ಪೂಜ್ಯ ವ್ಯಕ್ತಿಯಾಗಿದ್ದನು. ಬಸವಣ್ಣ ಶರಣರಿಗೆ ಉಸಿರಾಗಿದ್ದನು, ದೇವರಾಗಿದ್ದನು, ಗುರು ಆಗಿದ್ದನು. ಬಸವಣ್ಣನೆಂದರೆ ಶರಣರು, ಶರಣರೆಂದರೆ ಬಸವಣ್ಣನು ಎನ್ನುವಷ್ಟರಮಟ್ಟಿಗೆ ಅವರ ಸಂಬಂಧ ಅನ್ಯೋನ್ಯವಾಗಿತ್ತು. ಬಸವಣ್ಣನೊಂದಿಗೆ ಮುಕ್ತಾಯಕ್ಕ-ಅಜಗಣ್ಣರ ಸಂಬಂಧ ಹೇಗಿತ್ತೆಂಬುದನ್ನು ಜನಪದರು ತ್ರಿಪದಿಗಳಲ್ಲಿ ನಿರೂಪಿಸಿದ್ದಾರೆ. ಅಜಗಣ್ಣನು ಜೋಡೆತ್ತಿನ ಬಂಡಿಯನ್ನು ಕಟ್ಟಿ ಅದರಲ್ಲಿ ತಂಗಿಯನ್ನು ಕರೆದುಕೊಂಡು ಕಲ್ಯಾಣಕ್ಕೆ ಹೋಗುತ್ತಾನೆ. ಶರಣರ ಬಳಗವನ್ನು ತೋರಿಸುತ್ತಾನೆ. ಬಸವಣ್ಣನ ಮನೆಗೆ ಕರೆದುಕೊಂಡು ಹೋಗುತ್ತಾನೆ.

ತ್ರಿಪುರಾಂತ ಕೆರಿಚಂದ ಬಸವನ ಮನಿ ಮುಂದ
ಜೋಡೆತ್ತಿನ ಕೊಳ್ಳ ಬಿಟ್ಟಾನ। ಅಜಗಣ್ಣ
ಆ ಮನಿಗಿ ಬಾಗಿ ನಮಿಸ್ಯಾನ॥

ಜನಪದರಿಗೆ ಬಸವಣ್ಣನ ಮನೆಯೆಂದರೆ ದೇವಸ್ಥಾನವಾಗಿತ್ತು. ಆ ಮನೆಯಲ್ಲಿರುವ ಬಸವಣ್ಣನು ದೇವರಾಗಿದ್ದನು. ದೇವರಿದ್ದ ಮನೆಗೆ ಅಜಗಣ್ಣನು ಬಾಗಿ ನಮಿಸುತ್ತಾನೆ ಎಂದು ಜನಪದರು ತಿಳಿಸುವುದರಲ್ಲಿ ಅತಿಶಯೋಕ್ತಿಯಿಲ್ಲ. ಏಕೆಂದರೆ ಶರಣರಿಗೆ

ದೇವಮಾನವನಾದ ಬಸವಣ್ಣನಿದ್ದ ಕ್ಷೇತ್ರವು ಪುಣ್ಯಕ್ಷೇತ್ರವಾಗಿತ್ತು. ಬಸವಣ್ಣನಿದ್ದ ಮನೆ ದೇಗುಲವಾಗಿತ್ತು. ಅಜಗಣ್ಣನು ದೇಗುಲದಂತೆಯಿದ್ದ ಬಸವಣ್ಣನ ಮನೆಯೊಳಗೆ ತಂಗಿಯನ್ನು ಕೈ ಹಿಡಿದು ಕರೆದುಕೊಂಡು ಹೋಗುತ್ತಾನೆ "ಲಿಂಗದಾ ಬಸವನ ತೋರ್‍ಯಾನ" ಎನ್ನುವಲ್ಲಿ ಬಸವಣ್ಣನನ್ನು ಪರಿಚಯಿಸುವ ರೀತಿ ಅರ್ಥಪೂರ್ಣವಾಗಿದೆ. ಬಸವಣ್ಣನೆಂದರೆ ಸಾಮಾನ್ಯನಲ್ಲ ಆತನು ಲಿಂಗಮಯನಾದ ಬಸವಣ್ಣನೆಂದು ಭಾವಿಸಿದ್ದಾರೆ. ಬಸವಣ್ಣನ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ಇನ್ನೊಂದು ಮಹತ್ವದ ಮಾತು ಹೀಗಿದೆ- "ಅಜಗಣ್ಣ ಸಂಗಗ ಅವನೊಳು ಕಂಡಾನ" ಎನ್ನುವಲ್ಲಿ ಅಜಗಣ್ಣನು ಕೂಡಲಸಂಗಮದೇವರನ್ನು ಬಸವಣ್ಣನಲ್ಲಿ ಕಂಡನೆಂದರ್ಥ. ಜನಪದರಿಗೆ ಬಸವಣ್ಣ ಕೂಡಲಸಂಗಮದೇವರಿಗಿಂತಲೂ ದೊಡ್ಡವನಾಗಿ ಕಾಣುತ್ತಾನೆ.

ಬಸವನ ಒಳಗ ಅಜಗಣ್ಣಗ ಕಂಡಾಳ
ಭಕುತಿಲಿ ಬಾಗಿ ನಮಿಸ್ಯಾಳ। ಮುಕ್ತಾಯಿ
ಸಾಕು ತಂಗ್ಯಾಗಿ ಬೆಳದಾಳ।।

ಎನ್ನುವಲ್ಲಿ ಮುಕ್ತಾಯಕ್ಕನಿಗೆ ಬಸವಣ್ಣ ಮತ್ತು ಅಜಗಣ್ಣ ಬೇರೆಯಾಗಿ ಕಾಣದೆ ಅವರಿಬ್ಬರೂ ಒಂದಾಗಿ ಕಾಣುತ್ತಾರೆ. ಆದುದರಿಂದ ಮುಕ್ತಾಯಕ್ಕ ಅಜಗಣ್ಣನನ್ನು ಬಸವಣ್ಣನೊಳಗೆ ಕಂಡು ಭಕ್ತಿಭಾವದಿಂದ ಬಸವಣ್ಣನಿಗೆ ನಮಸ್ಕರಿಸುತ್ತಾಳೆ. ಕೂಡಲ ಸಂಗಮದೇವ ಮತ್ತು ಬಸವಣ್ಣ ಇವರಿಬ್ಬರೂ ಒಂದೇ ಎಂದು ಅಜಗಣ್ಣನು ಭಾವಿಸುವಂತೆ ಮುಕ್ತಾಯಕ್ಕನು ಅಜಗಣ್ಣ ಮತ್ತು ಬಸವಣ್ಣ ಇವರಿಬ್ಬರು ಒಂದೇ ಎಂದು ಭಾವಿಸಿದ್ದಾಳೆ. ಒಟ್ಟಿನಲ್ಲಿ ಜನಪದರು ಬಸವಣ್ಣನ ವ್ಯಕ್ತಿತ್ವದ ವಿಶಿಷ್ಟತೆಯನ್ನು ಗುರುತಿಸಿದ ರೀತಿ ಗಮನಾರ್ಹವಾಗಿದೆ. ಮುಕ್ತಾಯಕ್ಕ ಅಜಗಣ್ಣನ ಒಡಹುಟ್ಟಿದ ತಂಗಿ ಅಷ್ಟೇ ಅಲ್ಲ ಅವಳು 'ಸಾಕು ತಂಗಿಯಾಗಿ ಬೆಳದಾಳ' ಎಂದು ಜನಪದರು ಹೇಳುವ ಮಾತು ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ್ದಾಗಿದೆ. ಅಜಗಣ್ಣನು ನಿಧನಗೊಂಡ ನಂತರ ಮುಕ್ತಾಯಕ್ಕ ಶರಣರ ಒಡನಾಟದಲ್ಲಿ ಬೆಳೆದಿರಬೇಕು. ಆದುದರಿಂದ ಜನಪದರು 'ಸಾಕು ತಂಗಿಯಾಗಿ ಬೆಳದಾಳೆ'ಂದು ಹೇಳಿರಬಹುದು. ಅಥವಾ ಶರಣ ಸಂಸ್ಕೃತಿಗೆ ಅನುಗುಣವಾಗಿ ಮುಕ್ತಾಯಕ್ಕ ಅಜಗಣ್ಣನಿಗೆ ಮಾತ್ರ ತಂಗಿಯಾಗಿರದೆ ಶರಣರೆಲ್ಲರಿಗೂ ತಂಗಿಯಾಗಿ ಬೆಳೆದಿರಬೇಕು. ಒಡಹುಟ್ಟಿದವರಿಗೆ ಮಾತ್ರ ಅಣ್ಣ ಅಥವಾ ತಂಗಿಯಾಗಿರದೆ ಮಾನವ ಜನಾಂಗಕ್ಕೆ ಅಣ್ಣ ಅಥವಾ ತಂಗಿಯಾಗಿ ಬೆಳೆಯಬೇಕೆಂಬುದೇ ಶರಣ ಸಂಸ್ಕೃತಿಯ ಆಶಯವಾಗಿದೆ. ಒಡಹುಟ್ಟಿದವರಲ್ಲದವರು ಪರಸ್ಪರ ಅಣ್ಣ-ತಂಗಿಯಂತೆ ಬದುಕಬೇಕೆಂಬುದು ಜನಪದರ ವಿಚಾರವಾಗಿದೆ. ಆದುದರಿಂದ ಜನಪದರು ತಮ್ಮ ವಿಚಾರಕ್ಕೆ ಅನುಗುಣವಾಗಿ ಅಥವಾ ಶರಣ ಸಂಸ್ಕೃತಿಯಿಂದ ಪ್ರಭಾವಿತರಾಗಿ ಮುಕ್ತಾಯ್ಕಕನ ಚರಿತ್ರೆಗೆ ಸಂಬಂಧಿಸಿದಂತೆ 'ಸಾಕು ತಂಗ್ಯಾಗಿ ಬೆಳದಾಳ' ಎಂದು ಹೇಳಿದ್ದಾರೆ.

ಆಕಳ ಬಿಟಕೊಂಡ ಹೊಲಕ ತಾ ಬರತಾಳ
ಮೂಕಾಗಿ ಆಕಳ ಕಾಯ್ದಾಳ। ಮುಕ್ತಾಯಿ
ಮುಕ್ಕಣ್ಣನ ಧ್ಯಾನ ಮಾಡ್ಯಾಳ।।

ಎಂದು ಹೇಳುವಲ್ಲಿ ಮುಕ್ತಾಯಕ್ಕನ ಕಾಯಕದ ಪರಿಚಯವಿದೆ. ಮುಕ್ತಾಯಕ್ಕ ಆಕಳ ಕಾಯುವ ಕೆಲಸವನ್ನು ಮೂಕಾಗಿ ಮಾಡುತ್ತಿದ್ದಳು. ಅಂದರೆ ಎರಡು ಮಾತಿಲ್ಲದೆ ತನಗೆ ಕೊಟ್ಟ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದಳೆಂದರ್ಥ. ಆಕಳ ಕಾಯುವ ಕೆಲಸದೊಂದಿಗೆ ಶಿವಧ್ಯಾನವನ್ನು ಮಾಡುತ್ತಿದ್ದಳು. ಇಂತಹ ಮುಕ್ತಾಯಕ್ಕನಿಗೆ ಅಜಗಣ್ಣನೇ ತಂದೆ-ತಾಯಿಯಾಗಿದ್ದನು. "ಕಣ್ಣಾಗಿ ಜತನ ಮಾಡ್ಯಾನ। ಅಜಗಣ್ಣ ಅನುಭವ ಕೊಟ್ಟಾನ ಗುರುವಾಗಿ" ಎನ್ನುವಲ್ಲಿ ಅಣ್ಣ-ತಂಗಿಯ ಸಂಬಂಧದ ವೈಶಿಷ್ಟ್ಯವನ್ನು ಜನಪದರು ಎತ್ತಿಹೇಳಿದ್ದಾರೆ. ಅಜಗಣ್ಣನು ತನ್ನ ತಂಗಿಯನ್ನು ಒಂದು ಹೆಣ್ಣು ಮಗು ಎಂದು ಭಾವಿಸದೆ ತನ್ನ ಕಣ್ಣಿನ ಬೆಳಕೆಂದು ಭಾವಿಸಿ ಜೋಪಾನವಾಗಿ ಅವಳನ್ನು ಬೆಳೆಸಿದನು. ತನ್ನ ಅನುಭವವನ್ನೇ ತಂಗಿಗೆ ಧಾರೆಯೆರೆದು ಅವಳಿಗೆ ಗುರುವಾದನು. ಹೀಗಾಗಿ ಅಜಗಣ್ಣ ತನ್ನ ತಂಗಿ ಮುಕ್ತಾಯಕ್ಕನನ್ನು ಬೆಳೆಸಿದ ರೀತಿ ಲೋಕದ ಅಣ್ಣಂದಿರರಿಗಿಂತಲೂ ಭಿನ್ನವಾಗಿದೆ ಮತ್ತು ವಿಚಾರಾರ್ಹವಾಗಿದೆ. ಲೋಕದ ಅಣ್ಣಂದಿರರು ತಮ್ಮ ತಂಗಿಗೆ ಸೀರೆ, ಕುಬಸ, ಬಳೆ, ಆಭರಣವನ್ನು ನೀಡಿ ಜವಾಬ್ದಾರಿಯಿಂದ ಮುಕ್ತರಾಗುವರು. ತನ್ನಂತೆ ತಂಗಿಯೂ ತನ್ನ ಎತ್ತರಕ್ಕೆ ಬೆಳೆಯಬೇಕೆಂದು ಕನಸಿನಲ್ಲಿಯೂ ಬಯಸುವುದಿಲ್ಲ. ತಂಗಿಯಾದವಳು ಅಣ್ಣನ ಆಶ್ರಯ ಬಯಸುವುದು, ಅವನು ನೀಡಿದ ವಸ್ತುಗಳನ್ನು ಸ್ವೀಕರಿಸಿ ಧನ್ಯತಾಭಾವದಲ್ಲಿ ತೃಪ್ತಿ ಹೊಂದುವುದು. ಈ ರೀತಿಯ ಬದುಕಿಗೆ ಪುರುಷ ಪ್ರಧಾನ ಸಂಸ್ಕೃತಿಯೇ ಕಾರಣ. ಆದರೆ ಅಣ್ಣ-ತಂಗಿಯ ಸಂಬಂಧದ ಸಾಂಪ್ರದಾಯಿಕ ಪರಿಕಲ್ಪನೆಗಿಂತಲೂ ಭಿನ್ನವಾದ ಸಮಸಂಸ್ಕೃತಿಯ ಪರಿಕಲ್ಪನೆಯನ್ನು ಅಜಗಣ್ಣ ಮತ್ತು ಮುಕ್ತಾಯಕ್ಕನ ಸಂಬಂಧದಲ್ಲಿ ಕಾಣಬಹುದು. ಭೌತಿಕ, ಭಾವನಾತ್ಮಕ ನೆಲೆಗೆ ಮಾತ್ರ ಸೀಮಿತಗೊಂಡ ಅಣ್ಣ-ತಂಗಿಯ ಸಂಬಂಧವನ್ನು ಬೌದ್ಧಿಕ, ಭಾವನಾತ್ಮಕ ಸಮಾನಾಂತರ ನೆಲೆಗೆ ವಿಸ್ತರಿಸಲು ಸಾಧ್ಯವಾದದ್ದು ಶರಣ ಸಂಸ್ಕೃತಿಯಲ್ಲಿ. ಇಂತಹ ಪರಿವರ್ತನೆಗೆ ಬಸವ ಸಂಸ್ಕೃತಿಯೇ ಕಾರಣ.

ಅಜಗಣ್ಣನು ಮುಕ್ತಾಯಕ್ಕನಿಗೆ ತಂದೆ - ತಾಯಿ - ಗುರುವಾಗಿ ಪ್ರೀತಿಯಿಂದ ಬೆಳೆಸಿದನು. ತನ್ನ ಪ್ರೀತಿಯ ತಂಗಿಗೆ ಮದುವೆ ಮಾಡಿದನು.

ಮಾಸಾಳ ಊರಾಗ ಶಿವಭಕ್ತರ ಮನಿಯಾಗ
ಖುಸಿಯಾಗಿ ತಂಗಿಗಿ ಕೊಟ್ಟಾನ। ಮುಕ್ತಾಯಿ
ಹಸನಾಗಿ ಬದುಕ ಮಾಡ್ಯಾಳ॥

ಎಂದು ತಿಳಿಸುವುದರೊಂದಿಗೆ ಮುಕ್ತಾಯಕ್ಕನನ್ನು ಗಂಡನ ಮನೆಗೆ ಕಳುಹಿಸಿಕೊಡುವ ಸಂದರ್ಭ ಹಾಗೂ ಮುಕ್ತಾಯಕ್ಕ ಗಂಡನ ಮನೆಯಲ್ಲಿ ಸಂಸಾರ ಮಾಡಿದ ಸಂಗತಿಯನ್ನು ಜನಪದರು ಈ ಕೆಳಗಿನ ತ್ರಿಪದಿಗಳಲ್ಲಿ ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ತಟ್ಟುವಂತೆ ವರ್ಣಿಸಿದ್ದಾರೆ.

ಇಟ್ಟಾಂಗ ಇರು ತಂಗಿ ಕೊಟ್ಟಾಗ ಉಣತಂಗಿ
ಬಿಟ್ಟು ನೀ ಇರಬ್ಯಾಡ ಶಿವಲಿಂಗ। ಮುಕ್ತಾಯಿ
ಸಿಟ್ಟಾಗಿ ಯಾರಿಗಿ ಬಯಬ್ಯಾಡ॥

ತಂಗಿಗಿ ಖಳುವ್ಯಾನ ದುಃಖ ತಾ ಪಡುತಾನ
ಅಂಗಿಲಿ ಕಣ್ಣ ಒರಸ್ಯಾನ। ಅವರಣ್ಣ
ಮುಗಿಲಿಗಿ ಕೈಯ ಮುಗದ್ಯಾನ॥

ಅಜಗಣ್ಣನು ದೇವರ ಮೇಲೆ ವಿಶ್ವಾಸವಿಟ್ಟು ತಂಗಿಗೆ ಬುದ್ಧಿ ಮಾತು ಹೇಳಿ ಗಂಡನ ಮನೆಗೆ ಕಳುಹಿಸಿಕೊಡುತ್ತಾನೆ. ತಂಗಿಯಾದವಳು ಅಣ್ಣನ ಹಿತವಚನಗಳನ್ನು ನೆನಪಿನಲ್ಲಿಟ್ಟು ಕೊಂಡು ಗಂಡನೊಂದಿಗೆ ಸಂಸಾರ ಮಾಡುತ್ತಾಳೆ ಎಂಬುದನ್ನು ಈ ಕೆಳಗಿನ ತ್ರಿಪದಿಗಳಿಂದ ತಿಳಿದುಕೊಳ್ಳಬಹುದು.

ಅತ್ತಿಯ ಮನಿಯಾಗ ಮುತ್ತಾಗಿ ಉಳದಾಳ
ಸುತ್ತೆಲ್ಲ ಶಿವಗುಣ ಬೀರ್‍ಯಾಳ। ಮುಕ್ತಾಯಿ
ಇದ್ದು ತಾ ಇಲ್ಲದ್ಹಾಂಗ ಬದುಕ್ಯಾಳ॥

ಕೊಟ್ಟಿದ್ದು ಉಂಡಾಳ ಬಿಟ್ಟದ್ದು ಮಾಡ್ಯಾಳ
ಸಿಟ್ಟ ತಾ ಮಾಡಿಲ್ಲ ಯಾರಿಗಿ। ಮುಕ್ತಾಯಿ
ಹುಟ್ಟಿಟ್ಮನಿಗಿ ಹೆಸರ ತಂದಾಳ॥

ಅಣ್ಣನ ನೆನಪರ ದಿನ ದಿನ ಕಾಡ್ಯಾದ
ಸಣ್ಣಾಗಿ ದುಃಖಪಡುತಾಳ। ಪತಿಗೂಡ
ಅಣ್ಣನ ಕಾಣಾಕ ಹೊಂಟಾಳ॥

ಮುಕ್ತಾಯಕ್ಕ ಅಣ್ಣನ ಇಚ್ಛೆಯಂತೆ ಕೊಟ್ಟ ಮನೆಗೆ, ಹುಟ್ಟಿದ ಮನೆಗೆ ಒಳ್ಳೆಯ ಹೆಸರು ತರುವಂತೆ ಬದುಕಿದಳು. 'ಇದ್ದು ತಾ ಇಲ್ಲದ್ಹಾಂಗ ಬದುಕ್ಯಾಳ ಸುತ್ತೆಲ್ಲ ಶಿವಗುಣ ಬೀರ್‍ಯಾಳ, ಬಿಟ್ಟಿದ್ದು ಮಾಡ್ಯಾಳ' ಎಂದು ಜನಪದರು ಮುಕ್ತಾಯಕ್ಕನಲ್ಲಿರುವ ಸ್ಥಿತಪ್ರಜ್ಞೆ, ಧರ್ಮಪ್ರಜ್ಞೆ, ಶಾಂತಸ್ವಭಾವ, ಕ್ರಿಯಾಭಾವವನ್ನು ಗುರುತಿಸಿದ್ದಾರೆ. ಸಂಸಾರದಲ್ಲಿ ಇದ್ದು ಇಲ್ಲದ ಹಾಗೆ ಬದುಕಬೇಕೆಂಬುದು ಒಳ್ಳೆಯ ವಿಚಾರ. ಆದರೆ ಎಲ್ಲರಿಗೂ ಬದುಕಲು ಸಾಧ್ಯವಿಲ್ಲ, ಮುಕ್ತಾಯಕ್ಕನಂತಹವರಿಗೆ ಮಾತ್ರ ಸಾಧ್ಯ. ಮುಕ್ತಾಯಕ್ಕ ಹತ್ತರೊಳಗೆ ಹನ್ನೊಂದಾಗಿ ಬದುಕದೆ ತನ್ನ ಅಸ್ತಿತ್ವಕ್ಕೆ ತಕ್ಕಂತೆ ವ್ಯಕ್ತಿತ್ವವನ್ನು ರೂಪಿಸಿಕೊಂಡ ಅನುಭಾವಿ.

ಮುಕ್ತಾಯಕ್ಕ ತನ್ನ ಅಣ್ಣನ ನೆನಪಾಗಿ ಗಂಡನೊಂದಿಗೆ ಅಜಗಣ್ಣನನ್ನು ಕಾಣಲು ಲಕ್ಕುಂಡಿಗೆ ಹೋಗುತ್ತಾಳೆ. ಆಗ ಅಜಗಣ್ಣನು ತಂಗಿಗೆ ಬುದ್ಧಿ ಮಾತು ಹೇಳಿ ಸಮಾಧಾನ ಪಡಿಸುತ್ತಾನೆ.

ತಂಗಿಯಾ ಒಳದುಃಖ ಅರತಾನ ಅಜಗಣ್ಣ
ತಂಗಿಗಿ ಬುದ್ಧಿ ಹೇಳ್ಯಾನ। ಮನೆ ಬಿಟ್ಟು
ಹಿಂಗ ನೀ ಬರಬೇಡ ಅನತಾನ॥

ಅಜಗಣ್ಣನಿಗೆ ತನ್ನ ತಂಗಿ ತನ್ನನ್ನು ಬಿಟ್ಟು ಇರುವುದು ಕಷ್ಟವೆಂಬುದು ಗೊತ್ತಿರುತ್ತದೆ. ಆದರೂ ಲೋಕರೂಢಿಯನ್ನು ಮೀರಲಾರದಂತಹ ಅಸಹಾಯಕತೆ ಅಜಗಣ್ಣನದಾಗಿರುತ್ತದೆ. ಆದುದರಿಂದ ತಂಗಿಗೆ 'ಮನೆ ಬಿಟ್ಟು ಹಿಂಗ ನೀ ಬರಬೇಡ' ಎನ್ನುತ್ತಾನೆ. ಆಗ ಮುಕ್ತಾಯಕ್ಕ ಅಣ್ಣನ ಮಾತಿಗೆ ಸಿಟ್ಟಾಗುವುದಿಲ್ಲ. ಅಣ್ಣನ ಮಾತಿನ ಪ್ರಕಾರ ನಡೆಯುತ್ತಾಳೆ.

ಪಾದಕ್ಕ ನಮಿಸ್ಯಾಳ ಹಿಂದಕ್ಕ ಹೊಂಟಾಳ
ಹಾದಿಯು ಹಿಡಿದು ಮಾಸಾಳ। ಮುಕ್ತಾಯಿ
ಸಾಧಿಸಿ ತೋರಿ ತನ ನಿಲುವ॥

ಎನ್ನುವಲ್ಲಿ ಮುಕ್ತಾಯಕ್ಕ ಬದುಕಿನಲ್ಲಿ ತನ್ನ ನಿಲುವನ್ನು ಸಾಧಿಸಿದ ಸಾಧಕಿ ಎಂಬುದನ್ನು ಜನಪದರು ತಿಳಿಸಿದ್ದಾರೆ. ಪರಸ್ಪರ ಪ್ರೀತಿ, ಗೌರವ, ಅಂತಃಕರಣ, ವಾತ್ಸಲ್ಯಭಾವದಿಂದ ಬದುಕುವುದು ಮುಕ್ತಾಯಕ್ಕನಿಗೆ ಮುಖ್ಯವಾಗಿ ಕಂಡಷ್ಟೇ ತಾನು ನಂಬಿದ ಮೌಲ್ಯಕ್ಕೆ, ಸಿದ್ಧಾಂತಕ್ಕೆ ಬದ್ಧವಾಗಿ ಬದುಕುವುದು ಅಷ್ಟೇ ಮುಖ್ಯವಾಗಿ ಕಂಡಿದೆ. ಮುಕ್ತಾಯಕ್ಕ ತನ್ನತನವನ್ನು ತಾತ್ವಿಕ ನೆಲೆಯಲ್ಲಿ ಕಂಡುಕೊಂಡಳೆಂಬುದು ಇಲ್ಲಿ ಗಮನಿಸಬೇಕಾದ ಮಹತ್ವದ ಸಂಗತಿಯಾಗಿದೆ.

ಅಜಗಣ್ಣನ ಸಾವಿನ ಸುದ್ದಿ ಮುಕ್ತಾಯಕ್ಕನಿಗೆ ಸಿಡಿಲು ಬಡಿದಂತಾಗುತ್ತದೆ. ಮುಕ್ತಾಯಕ್ಕನಿಗೆ ಆದ ಆಘಾತವನ್ನು ಜನಪದರು ಈ ಕೆಳಗಿನ ತ್ರಿಪದಿಗಳಲ್ಲಿ ಮನ ಮಿಡಿಯುವಂತೆ ಚಿತ್ರಿಸಿದ್ದಾರೆ.

ಕಡುಘೋರ ಸುದ್ದಿಯಾ ಬಂದಾದ ಒಂದಿನ
ಅಜಗಣ್ಣನ ದ್ಯಾಹ ಬಿಟ್ಟಾನ। ಮುಕ್ತಾಯಿ
ಕೇಳಿ ತಾ ನೆಲಕ ಬಿದ್ದಾಳ॥

ಬಂಡಿಯಾ ಕಟ್ಟ್ಯಾರ ಲಕ್ಕುಂಡಿಗ ಹೊಂಟಾರ
ಸಿಡಿಲಂತ ಸುದ್ದಿ
..................................॥

ಸಿಡಿಲಂತ ಸುದ್ದಿಗಿ ಗಡಗಡ ನಡುಗ್ಯಾರ
ಬಂಡಿಯಾ ಕಟಕೊಂಡು ಹೊಂಟಾರ। ಲಕ್ಕುಂಡಿ
ಕಂಡಾದ ಆಕಿಗಿ ಎರಡಾಗಿ॥

ಪಾದಕ ಬಿದ್ದಾಲ ಭೋರ್‍ಯಾಡಿ ಅಳತಾಳ
ಹಕ್ಕ್ಯಾಂಗ ಬಾಯ ಬಿಡತಾಳ। ಮುಕ್ತಾಯಿ
..................................॥

ಮುಕ್ತಾಯಿ ದುಃಖಕ ಕಲ್ಲೆಲ್ಲ ಕರಗ್ಯಾವ
ಬಿಕ್ಕಿ ಅಳುತಾರ ನಿಂತವರು।
..................................॥

ಅಜಗಣ್ಣ ತಂಗಿಯು ಪರದೇಶಿ ಆಗ್ಯಾಳ
ಅಂಬರಕ ಬಾಯಿ ಬಿಟ್ಟ್ಯಾಳ। ತಂಗಿಗಿ
ಯಾರು ಒರಸಲರು ಕಣ್ಣೀರು॥

ಎನ್ನುವಲ್ಲಿ ಜನಪದರು ಮುಕ್ತಾಯಕ್ಕನ ಪ್ರಲಾಪವನ್ನು ಮನಸ್ಸು ಕರಗುವಂತೆ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. 'ತಂಗಿಗಿ ಯಾರು ಒರಸಲರು ಕಣ್ಣೀರು' ಎಂದರೆ ದುಃಖಿತಳಾದ ಮುಕ್ತಾಯಕ್ಕನಿಗೆ ಸಮಾಧಾನಪಡಿಸವುದು ಯಾರಿಂದಲೂ ಸಾಧ್ಯವಾಗಲಿಲ್ಲವೆಂದರ್ಥ.

ಜನಪದರು ಅಲ್ಲಮಪ್ರಭುವನ್ನು ತಮ್ಮ ತ್ರಿಪದಿಗಳಲ್ಲಿ ಸ್ಮರಿಸಿದ್ದಾರೆ.

ಕಲ್ಯಾಣದ ಹಾದ್ಹಿಡಿದು ಹೊಂಟಾನ ಪ್ರಭುರಾಯ
ಕಲ್ಯಾಣ ಮಾಡಲು ಎಲ್ಲರಿಗಿ। ತಂಗಿಯಾ
ಒಳಧನಿ ಕರಸಾದ ಅವರಿಗಿ॥

ಎನ್ನುವಲ್ಲಿ ಅಲ್ಲಮನ ಪರಿಚಯವಿದೆ. ಜನರ ಕಲ್ಯಾಣವನ್ನು ಮಾಡಲು ದೇಶವನ್ನು ಸಂಚರಿಸುವ ಅಲ್ಲಮಪ್ರಭು ಮುಕ್ತಾಯಕ್ಕನನ್ನು ಕಾಣಲು ಲಕ್ಕುಂಡಿಗೆ ಹೋಗುತ್ತಾನೆ. ಇಲ್ಲಿ ಜನಪದರಿಗೆ ಅಲ್ಲಮಪ್ರಭು ಅಂತರ್ಯಾಮಿ ಎಂಬುದನ್ನು ತಿಳಿಸಬೇಕಾಗಿದೆ. ಆದುದರಿಂದ 'ತಂಗಿಯಾ ಒಳಧನಿ ಕರಸಾದ ಅವರಿಗಿ' ಎಂದು ಹೇಳುತ್ತಾರೆ.

ಯಾಕಳತಿ ನನ ತಂಗಿ ಯಾಕಳತಿ ನನ ತಾಯಿ
ಬಿಚ್ಚಿ ನೀ ಹೇಳ ವ್ಯಥೆಯ। ಪ್ರಭುರಾಯ
ಕೇಳ್ತಾನ ಅಳುವ ತಂಗಿಗಿ॥

ಎನ್ನುವಲ್ಲಿ ಅಲ್ಲಮಪ್ರಭು ಮುಕ್ತಾಯಕ್ಕನಿಗೆ ತಂಗಿ, ತಾಯಿ ಎಂದು ಸಂಬೋಧಿಸಿ ಮಾತನಾಡಿಸುವ ರೀತಿ ಆತ್ಮೀಯವಾಗಿದೆ. ಜನಪದರಿಗೆ ಅಲ್ಲಮಪ್ರಭು ವೈರಾಗ್ಯ ಮೂರ್ತಿಯಾಗಿ, ಅನುಭಾವಿಯಾಗಿ ಕಾಣಿಸದೆ ಪ್ರೀತಿ, ವಾತ್ಸಲ್ಯಮಯನಾದ ವ್ಯಕ್ತಿಯಾಗಿ ಕಾಣುತ್ತಾನೆ. 'ಬಿಚ್ಚಿ ನೀ ಹೇಳ ವ್ಯಥೆಯ' ಎಂದು ಅಲ್ಲಮಪ್ರಭು ಪ್ರೀತಿಯಿಂದ ದುಃಖಿಸುವ ಮುಕ್ತಾಯಕ್ಕನಿಗೆ ಕೇಳುತ್ತಾನೆ. ಆಗ ಮುಕ್ತಾಯಕ್ಕ "ಅಜಗಣ್ಣ ತಂಗಿ ನಾ ಮುಕ್ತಾಯಿ ಜ್ಞಾನವ ಕೊಟ್ಟ ಗುರುವಾಗಿ। ನನ ಬಿಟ್ಟು ಕೈಲಾಸ ಹಾದಿ ಹಿಡದಾನ॥" ಎಂದು ತನ್ನ ಹಾಗೂ ಅಜಗಣ್ಣನ ಸಂಬಂಧದ ಕುರಿತು ಹೇಳುತ್ತಾಳೆ. ಅಜಗಣ್ಣನ ಹಿರಿಮೆಯನ್ನು ಕೊಂಡಾಡುತ್ತಾಳೆ. ತಾವಿಬ್ಬರೂ ಒಂದು ಜೀವ ಎರಡು ದೇಹವೆಂದು ತಿಳಿಸುತ್ತಾಳೆ. ಅಜಗಣ್ಣನ ಬಗೆಗೆ ಮುಕ್ತಾಯಕ್ಕ ಹೇಳಿದ ವಿವರವನ್ನು ಕೇಳಿದ ಅಲ್ಲಮಪ್ರಭು ಹೇಗೆ ಪ್ರತಿಕ್ರಿಯಿಸಿದನೆಂದು ತಿಳಿಸುವ ತ್ರಿಪದಿಗಳು ಸಿಕ್ಕಿಲ್ಲ.

ಅಜಗಣ್ಣ ಮತ್ತು ಮುಕ್ತಾಯಕ್ಕನ ಚರಿತ್ರೆಗೆ ಸಂಬಂಧಿಸಿದಂತೆ ಜನಪದರು ಅಜಗಣ್ಣನ ಊರು 'ಲಕ್ಕುಂಡಿ', 'ಮುಕ್ತಾಯಕ್ಕನ ಗಂಡನೂರು' 'ಮಾಸಾಳ' ಎಂದು ತಿಳಿಸಿದ್ದಾರೆ. ಶೂನ್ಯಸಂಪಾದನೆ ಮತ್ತು ಉಳಿದ ಕಾವ್ಯ ಕೃತಿಗಳಲ್ಲಿ ಮುಕ್ತಾಯಕ್ಕನ ತವರೂರು 'ಲಕ್ಕುಂಡಿ' ಗಂಡನೂರು 'ಮೊಸಳೆಕಲ್ಲು' ಎಂದು ತಿಳಿಸುತ್ತವೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮೊಸರುಕಲ್ಲು, ಮುಕ್ತಾಯಿಯ ಗಂಡನೂರು ಎಂದು ಕೆಲವು ಸಂಶೋಧಕರು ಗುರುತಿಸಿದ್ದಾರೆ.

ಈಗ ದೊರಕಿರುವ ಮೂವತ್ತು ಜನಪದ ತ್ರಿಪದಿಗಳು ಮುಕ್ತಾಯಕ್ಕನ ಜೀವನ ಚರಿತ್ರೆಯನ್ನು ಕಟ್ಟಿಕೊಳ್ಳುವಲ್ಲಿ ಸಹಾಯಕವಾಗಿವೆ. ಇದುವರೆಗೆ ಪ್ರಕಟವಾಗಿರುವ ಲೇಖನಗಳು ಅಜಗಣ್ಣನ ಸಾವಿನ ಮೂಲಕವೇ ಪ್ರಾರಂಭವಾಗುತ್ತವೆ. ಶೂನ್ಯಸಂಪಾದನೆಗಳಲ್ಲಿಯೂ ಕೂಡ "ಅಂಗೈಯಲ್ಲೊಂದು ಅರಳೆಲೆ ಹಿಡಿದುಕೊಂಡು ಕಂಗಳ ಮುತ್ತು ಪೋಣಿಸುವಾಕೆ ನೀನಾರು ಹೇಳಾ" ಎಂಬ ಅಲ್ಲಮಪ್ರಭುವಿನ ಪ್ರಶ್ನೆಯೊಂದಿಗೆ ಮುಕ್ತಾಯಕ್ಕನ ಪ್ರಸಂಗ ಪ್ರಾರಂಭವಾಗುತ್ತದೆ. ಆದರೆ ಈ ತ್ರಿಪದಿಗಳಲ್ಲಿ ಜನಪದರು

ಅಜಗಣ್ಣನನ್ನು ಜೀವಂತವಾಗಿ ಕಂಡಿದ್ದಾರೆ. ಅಜಗಣ್ಣ ಸಡಗರದಿಂದ ತನ್ನ ತಂಗಿಯ ಮದುವೆ ಮಾಡುತ್ತಾನೆ. ಗಂಡನ ಮನೆಯಲ್ಲಿರಬೇಕೆಂದು ಹೇಳುತ್ತಾನೆ. ಮುಕ್ತಾಯಿಗೆ ತಾನೇ ತಾಯಿ-ತಂದೆಯಾಗಿ ಜೋಪಾನ ಮಾಡಿದ್ದಾನೆ. ಗುರುವಾಗಿ ಜ್ಞಾನ ಬೋಧಿಸಿದ್ದಾನೆ. ಜನಪದರು ಇಲ್ಲಿ ಮತ್ತೊಂದು ಹೊಸ ಪ್ರಸಂಗವನ್ನು ಕಟ್ಟಿಕೊಟ್ಟಿದ್ದಾರೆ. ಅಜಗಣ್ಣ ಬಂಡಿ ಕಟ್ಟಿಕೊಂಡು, ಜೋಡೆತ್ತು ಹೂಡಿಕೊಂಡು ಬಸವಣ್ಣನಿರುವ ಕಲ್ಯಾಣಕ್ಕೆ ತಂಗಿ ಮುಕ್ತಾಯಿಯೊಡನೆ ಬರುತ್ತಾನೆ. "ತ್ರಿಪುರಾಂತ ಕೆರಿ ಚಂದ ಬಸವನ ಮನಿ ಮುಂದ" ಎನ್ನುವ ನುಡಿಯಲ್ಲಿ ಬಸವಣ್ಣನ ಮನೆ ತ್ರಿಪುರಾಂತ ಕೆರಿಯ ಮುಂದೆ ಇದ್ದಿತ್ತೆಂದು ತಿಳಿದುಬರುತ್ತದೆ. ಗಂಡನ ಮನೆಯಲ್ಲಿ "ಇಟ್ಟಾಂಗ ಇರು ತಂಗಿ ಕೊಟ್ಟಾಂಗ ಉಣ ತಂಗಿ" ಎನ್ನುವ ಅಜಗಣ್ಣನ ಮಾತನ್ನು ಗಮನಿಸಿದಾಗ, ಮುಕ್ತಾಯಕ್ಕ ಗಂಡನ ಮನೆಯಲ್ಲಿ ತೊಂದರೆ ಅನುಭವಿಸುತ್ತಿದ್ದಿರಬೇಕೆಂದು ತಿಳಿಯುತ್ತದೆ. ಮುಂದಿನ ನುಡಿಯಲ್ಲಿ ಜನಪದರು ಹೀಗೆ ಹೇಳಿದ್ದಾರೆ "ತಂಗಿಗಿ ಖಿಳುವ್ಯಾನ। ದುಃಖ ತಾ ಪಡುತಾನ ಅಂಗಿಲಿ ಕಣ್ಣ ಒರಸ್ಯಾನ" ಈ ನುಡಿಯಲ್ಲಿ ತಂಗಿಯ ಕಷ್ಟವನ್ನು ಕಂಡು ತಾನೂ ದುಃಖಪಡುವ ಅಜಗಣ್ಣನ ಚಿತ್ರ ಕಣ್ಮುಂದೆ ಬಂದು ನಿಲ್ಲುತ್ತದೆ. 'ಅಂಗಿಲಿ ಕಣ್ಣ ಒರಸ್ಯಾನ' ಎನ್ನುವ ನುಡಿ ಅಂದಿನ ಸಂದರ್ಭ ಎಂತಹದಿರಬಹುದೆಂಬುದನ್ನು ಸೂಚಿಸುತ್ತದೆ. ಹೀಗೆ ಅಜಗಣ್ಣನ ವ್ಯಕ್ತಿತ್ವ ಈ ತ್ರಿಪದಿಗಳಲ್ಲಿ ಜೀವಂತವಾಗಿದೆ. ಮುಕ್ತಾಯಿ ಆಕಳು ಕಾಯುವ ಕಾಯಕ ಮಾಡುತ್ತಿದ್ದಳೆಂದು ಈ ತ್ರಿಪದಿಗಳಿಂದ ಸ್ಪಷ್ಟವಾಗುತ್ತದೆ. ಶೂನ್ಯಸಂಪಾದನೆಯಲ್ಲಿ ಕಾಣಿಸಿಕೊಳ್ಳುವ ಅಲ್ಲಮಪ್ರಭುವಿಗೂ ಇಲ್ಲಿಯ ಅಲ್ಲಮಪ್ರಭುವಿಗೂ ತುಂಬಾ ವ್ಯತ್ಯಾಸವಿದೆ. ಅಜಗಣ್ಣ ತೀರಿಕೊಂಡ ನಂತರ ಅಲ್ಲಮಪ್ರಭು ಮುಕ್ತಾಯಕ್ಕನನ್ನು ಸಂತೈಸುತ್ತಾನೆ. ಆಧ್ಯಾತ್ಮದ ದಾರಿ ತೋರಿಸುತ್ತಾನೆ. ಆಗ ಮುಕ್ತಾಯಿ ಮೊಸರಕಲ್ಲಿಗೆ ಹೋಗದೆ ಕಲ್ಯಾಣದ ಹಾದಿ ಹಿಡಿಯುತ್ತಾಳೆ. ಈ ತ್ರಿಪದಿಗಳಲ್ಲಿ ವ್ಯಕ್ತವಾಗಿರುವಂತೆ ಕಲ್ಯಾಣದಲ್ಲಿ ಎಲ್ಲ ಶರಣರೂ ಈಕೆಯನ್ನು ತಂಗಿಯೆಂದೇ ಭಾವಿಸುತ್ತಾರೆ. ಆಕೆ ಶರಣರಿಗೆ ಸಾಕು ತಂಗಿಯಾಗಿದ್ದಳೆಂಬುದನ್ನು ಜನಪದರು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

ಹೀಗೆ ಶರಣರ ಚರಿತ್ರೆಯನ್ನು ಕಟ್ಟಿಕೊಳ್ಳುವಲ್ಲಿ ಜನಪದ ಕಾವ್ಯಗಳು ಮಹತ್ವದ ದಾಖಲೆಗಳಾಗಿವೆ. ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಈ ಹಾಡುಗಳು ಅನೇಕ ಸೂಕ್ಷ್ಮ ಸಂಗತಿಗಳನ್ನು ತಮ್ಮೊಡಲೊಳಗೆ ಇಟ್ಟುಕೊಂಡಿವೆ. ಇಂತಹ ಆಕರಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಾಗ ಶರಣರ ಚರಿತ್ರೆ ಸ್ಪಷ್ಟವಾಗಲು ಸಾಧ್ಯವಿದೆ. ಅಂತಹ ಕೆಲವು ಹೊಳಹುಗಳು ಈ ತ್ರಿಪದಿಗಳಿಂದ ಪ್ರಕಟವಾಗುತ್ತವೆ. ಆಧುನಿಕ ಬದುಕಿನಲ್ಲಿ ಅಣ್ಣ-ತಂಗಿಯರಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ, ಗೌರವ ಕಡಿಮೆಯಾದಂತಹ ಸಂದರ್ಭದಲ್ಲಿ ನಿಸ್ವಾರ್ಥಭಾವದಿಂದ ಪರಸ್ಪರ ಪ್ರೀತಿ, ವಿಶ್ವಾಸ, ಗೌರವದಿಂದ ಬದುಕಿದ ಅಜಗಣ್ಣ-ಮುಕ್ತಾಯಕ್ಕನಂತಹ ಅಣ್ಣ-ತಂಗಿಯ ಸಂಬಂಧ ಇಂದಿಗೂ ಪ್ರಸ್ತುತವಾಗಿದೆ ಮತ್ತು ಆದರ್ಶಪ್ರಾಯವಾಗಿದೆ. ■

---


* ಇಲ್ಲಿ ಉಲ್ಲೇಖಿಸಿರುವ ಮೂವತ್ತು ತ್ರಿಪದಿಗಳನ್ನು ಡಾ. ನೀಲಾಂಬಿಕಾ ಶೆರಿಕಾರ, ಗುಲಬರ್ಗಾ ಇವರ ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ.

ಪುಸ್ತಕ ಪರಿಚಯ

■ ಶಿವಕುಮಾರ ಪಾವಟೆ

ಇಂಗ್ಲಿಷ್ ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು
ನಾಗಸಂದ್ರ-೫೭೨೧೩೪, ಕುಣಿಗಲ್ ತಾ., ತುಮಕೂರು ಜಿ.

ವೈದ್ಯ ಸದಾಶಿವ ಸ.ಜ. ನಾಗಲೋಟಿಮಠ*



ಅಪರೂಪದ ವ್ಯಕ್ತಿ, ವೈದ್ಯ ಹಾಗೂ ವಿಜ್ಞಾನಿಯಾಗಿದ್ದ ಡಾ. ನಾಗಲೋಟಿಮಠ ಅವರದೊಂದು ನಿರಂತರವಾದ ಸಾಧಕನ ಜೀವನ. ಜೀವನದುದ್ದಕ್ಕೂ ಸ್ಥಿತಪ್ರಜ್ಞೆಯನ್ನು ಮೆರೆದ ನಿಷ್ಕಾಮಕರ್ಮಿ. ಲೇಖಕರಾದ ಶ್ರೀ ಜಯವಂತ ಕಾಡದೇವರವರು ನಾಗಲೋಟಿಮಠ ಅವರ ಸಮಗ್ರ ಜೀವನ ಚರಿತ್ರೆಯನ್ನು ಇದರಲ್ಲಿ ದಾಖಲಿಸಿದ್ದಾರೆ.

ಪ್ರಸ್ತುತ ಕೃತಿಯ ನಾಯಕ ಮತ್ತು ಲೇಖಕರು ಸಮಕಾಲೀನರಾಗಿದ್ದು ಡಾ. ನಾಗಲೋಟಿಮಠ ಅವರ ವ್ಯಕ್ತಿಚಿತ್ರಣಕ್ಕೆ ಸಮಗ್ರತೆ ಮತ್ತು ನಿಖರತೆಯನ್ನು ಒದಗಿಸಿದೆ. ಜೇಡರ ದಾಸಿಮಯ್ಯನವರ ವಚನದಂತೆ ಹರನು ತನ್ನ ಭಕ್ತನಾದ ಸದಾಶಿವನನ್ನು ತಿರಿಯುವಂತೆ ಮಾಡಿ, ಚಿನ್ನದಂತೆ ಒರೆದು ನೋಡಿ, ಚಂದನದಂತೆ ಅರೆದು ನೋಡಿ, ಕಬ್ಬಿನ ಕೋಲಿನಂತೆ ಅರಿದು ನೋಡಿ ಬೆದರದೆ ಬೆಚ್ಚದೆ ಇದ್ದಾಗ ಕರವಿಡಿದೆತ್ತಿಕೊಂಡ ಚರಿತ್ರೆ ಇದರಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಡಾ. ನಾಗಲೋಟಿಮಠ ಅವರು ತಮ್ಮ ತಂದೆಯ ಸಾವಿನ ನಂತರ ಅನುಭವಿಸಿದ ಬಡತನ, ಮುಂಬಯಿಯಲ್ಲಾದ ಕಹಿಅನುಭವ ಮುಂತಾದ ಘಟನೆಗಳು ಮನ ಕಲಕುವಂತಿವೆ. ಕೃತಿಯ ಮೊದಲ ಭಾಗ ಓದುವಾಗ ಬರುವ ಓದುಗನ ಕಣ್ಣೀರು ಕೊನೆಯ ಭಾಗದಲ್ಲಿ ಸಾರ್ಥಕತೆಯ ಆನಂದಭಾಷ್ಪವಾಗಿ ಪರಿವರ್ತನೆಯಾಗುತ್ತದೆ.

---

* ಲೇ: ಜಯವಂತ ಕಾಡದೇವರು, ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ, ಪ್ರ.ಮು. ೨೦೦೭, ಪು. ೧೨೦, ಬೆಲೆ: ರೂ. ೨೦/-

ಪ್ರಸ್ತುತ ಜಾಗತೀಕರಣ ಸಂದರ್ಭದ ಮಾರುಕಟ್ಟೆ ಸಂಸ್ಕೃತಿಯ ದಾಳಿಗೆ ಸಿಕ್ಕು ದೇಸಿ ಸಂಸ್ಕೃತಿ ನಶಿಸಿಹೋಗುತ್ತಿದೆ ಎಂಬ ಕೂಗು ಎಲ್ಲೆಡೆ ಕೇಳಿಬರುತ್ತಿದೆ. ಆದರೆ ಈ ಸಂದರ್ಭದಲ್ಲಿ ವೈದ್ಯ ಮತ್ತು ವಿಜ್ಞಾನಿಯಾಗಿದ್ದ ಡಾ. ನಾಗಲೋಟಿಮಠ ಅವರು ಕೊನೆಯುಸಿರು ಇರುವವರೆಗೂ ದೇಸಿ ಮೌಲ್ಯಗಳನ್ನು ಮತ್ತು ದೇಸಿ ಸಂಸ್ಕೃತಿಯನ್ನು ಪಾಲಿಸಿಕೊಂಡು ಬಂದ ಅವರ ಜೀವನ ಇದಕ್ಕೆ ಉತ್ತರವಾಗಬಲ್ಲುದು.

ತಮ್ಮ ನೇರ, ಸ್ಪಷ್ಟ ಮತ್ತು ಸರಳ ಶೈಲಿಯೊಂದಿಗೆ ನಿರಂತರತೆಗೆ ಕುಂದುಬರದಂತೆ ಡಾ. ನಾಗಲೋಟಿಮಠ ಅವರ ಜೀವನದ ಘಟನೆಗಳನ್ನು ಸಮರ್ಪಕವಾಗಿ ಸಂಯೋಜಿಸಿರುವ ಲೇಖಕರಾದ ಶ್ರೀ ಜಯವಂತ ಕಾಡದೇವರ ಅವರು ಕಥಾಹಂದರವನ್ನು ಸಮರ್ಪಕವಾಗಿ ಹೆಣೆದಿದ್ದಾರೆ. ಕೃತಿಯು ಸಾದ್ಯಂತವಾಗಿ ಓದುಗರ ಗಮನ ಹಿಡಿದಿಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

* * *



ಬೀಜದೊಳಗಣ ವೃಕ್ಷ*

'ಅನು ಒಲಿದಂತೆ' ಎಂಬ ತಮ್ಮ ವಚನ ಸಂಕಲನದ ಮೂಲಕ ಸಾಹಿತ್ಯಲೋಕಕ್ಕೆ ಪರಿಚಿತರಾಗಿರುವ ಡಾ. ಬಸವರಾಜ ಮೋದಿಯವರ ಎರಡನೆಯ ಕೃತಿ 'ಬೀಜದೊಳಗಣ ವೃಕ್ಷ'. ಇದು ಅಸಾಂಪ್ರದಾಯಿಕ ದೃಷ್ಟಿಕೋನದಿಂದ ವಚನಕಾರರ ಮತ್ತು ವಚನ ಸಾಹಿತ್ಯದ ಬಗ್ಗೆ ವಿವಿಧ ತಂತ್ರ(Technique)ಗಳ ಮೂಲಕ ಬರೆದ ಲೇಖನ ಸಂಗ್ರಹ. ಇಲ್ಲಿ ಮನೋವಿಜ್ಞಾನ, ಮನೋವಿಶ್ಲೇಷಣೆ, ವೈಚಾರಿಕತೆ, ಸಮಕಾಲೀನತೆ, ಆರೋಗ್ಯ ವಿಜ್ಞಾನ, ತಾತ್ವಿಕತೆ ಎಲ್ಲವೂ ಇವೆ.


"ಲಿಂಗಾಯತರು ಹಿಂದೂಗಳೇ?" ಮತ್ತು "ಗಂಡಭೇರುಂಡ ಪಕ್ಷಿ ವೀರಶೈವ ಲಿಂಗಾಯತ ಧರ್ಮ" ಲೇಖನಗಳು ಸಮಕಾಲೀನ ವೀರಶೈವ ಸಮಾಜದ ಅಸ್ಮಿತೆಯ ಹುಡುಕಾಟ ಮತ್ತು ಅದನ್ನು ದೊರಕಿಸುವಿಕೆಯತ್ತ ಒಳನೋಟಗಳನ್ನು ಬೀರಿವೆ. 'ಬಸವಣ್ಣನನ್ನು ಬಿಡದ ಬಡತನ', 'ದೇವರ ಹಂಗೇಕೆ' ಮತ್ತು 'ದೇವರು ನಿಜವಾಗಿ ಇರುವುದೆಲ್ಲಿ?' ಲೇಖನಗಳು ವೈಚಾರಿಕ ವಿಶ್ಲೇಷಣೆ ಮತ್ತು ಹೊಸತನದಿಂದ ಕೂಡಿವೆ. ವಚನಕಾರರು ದೇವರನ್ನು ಕಂಡದ್ದೆಲ್ಲಿ ಎಂಬುದನ್ನು ಮಾರ್ಮಿಕವಾಗಿ ತಿಳಿಸಲಾಗಿದೆ.

---

* ಲೇ: ಡಾ. ಬಸವರಾಜ ವೀ. ಮೋದಿ, ಪ್ರ: ವಚನೋತ್ಸವ ಪ್ರತಿಷ್ಠಾನ, ಕಲಬುರ್ಗಿ, ಪ್ರ.ಮು. ೨೦೦೭, ಪು. xiv+೧೮೪, ಬೆಲೆ: ರೂ. ೧೦೦/-

"ಆಕಳ ಕಳ್ಳರು ವಚನದ ಬಗ್ಗೆ" ಅನಿಮಿಷಯೋಗಿ, ಬಸವಣ್ಣನವರ ಕಾಲದ ಕುರಿತ ಚರ್ಚೆಗಳು ಅವುಗಳ ಬಗ್ಗೆ ಇರುವ ಪ್ರಸ್ತುತ ಮಾಹಿತಿಗಳ ಮತ್ತು ಅವುಗಳಿಂದ ರೂಪಿಸಲ್ಪಟ್ಟ ನಿರ್ಣಯಗಳ ಮೇಲೆ ಹೊಸ ಬೆಳಕು ಚೆಲ್ಲಿವೆ ಮತ್ತು ಹೊಸ ಸಾಧ್ಯತೆಗಳ ಅನ್ವೇಷಣೆ ನಡೆಸಿವೆ. "ಬಸವಣ್ಣನ ಕೊನೆಯ ದಿನಗಳ 'ವೇದನೆ'ಗಳು", "ಬಸವಣ್ಣನ ಕುರಿತ ಸಂತಾಪದ ವಚನಗಳು" ಉತ್ತಮ ಮನೋವಿಶ್ಲೇಷಣಾತ್ಮಕ ಅಂಶಗಳಿಂದ ಕೂಡಿವೆ. 'ವಚನ ಚಳುವಳಿ : ಸಾಧ್ಯತೆಯ ಅನ್ವೇಷಣೆ'ಯಲ್ಲಿ ಚಳುವಳಿಯೆಂದರೇನು ಎಂಬುದನ್ನು ಸಮಗ್ರವಾಗಿ ವಿಶ್ಲೇಷಿಸಲಾಗಿದ್ದು, ಆಧುನಿಕ ವಚನ ಸಾಹಿತ್ಯದ ಹೊಸ ಸಾಧ್ಯತೆಗಳು ಮತ್ತು ಸವಾಲುಗನ್ನು ವಿವರಿಸುತ್ತದೆ. ಒಟ್ಟಿನಲ್ಲಿ ಈ ಕೃತಿಯು ಕೆಲವೊಂದು ಅನಗತ್ಯ ಇಂಗ್ಲಿಷ್ ಪದಗಳ ಬಳಕೆ (ಆಳು-Slave ಪು.೩೬, ಆಘಾತ-Shock ಪು.೬೪) ಮತ್ತು ಇಂಗ್ಲೀಷ್ ಪದಗಳ ತಪ್ಪು ಬಳಕೆಯನ್ನು (ಉದಾ. ತೌಲನಿಕ ಅಧ್ಯಯನವನ್ನು Critical appraisal ಎಂದೂ (ಪು.೩೫) ಪ್ರಕ್ರಿಯೆಯನ್ನು activity, ಪು.೯೪) ಬಿಟ್ಟರೆ ತನ್ನ ಹೊಸತನದಿಂದ ಮತ್ತು ಸರಳ, ಸ್ಪಷ್ಟ ಶೈಲಿಯಿಂದ ವಿಶಿಷ್ಟವಾಗಿ ಮೂಡಿಬಂದಿದೆ.

* * *



ಕಪಿಲಸಿದ್ಧನ ಒಲುಮೆ*

'ದೇವನ ಮನೆಯಿದು ಈ ಜಗವೆಲ್ಲ; ಬಾಡಿಗೆದಾರರು ಜೀವಿಗಳೆಲ್ಲ' ಎಂಬ ತಮ್ಮ ಕವನದೊಂದಿಗೆ ಸಾಹಿತ್ಯಲೋಕಕ್ಕೆ ಚಿರಪರಿಚಿತರಾದ ಆಧುನಿಕ ವಚನಕಾರರಲ್ಲಿ ಪ್ರಮುಖರಾದ ಶ್ರೀ ಬ.ಗಿ. ಯಲ್ಲಟ್ಟಿಯವರು 'ಕಪಿಲಸಿದ್ಧನ ಒಲುಮೆ' ಎಂಬ ಸಿದ್ಧರಾಮೇಶ್ವರರ ವಚನಗಳ ವ್ಯಾಖ್ಯಾನ ಬರೆದಿದ್ದಾರೆ. ವಚನಗಳನ್ನು ಷಟ್‌ಸ್ಥಲಕ್ಕೆ ಅನುಗುಣವಾಗಿ ವಿಂಗಡಿಸಿ ಅವುಗಳಿಗೆ ವಿವರವಾದ, ಸ್ವಾನುಭಾವದಿಂದ ಕೂಡಿದ ವ್ಯಾಖ್ಯಾನ ಬರೆದಿದ್ದಾರೆ. ಇದೂ ಒಂದು 'ಮಿನಿ' ಶೂನ್ಯಸಂಪಾದನೆ. ಬೇಂದ್ರೆ, ಗೋಕಾಕ್, ಮಧುರಚೆನ್ನರ ಆತ್ಮೀಯರಾಗಿದ್ದ ಬ.ಗಿ. ಯಲ್ಲಟ್ಟಿಯವರ ಕವನ, ವಚನಗಳಲ್ಲಿ ಅನುಭಾವದ ಹೊಳಹುಗಳನ್ನು ಕಾಣಬಹುದು. ಇಲ್ಲಿಯೂ ಸಹ ಸಿದ್ಧರಾಮೇಶ್ವರರ ವಚನಗಳ ಗೂಢಾರ್ಥಗಳನ್ನು ಬಿಡಿಸಿ ಅರ್ಥಸ್ಪಷ್ಟತೆಯನ್ನು ನೀಡಿದ್ದಾರೆ.

---

* ಲೇ: ಬ.ಗಿ. ಯಲ್ಲಟ್ಟಿ, ಪ್ರ: ವಾತ್ಸಲ್ಯ ಪ್ರಕಾಶನ, ಬನಹಟ್ಟಿ-೫೮೭೩೧೧, ಪ್ರ.ಮು. ೨೦೦೩, ಪು. vi+೯೪, ಬೆಲೆ: ರೂ. ೬೦/-



ಕವಿ : ಕವಿಶೈಲ*

ಮಹಾಕವಿಯನ್ನು ರೂಪಿಸಿದ ಕವಿಶೈಲ ಒಂದೇ ವಾರದಲ್ಲಿ ಇನ್ನೊಬ್ಬ ಕವಿಯಿಂದ ಕವನ ಸಂಕಲನ ಬರೆಸಿದ ಉದಾಹರಣೆ ಪ್ರಸ್ತುತ ಕವನ ಸಂಕಲನ. ಬಯಲು ಸೀಮೆಯ ಕವಿ ಮಲೆನಾಡಿನ ನಿಸರ್ಗ ಸೌಂದರ್ಯವನ್ನು ಕಂಡು ಭಾವತೀವ್ರತೆಗೆ ಒಳಗಾದಾಗ ಹೊರಹೊಮ್ಮಿದ ಭಾವನೆಗಳೇ ಈ ಕವಿತೆಗಳು. ಕುಪ್ಪಳಿಯ ಪರಿಸರದಲ್ಲಿರುವ 'ಆ ಅಂಟಾರ್ಕ್ಟಿಕಾದ ಹೆಪ್ಪುಗಟ್ಟುವ ಮೌನ', 'ತಾಯಿ ತುಂಗೆ ತುಸು ತಂಗಿ ದಣಿವಾರಿಸಿ ಕೊಳ್ಳುವ' ದೃಶ್ಯ, 'ಮೋಡಗಳ ಬಣ್ಣದೋಕುಳಿ' ಮುಂತಾದವುಗಳು ಕಾವ್ಯರಚನೆಯ ಮುಖ್ಯ ಪ್ರೇರಣೆ. ಇಂಥ ನಿಸರ್ಗ ಸ್ವರ್ಗದಲ್ಲಿ ತಮ್ಮ 'ಗೆಳತಿ'ಯನ್ನು ಬಹುವಾಗಿ 'ಮಿಸ್' ಮಾಡಿಕೊಳ್ಳುವ ಕವಿಯ ತುಡಿತ ಸಹಜವೇ ಆಗಿದೆ. ಕವಿಯ ಕಲ್ಪನೆಗಳು ಮತ್ತು ಕಾವ್ಯದ ರೂಪಕಗಳು ಸೃಜನಶೀಲ ಮನಸ್ಸಿನಿಂದ ಮೂಡಿದವುಗಳಾಗಿವೆ. ಕವನಗಳಲ್ಲಿಯ ಸಹಜ ಭಾವಲಹರಿ ಮತ್ತು ಸ್ಪಷ್ಟತೆಯಿಂದಾಗಿ ಓದುಗ ಪ್ರಿಯ ಸ್ವರೂಪ ಪಡೆದಿವೆ. 'ಕವಿಶೈಲದ ಸಂಜೆ'ಯು 'ಬಡವರ ಹೊಂಗನಸುಗಳಂತೆ ಮನೋಹರ' ವಾಗಿರುವುದು ಓದುಗರಿಗೆ ಬಡವರ ಕಷ್ಟಗಳನ್ನು ಮತ್ತು ಕನಸುಗಳನ್ನು ಕಂಡು ಮರುಗಬೇಕೊ ಅಥವಾ ಆ ಸಂಜೆಯು ಅಷ್ಟೊಂದು ಸುಂದರವಾಗಿತ್ತೇ ಎಂದು ಉದ್ಗರಿಸಬೇಕೋ ಎಂಬ ಇಬ್ಬಂದಿತನವನ್ನು ಉಂಟುಮಾಡುತ್ತದೆ. ಹೀಗೆ ಕವನಗಳು ಅಲ್ಲಲ್ಲಿ ಮಾರ್ಮಿಕವಾಗಿಯೂ ಮಿಕ್ಕೆಡೆಗಳಲ್ಲಿ ರೊಮ್ಯಾಂಟಿಕ್ ಆಗಿಯೂ ಕಂಗೊಳಿಸುತ್ತವೆ. ■

---

* ಲೇ: ಡಾ. ಅಶೋಕ ನರೋಡೆ, ಪ್ರ: ಅಪೂರ್ವ ಪ್ರಕಾಶನ, ಮಹಾಲಿಂಗಪುರ-೫೮೭೩೧೨, ಬಾಗಲಕೋಟೆ ಜಿಲ್ಲೆ, ಪ್ರ.ಮು. ೨೦೦೮, ಪು. ೧೧೪, ಬೆಲೆ: ರೂ. ೬೦/-

ಎಲ್ಲರಂತಲ್ಲ ಬಸವಣ್ಣ*

■ ರಾಮಸ್ವಾಮಿ ನುಲಿ
ಬಸವ ಕೇಂದ್ರ, ರಾಯಚೂರು

ಎಲ್ಲರಂತಲ್ಲ ಬಸವಣ್ಣ ನೀನು
ಯಾರಂತೆ ನೀನು? ಹೇಳು ಬಸವ.
ನಿನ್ನ ಬಣ್ಣಿಸುತ್ತಿಲ್ಲ, ಬರಿದೇ ಕರೆಯುತ್ತಿಲ್ಲ
ನಿನ್ನ ನಂಬಿ ಸ್ಮರಿಸುವುದೇ ಪರಮಸುಖ ನಮಗೆ;
ನಿನ್ನ ಬಳಿವಿಡಿದವರು ಶರಣರಾದರು ತಂದೆ.
ನಿತ್ಯ ಸದಾಸ್ಮರಣೀಯರವರು.
ದ್ವಿತೀಯ ಶಂಭೋ!! ಬಸವನೇ ಶಿವನು.
ಶಿವನೇ ಬಸವನೆಂದು ಹಾಡಿ ನಲಿದಾಡಿದರು
ಇನ್ನಾರೊಂದಿಗೆ ಹೋಲಿಸಲಿ ನಿನ್ನ
ಯಾರು ನಿನ್ನಂತೆ? ನೀನು ಯಾರಂತೆ?
ನಿತ್ಯ ನಿರಂಜನ ಪರಮಸತ್ಯನು ನೀನು
ದಿನವೂ ತೌಲನಿಕ ಗೋಷ್ಠಿ ನಡೆಯುತ್ತಲಿಹವು
ಶರಣರು ಹೇಳಿದ ಮಾತು ಕೇಳು ಬಸವ
ಆದಿಲಿಂಗ ಅನಾದಿ ಬಸವಣ್ಣ
ಆದಿಗುರು ಅನಾದಿ ಶಿಷ್ಯ ಬಸವಣ್ಣ
ವಿಶ್ವಕ್ಕೆಲ್ಲ ಗುರು ಕಾಣಾ ಎಂದರಲ್ಲ
ದೇವನಾಗಲುಬಹುದು ಬಸವನಾಗಲಾರೆ
ಬಸವ ಸಾನಿಧ್ಯದಿ ಸದ್ಭಕ್ತನಾದೆ
ನಾನೆಂತು ಹೇಳಲಿ? ಯಾರಂತೆ ನೀನೆಂದು?

---

* ಬಸವ ಸಮಿತಿ, ಬೈಲಹೊಂಗಲದಲ್ಲಿ ಏರ್ಪಡಿಸಿದ್ದ ಕವನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕವಿತೆ.

ಅಪ್ಪ ಮಾದಾರ ಚನ್ನ, ಬೊಪ್ಪ ಡೋಹರ ಕಕ್ಕ
ಎಂದಪ್ಪಿಕೊಂಡ ನಿಜಭಕ್ತನ ತೋರು?
ಬುದ್ಧ ಮಹವೀರ ತತ್ವ
ಗಾಂಧಿ ಅಂಬೇಡ್ಕರ ಸತ್ವ ನಿನ್ನೊಳಿಹುದು
ವೇದವೇದೋತ್ತಮಸಾರ
ದಾಸ ದಾಸೋತ್ತಮರ ಕೀರ್ತನೆ
ದ್ವೈತಾದ್ವೈತ ವಿಶಿಷ್ಟಾದ್ವೈತ
ಶಕ್ತಿವಿಶಿಷ್ಟಾದ್ವೈತಗಳ ಬೆಳಕು
ನಿನ್ನ ವಚನಾಮೃತದಿ ತೇಲುತಿಹವು
ನಿನ್ನ ನೋಡುವ ಕಣ್ಣು ಬೇಕಷ್ಟೆ ನಮಗೆ.
ನಿನ್ನ ವಚನಾಮೃತ ಸವಿವ ಮನವು ಬೇಕೆಮಗೆ.
ಅಂತ್ಯವಿಲ್ಲದ ಮಹಾಬೆಳಗು ಬಸವಣ್ಣ
ನಿನ್ನ ಬೆಳಗಿನ ಜ್ಯೋತಿ ಶರಣರೆಲ್ಲರು
ಬುದ್ಧನೆನ್ನಲೆ ಮಹಾಧ್ಯಾನಕ್ಕೆ ಒಳಗಾದ
ಜಿನನೆನ್ನಲೆ ಇಂದ್ರಿಯಗಳ ವಿಜಯಕ್ಕೆ ಒಳಗಾದ
ಶಂಕರನೆನ್ನಲೆ ಅಹಂಬ್ರಹ್ಮಾಸ್ಮಿಗೆ ಒಳಗಾದ
ದಾಸನೆನ್ನಲೆ ಕೀರ್ತನೆಗೆ ಒಳಗಾದ
ರಾಮನೆನ್ನಲೆ ಮಾತಿಗೆ ಒಳಗಾದ
ಕೃಷ್ಣನೆನ್ನಲೆ ಮಾಯೆಗೆ ಒಳಗಾದ
ಬಾಬನೆನ್ನಲೇ ಹೋರಾಟಕ್ಕೆ ಒಳಗಾದ
ಅವರಂತೆ ಇವರಂತೆ ಯಾರಂತೆ ನೀನಿಲ್ಲ.
ಎಲ್ಲರಂತರಂಗದ ಜ್ಯೋತಿಗೆ ತೈಲ ಬಸವಣ್ಣ.

■

ಬಸವಪಥ ಚಂದಾದಾರರಲ್ಲಿ ಸೂಚನೆ

ಬಸವಪಥ ಮಾಸ ಪತ್ರಿಕೆಯ ಸಂಬಂಧ ಪತ್ರ ವ್ಯವಹಾರ ಮಾಡುವಾಗ ತಪ್ಪದೆ ತಮ್ಮ ಚಂದಾ ಸಂಖ್ಯೆ ಮೂಲಕ ವ್ಯವಹರಿಸಬೇಕಾಗಿ ವಿನಂತಿ. ನಿಮಗೆ ಕಳುಹಿಸುವ ಅಂಚೆ ಲಕೋಟೆಯಲ್ಲಿ ಇದು ನಮೂದಾಗಿರುತ್ತದೆ. ಹಾಗೂ ನಿಮ್ಮ ವಿಳಾಸದ ಪಿನ್‌ಕೋಡನ್ನು ಕೂಡ ತಪ್ಪದೆ ಬರೆಯಬೇಕಾಗಿ ವಿನಂತಿ. ನಿಮ್ಮ ವಿಳಾಸಗಳು ಬದಲಾದರೆ ತಕ್ಷಣವೇ ತಿಳಿಸಿದರೆ, ಬದಲಾದ ವಿಳಾಸಕ್ಕೆ ಪತ್ರಿಕೆ ಕಳಿಸುವ ವ್ಯವಸ್ಥೆ ಮಾಡಲಾಗುವುದು. ಪತ್ರಿಕೆ ತಮಗೆ ತಲುಪದಿದ್ದರೆ ದಯವಿಟ್ಟು ಕೂಡಲೇ ಪತ್ರವನ್ನು ಬರೆಯಿರಿ, ಕೂಡಲೇ ಪತ್ರಿಕೆಯನ್ನು ಕಳುಹಿಸಲಾಗುವುದು.

ಸಂಪರ್ಕಿಸಿ: **ಪ್ರಧಾನ ಕಾರ್ಯದರ್ಶಿಗಳು**, ಬಸವ ಸಮಿತಿ, ಬಸವ ಭವನ, ಬಸವೇಶ್ವರ ರಸ್ತೆ, ಬೆಂಗಳೂರು-೫೬೦೦೦೧.

ಶ್ರೀ ಗುರುಮಲ್ಲೇಶ ಸುಪ್ರಭಾತ*

-ಜಿ.ವಿ. ಲಿಂಗಣ್ಣ

ಏಳು ಗುರುಮಲ್ಲೇಶ। ಏಳು ಸುರಪುರವಾಸ।
ಏಳು ಎಲಯ್ಯ ನೀ ಬೆಳಗಾಯಿತು। ಏಳು ಗುರುಮಲ್ಲೇಶ ಬೆಳಗಾಯಿತು ॥೧॥

ಮೂಡಿರುವ ರವಿ ತನ್ನ। ನೀಡಿ ಬೆಳಕನು ನಿನ್ನ।
ಅಡಿಗಳನು ಬೆಳಗಿಹನು। ಏಳು ಗುರುಮಲ್ಲೇಶ ಬೆಳಗಾಯಿತು ॥೨॥

ಶರಣಶರಣೆಯರೆಲ್ಲಾ। ದರುಶನಕೆ ಬಂದಿಹರು।
ಹರುಷದಲಿ ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ॥೩॥

ಕನ್ನಡದ ಕಸ್ತೂರಿ। ರನ್ನನಾ ತುತ್ತೂರಿ।
ಮುನ್ನ ಕರೆಯುತಿದೆ ನೀ ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ॥೪॥

ಭಿಕ್ಷೇಶ ಬಂದಿಹನು। ರಕ್ಷೆಯಾ ಬಯಸಿಹನು।
ಮೋಕ್ಷ ನೀಡಲು ಏಳು ಏಳಯ್ಯಾ। ಏಳು ಗುರುಮಲ್ಲೇಶ ಬೆಳಗಾಯಿತು ॥೫॥

ಸಾಧು ಸಂತರು ಬಂದು। ವೇದನಿಪುಣರು ನಿಂದು।
ಮೋದದೀ ಕರೆಯುವರು ನೀನೇಳು। ಏಳು ಗುರುಮಲ್ಲೇಶ ಬೆಳಗಾಯಿತು ॥೬॥

ಹೊತ್ತು ಮೂಡುವ ಮುನ್ನ। ಇತ್ತು ಕಾಯಕವನ್ನ।
ನಿತ್ಯ ಹರಸಲು ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ॥೭॥

ಕಾಯಕದ ಕೈಲಾಸ। ನಾಯಕನು ನೀನಯ್ಯ।
ಹಾಯಾಗಿ ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ॥೮॥

ಧರ್ಮದಬ್ಬರದಲ್ಲಿ। ಕರ್ಮದಾ ಪಥದಲ್ಲಿ।
ಮರ್ಮ ಸೋತಿಹುದಿಂದು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ॥೯॥

ಮೇಲು ಕೀಳೆಂಬುದನು। ಮೈಮರೆತು ಬಂದಿಹರು।
ಲೀಲೆಯಿಂದಲಿ ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ॥೧೦॥

ಭಕ್ತರಿಗೆ ಸುರಧೇನು। ಶಕ್ತರಿಗೆ ಸಿಹಿಜೇನು।
ವೈರಾಗ್ಯನಿಧಿ ನೀನು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ॥೧೧॥

---

* ಕೃಪೆ: ನಿರಂಜನ, ಶ್ರೀ ಗುರುಮಲ್ಲೇಶ್ವರರ ಸಂಸ್ಮರಣ ಶತಮಾನೋತ್ಸವ ಸಮಿತಿ, ದೇವನೂರು ಮಠ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ಹರಪೂಜೆ ಗುರುಸೇವೆ। ಭರದಿಂದ ನಡೆಯುತಿದೆ।
ಕರುಣದಿಂದಲಿ ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೨||

ಪತಿತಪಾವನರೆಲ್ಲ। ಸತತವೂ ಬರುತಿಹರು।
ಸುತರ ಪಾಲಿಸೆ ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೩||

ಅಕ್ಕನಾ ಶೀಲವನು। ಅಣ್ಣನಾ ಭಕ್ತಿಯನು।
ಕಣ್ಣಿಂದ ನೋಡೆ ನೀನೇಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೪||

ಓಂಕಾರ ಪ್ರಣವವದು। ಝೇಂಕರಿಸಿ ಮೊರೆಯುತಿದೆ।
ಶಂಕರಪ್ರಿಯ ನೀನು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೫||

ಸತಿಸುತರು ಒಡನಾಡಿ। ಹಿತಕಾಗಿ ಬಂದಿಹರು।
ಮತಿ ಕೊಡಲು ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೬||

ಬಿಜ್ಜ ಮಹದೇವಮ್ಮ। ಸಜ್ಜಾಗಿ ನಿಂದಿಹಳು।
ಮಜ್ಜನಕೆ ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೭||

ಗದ್ದುಗೆಯ ಘಂಟೆಗಳು। ಸದ್ದಾಗಿ ಮೊಳಗುತಿವೆ।
ಮುದ್ದು ಗುರುಮಲ್ಲೇಶ ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೮||

ಕಬ್ಬು ಬಾಳೆಯಕಂದು। ಹಬ್ಬಮಾಡುವರಿಂದು।
ಶುಭವಿಭವ ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೧೯||

ಜಂಗಮಕೆ ಮಂಗಳವ। ಸಂಘದೊ ಮಾಡುವರು।
ಮಂಗಳಾಂಗನೆ ಏಳು ಏಳಯ್ಯ। ಏಳು ಗುರುಮಲ್ಲೇಶ ಬೆಳಗಾಯಿತು ||೨೦||

ಲಿಂಗದಾಲಿಂಗವದು। ಸಂಘವನು ಬಯಸುತಿದೆ।
ಜಂಗಮಾಕಾರ ನೀನೇಳಯ್ಯಾ। ಏಳು ಗುರುಮಲ್ಲೇಶ ಬೆಳಗಾಯಿತು ||೨೧||

ಬಸವೇಶ್ವರ ನಾಣ್ಯ

ಬಸವ ಸಮಿತಿಯ ಅವಿರತ ಪರಿಶ್ರಮದ ಫಲವಾಗಿ ಭಾರತದ ರಿಸರ್ವ್ ಬ್ಯಾಂಕ್ ಹೊರತಂದಿರುವ ಮಹಾತ್ಮ ಶ್ರೀ ಬಸವೇಶ್ವರರ ಸ್ಮರಣಾರ್ಥ ೫ ರೂಪಾಯಿಯ ನಾಣ್ಯವು ಈಗ ಎಲ್ಲಾ ಬ್ಯಾಂಕ್‌ಗಳಲ್ಲಿ ಉಪಲಭ್ಯವಿದೆ. ಈ ನಾಣ್ಯಗಳನ್ನು ತಾವು ಕೊಂಡು ಚಾಲ್ತಿಗೆ ತರುವುದರ ಮೂಲಕ ಜನರ ಮಾನಸದಲ್ಲಿ ಮಹಾತ್ಮ ಬಸವೇಶ್ವರರ ದಿವ್ಯ ಸಂದೇಶಗಳು ಪಸರಿಸುವಂತೆ ಸಹಕರಿಸಬೇಕಾಗಿ ವಿನಂತಿ. ಒಂದು ಪಕ್ಷ ಬ್ಯಾಂಕ್‌ಗಳಲ್ಲಿ ಇಲ್ಲದಿದ್ದರೆ ತಾವು ತಿಳಿಸಿ, ತರಿಸಿ, ಕೊಂಡು ಬಳಸಬೇಕಾಗಿ ವಿನಂತಿ.

ಬಸವ ದಿನಚರಿ-2009
ಪ್ಯಾಕೆಟ್ ಕ್ಯಾಲೆಂಡರ್-2009

ಬಸವ ಸಮಿತಿಯು ಕಳೆದ ಹಲವಾರು ವರ್ಷಗಳಿಂದ ಬಸವ ದಿನಚರಿಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪ್ರಕಟಿಸುತ್ತಾ ಬರುತ್ತಿದೆ. ಈ ವರ್ಷವು ಬಸವ ದಿನಚರಿ-2009ನ್ನು ಹಾಗೂ ಪ್ಯಾಕೆಟ್ ಕ್ಯಾಲೆಂಡರನ್ನು ಪ್ರಕಟಿಸಿದೆ. ಬಸವಾದಿ ಶರಣರ ಜೀವನ ಹಾಗೂ ಸಂದೇಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಸುಂದರವಾಗಿ, ಉತ್ತಮವಾದ ಕಾಗದವನ್ನು ಬಳಸಿ, ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಪ್ರಕಟಿಸಿದೆ.

ಬಸವ ಸಮಿತಿಯ ಸಂಶೋಧನೆ ಮತ್ತು ಪ್ರಕಟಣಾ ವಿಭಾಗದ ನಿರ್ದೇಶಕರಾದ ಪ್ರೊ. ಟಿ.ಆರ್. ಮಹದೇವಯ್ಯ ಅವರ ಕಣ್ಣಳಿಕೆಯಲ್ಲಿ ಸಿದ್ಧಗೊಂಡು ಹೊರಬಂದಿದೆ. ಇದೀಗ ಬಿಡುಗಡೆಗೊಂಡಿದ್ದು ಬಸವ ಸಮಿತಿಯಲ್ಲಿ ಮಾರಾಟಕ್ಕೆ ಉಪಲಬ್ಧವಿವೆ. ಪ್ರತಿ ಪುಟದಲ್ಲೂ ಬಸವಾದಿ ಶರಣರ ವಚನಗಳನ್ನು ಮುದ್ರಿಸಿರುವುದಲ್ಲದೆ ಬಸವಾದಿ ಶರಣರ ಜಯಂತಿಯನ್ನು, ಸರ್ಕಾರಿ ರಜಾದಿನಗಳನ್ನು ಒಳಗೊಂಡಿದೆ. ಆಸಕ್ತರು ತಾವು ಖರೀದಿ ಮಾಡುವುದಲ್ಲದೆ ತಮ್ಮ ಬಂಧು-ಮಿತ್ರರಿಗೆ ನೀಡಬೇಕಾಗಿ ಕೋರಿಕೆ. ನೂರಕ್ಕೂ ಹೆಚ್ಚು ಪ್ರತಿಗಳನ್ನು ಖರೀದಿ ಮಾಡುವವರ ವಿವರಗಳನ್ನು ಒಂದು ಪುಟದಲ್ಲಿ ಉಚಿತವಾಗಿ ಮುದ್ರಿಸಿಕೊಡಲಾಗುವುದು.

ಸಂಪರ್ಕಿಸಿ : **ಆಡಳಿತಾಧಿಕಾರಿ**, ಬಸವ ಸಮಿತಿ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು-560001. ದೂ. 080-22259400, 22355953.

ಶ್ರದ್ಧಾಂಜಲಿ



ಶ್ರೀಮತಿ ಸುಶೀಲಾದೇವಿ ನೀಲಕಂಠಪ್ಪನವರು ದಿನಾಂಕ ೧೩.೧೦.೨೦೦೮ ರಂದು ಕೊಪ್ಪಳದಲ್ಲಿ ಲಿಂಗೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಶ್ರೀಮತಿ ಸುಶೀಲಾದೇವಿ ಮತ್ತು ಶ್ರೀ ನೀಲಕಂಠಪ್ಪ ದಂಪತಿಗಳು ಈ ಮೊದಲು ಬಸವ ಸಮಿತಿಯ ವಸತಿ ಶಾಲೆ ಹಾಗೂ ಕಾರ್ಯನಿರತ ಮಹಿಳೆಯರ ವಸತಿ ನಿಲಯದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದರು.

ಬಸವಾದಿ ಶರಣರ ಬಗೆಗೆ ಅಪಾರವಾದ ಗೌರವವನ್ನು ಹೊಂದಿದ್ದ ಇವರು ಶರಣರ ಮಾರ್ಗದಲ್ಲಿ ಸಾಗುತ್ತಿದ್ದರು. ಶ್ರೀಮತಿ ಸುಶೀಲಾದೇವಿ ಅವರು ಪತಿಯಾದ ಶ್ರೀ ನೀಲಕಂಠಪ್ಪನವರನ್ನು ಅಗಲಿದ್ದಾರೆ. ಅವರ ಬಂಧುಗಳಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಹಾಗೂ ಅವರ ಆತ್ಮಕ್ಕೆ ಶಾಂತಿಯನ್ನು ಬಸವಾದಿ ಶರಣರು ಅನುಗ್ರಹಿಸಲೆಂದು ಬಸವ ಸಮಿತಿಯು ಪ್ರಾರ್ಥಿಸಿ ತನ್ನ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತದೆ.

-ಬಸವ ಸಮಿತಿ

೨೦೦೯ನೇ ವರ್ಷದ ಬಸವಾದಿ ಶರಣರ ಜಯಂತಿ-ಸ್ಮರಣೋತ್ಸವಗಳು

ಜನವರಿ	೧೧	ರವಿವಾರ	ಬನದ ಹುಣ್ಣಿವೆ	ಮೇದಾರ ಕೇತಯ್ಯ
ಜನವರಿ	೧೪	ಬುಧವಾರ	ಸಂಕ್ರಮಣ	ಸಿದ್ಧರಾಮೇಶ್ವರ
ಜನವರಿ	೨೬	ಸೋಮವಾರ	ಅವರಾತ್ರಿ ಅಮಾವಾಸ್ಯೆ	ಜೇಡರ ದಾಸಿಮಯ್ಯ
ಫೆಬ್ರವರಿ	೯	ಸೋಮವಾರ	ಭಾರತ ಹುಣ್ಣಿವೆ	ಕಿನ್ನರಿ ಬೊಮ್ಮಯ್ಯ
ಫೆಬ್ರವರಿ	೨೩	ಸೋಮವಾರ	ಮಹಾಶಿವರಾತ್ರಿ	ಡೋಹರ ಕಕ್ಕಯ್ಯ
ಮಾರ್ಚ್	೧೧	ಬುಧವಾರ	ಹೋಳಿಹುಣ್ಣಿವೆ	ಬಿಬ್ಬಿಬಾಚಯ್ಯ
ಮಾರ್ಚ್	೨೭	ಶುಕ್ರವಾರ	ಯುಗಾದಿ ಪಾಡ್ಯ	ಅಲ್ಲಮಪ್ರಭು
ಏಪ್ರಿಲ್	೯	ಗುರುವಾರ	ದವನದ ಹುಣ್ಣಿವೆ	ಅಕ್ಕಮಹಾದೇವಿ
ಏಪ್ರಿಲ್	೨೭	ಸೋಮವಾರ	ಅಕ್ಷಯ ತೃತೀಯ	ಬಸವಣ್ಣನವರು
ಮೇ	೨೪	ರವಿವಾರ	ಬಾದಾಮಿ ಅಮಾವಾಸ್ಯೆ	ಕುರುಬ ಗೊಲ್ಲಾಳ
ಜೂನ್	೭	ರವಿವಾರ	ಕಾರಹುಣ್ಣಿವೆ	ಅಂಬಿಗರ ಚೌಡಯ್ಯ
ಜುಲೈ	೭	ಮಂಗಳವಾರ	ಕಡ್ಲಿಗಡುಬ ಹುಣ್ಣಿವೆ	ಹಡಪದ ಅಪ್ಪಣ್ಣ
ಜುಲೈ	೨೬	ರವಿವಾರ	ನಾಗರಪಂಚಮಿ	ಅಕ್ಕನಾಗಮ್ಮ
ಆಗಸ್ಟ್	೬	ಗುರುವಾರ	ನೂಲಹುಣ್ಣಿವೆ	ನುಲಿಯ ಚಂದಯ್ಯ
ಆಗಸ್ಟ್	೨೩	ರವಿವಾರ	ಗಣೇಶ ಚೌತಿ	ಮಡಿವಾಳ ಮಾಚಿದೇವ
ಸೆಪ್ಟೆಂಬರ್	೨೭	ರವಿವಾರ	ಮಹಾನವಮಿ	ಹರಳಯ್ಯ-ಮಧುವಯ್ಯ
ಸೆಪ್ಟೆಂಬರ್	೨೮	ಸೋಮವಾರ	ವಿಜಯದಶಮಿ	ಕಲ್ಯಾಣಕ್ರಾಂತಿ ವಿಜಯ
ಅಕ್ಟೋಬರ್	೪	ರವಿವಾರ	ಶೀಗಿ ಹುಣ್ಣಿವೆ	ಗಂಗಾಂಬಿಕೆ
ಅಕ್ಟೋಬರ್	೧೯	ಸೋಮವಾರ	ದೀಪಾವಳಿ ಪಾಡ್ಯ	ಚೆನ್ನಬಸವಣ್ಣ
ನವೆಂಬರ್	೨	ಸೋಮವಾರ	ಗೌರಿ ಹುಣ್ಣಿವೆ	ನೀಲಾಂಬಿಕೆ
ಡಿಸೆಂಬರ್	೨	ಬುಧವಾರ	ಹೊಸ್ತಿಲ ಹುಣ್ಣಿವೆ	ಮಾದಾರ ಚೆನ್ನಯ್ಯ
ಡಿಸೆಂಬರ್	೧೬	ಬುಧವಾರ	ಎಳ್ಳ ಅಮಾವಾಸ್ಯೆ	ಒಕ್ಕಲಿಗ ಮುದ್ದಣ್ಣ
ಡಿಸೆಂಬರ್	೩೧	ಗುರುವಾರ	ಬನದ ಹುಣ್ಣಿವೆ	ಮೇದಾರ ಕೇತಯ್ಯ

ವಿಶೇಷ ಸ್ಮರಣೋತ್ಸವಗಳು

ಫೆಬ್ರವರಿ	೧೮	ಬುಧವಾರ	ಶರಣ ಹರ್ಡೇಕರ ಮಂಜಪ್ಪನವರ ಜಯಂತಿ
ಜೂನ್	೭	ಭಾನುವಾರ	ಡಾ. ಬಿ.ಡಿ. ಜತ್ತಿ ಅವರ ಸ್ಮರಣೋತ್ಸವ
ಜುಲೈ	೨	ಗುರುವಾರ	ಶರಣ ಫ.ಗು. ಹಳಕಟ್ಟಿಯವರ ಜಯಂತಿ
ಸೆಪ್ಟೆಂಬರ್	೧೦	ಗುರುವಾರ	ಡಾ. ಬಿ.ಡಿ. ಜತ್ತಿಯವರ ಜಯಂತಿ
ಅಕ್ಟೋಬರ್	೨೮	ಬುಧವಾರ	ಶರಣ ಉತ್ತಂಗಿ ಚೆನ್ನಪ್ಪನವರ ಜಯಂತಿ

ಸಂಗ್ರಹ

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ರಾಮದುರ್ಗ-೫೯೧೧೨೩, ಜಿ|| ಬೆಳಗಾವಿ

ಶರಣಾಕ್ಷರ ಬಂಧ-೧೩



ಈ ಭಾವಚಿತ್ರಕ್ಕೆ ಮುಂದಿನ ಪುಟದ ಪದಬಂಧದಿಂದ ಆಯ್ದು ಸೂಕ್ತ ಶೀರ್ಷಿಕೆ ಕೊಡಿ.

ಶರಣ ಬಂಧುಗಳೆ,

ಮುಂದಿನ ಪುಟದಲ್ಲಿ ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೊಡಲಾಗಿರುವ ಕೆಲವು ಶಬ್ದಗಳಲ್ಲಿ ಅಕ್ಷರಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ಪದರಚನೆ ಮಾಡಿ, ಆಯಾ ಪದದ ಮುಂದೆ ಕೊಟ್ಟಿರುವ ಚೌಕಾಕೃತಿಯಲ್ಲಿ ಬರೆಯಿರಿ. ಚೌಕಾಕೃತಿಯಲ್ಲಿನ ವೃತ್ತಗಳೊಳಗಿನ ◯ ಅಕ್ಷರಗಳನ್ನು ಮಾತ್ರ ಸೇರಿಸಿ ಮೇಲಿನ ಭಾವಚಿತ್ರಕ್ಕೆ ಹೊಂದಿಕೊಳ್ಳುವ ಸೂಕ್ತ ಶೀರ್ಷಿಕೆಯನ್ನು ಮೇಲೆ ಕೊಟ್ಟಿರುವ ಚೌಕಾಕೃತಿಯಲ್ಲಿ ಬರೆಯಿರಿ.

೧. ರುಶಎರುವದ್ರಕಾ

೨. ಣೆದ್ಧಷರೋಕ್ಷಡರ

೩. ಬಯೆಂಸ್ಯೆಸತೆರಮಣೆ

೪. ಗಗುಲಿಂಶ್ವಹೇರ

೫. ನವಿಭಿಜ್ಞಾಲ್ಲನ್ನದ

೬. ಲೆಕಂರಲೀಳಕಾಧ

೭. ಲ್ಲೇಶಾಂರಮತಶ್ವ

ಶರಣಾಕ್ಷರ ಬಂಧ ಸ್ಪರ್ಧೆ

'ಶರಣಾಕ್ಷರ ಬಂಧ'ವನ್ನು ಪೂರ್ಣವಾಗಿ ತುಂಬಿ ಭಾವಚಿತ್ರದ ಕೆಳಗೆ ಕೊಟ್ಟಿರುವ ಶೀರ್ಷಿಕೆಯನ್ನು ಭರ್ತಿ ಮಾಡಿ ನಮಗೆ **ಡಿಸೆಂಬರ್ ೧೫ ರೊಳಗೆ ಕಳುಹಿಸಿಕೊಡಿ.** ಬಹುಮಾನಿತರಿಗೆ ಸೂಕ್ತವಾದ ಬಹುಮಾನವನ್ನು ಕೊಡಲಾಗುವುದು. ಶರಣಾಕ್ಷರ ಬಂಧ-೧೩ರ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರ ಕಳುಹಿಸಿದ ಪ್ರತಿಯೊಬ್ಬರ ಹೆಸರನ್ನು ಪ್ರಕಟಿಸಲಾಗುವುದು. **ಉತ್ತರಗಳನ್ನು ಪೋಸ್ಟ್ ಕಾರ್ಡಿನಲ್ಲಿ ಮಾತ್ರ ಕಳುಹಿಸಿಕೊಡಿ.** ಬಹುಮಾನಿತರನ್ನು ಆಯ್ಕೆ ಮಾಡಲು ಪೋಸ್ಟ್ ಕಾರ್ಡ್ ಅನುಕೂಲವಾದ್ದರಿಂದ ಪೋಸ್ಟ್ ಕಾರ್ಡಿನಲ್ಲೇ ಕಳುಹಿಸಿಕೊಡಿ. ನಿಮ್ಮ ಹೆಸರು, ವಿಳಾಸ ಅವಶ್ಯ. ವಿಳಾಸ: **ಸಂಪಾದಕರು, ಬಸವಪಥ, ಶರಣಾಕ್ಷರ ಬಂಧ ವಿಭಾಗ, ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು-೫೬೦೦೦೧.**

-ಡಾ. ಸಿ.ಕೆ. ಜಗದೀಶ್

ಶರಣಾಕ್ಷರ ಬಂಧ-೧೨ ರ ಸರಿ ಉತ್ತರ

೧. ಕಾಯಕವೇಕೈಲಾಸ
೨. ಸಿಂಧುಬಲ್ಲಾಳ
೩. ಅಸಮಾಕ್ಷಲಿಂಗ
೪. ಮೂಕೊರತಿಯಸಂಗ
೫. ಮಿಶ್ರವೀರಶೈವ
೬. ಪರಿಣಾಮಜಲ
೭. ಮಧ್ಯಸಿಂಹಾಸನ
೮. ರುದ್ರಾಕ್ಷಿಧಾರಣಸ್ಥಾನ

ಶೀರ್ಷಿಕೆ: ಬಸವ ಸಮಿತಿಯ ಸಂಸ್ಥಾಪಕ ಅಧ್ಯಕ್ಷರು

ಬಹುಮಾನ ವಿಜೇತರು: ಶ್ರೀಮತಿ ಅಮೃತ ಮಾನಕರ ಬಂಕೂರ, ಶಹಾಬಾದ, ಗುಲಬರ್ಗಾ ಜಿಲ್ಲೆ.

ಆಯ್ಕೆ ಮಾಡಿದವರು: ಡಾ. ಸುನೀತ ಅಮೃತೇಶ್, ಕೆ.ಎಲ್.ಇ. ವಂತ ಮಹಾವಿದ್ಯಾಲಯ, ಬೆಂಗಳೂರು.

ಸರಿ ಉತ್ತರ ಕಳುಹಿಸಿದವರು: ಶ್ರೀಮತಿ ಸುಮಾ ಸುನಿಲ್ ಎಚ್.ಎಂ., ಭದ್ರಾವತಿ; ಪ.ಮ. ಗುರುಲಿಂಗಯ್ಯ, ನಾಯಕನಹಟ್ಟಿ; ಶ್ರೀಮತಿ ಶಿವದೇವಿ ರಾ. ಕರಡಿಗುದ್ದಿ, ಬೆಳಗಾವಿ; ಶ್ರೀಮತಿ ಶ್ರೀದೇವಿ ಬಿ.ಕೆ., ಬೆಳಗಾವಿ; ಶ್ರೀಮತಿ ಎಚ್.ಬಿ. ತೀರ್ಥ, ಶಹಾಬಾದ; ಗುರುಪ್ರಸಾದ ಸೂಗಪ್ಪ, ಖಾನಾಪುರ; ಬಿ.ಎಸ್. ಸೊಲ್ಲಾಪುರೆ, ಕಮಲನಗರ; ಶ್ರೀಮತಿ ಸುನಿತಾ ಮೂರಶಿಳ್ಳಿ, ಧಾರವಾಡ; ಮಲ್ಲನಗೌಡ ಪೋಲೀಸ ಪಾಟೀಲ, ಅಸ್ಕಿಹಾಳ; ಶ್ರೀಮತಿ ರೇಣುಕಾ ಮಿ. ಕರೇಗೌಡ್ರ, ಗದಗ; ಚನ್ನಮ್ಮ ಬಿ. ಸೊಲ್ಲಾಪುರೆ, ಕಮಲನಗರ; ಶ್ರೀಮತಿ ನಾಗರತ್ನ ಪಾಟೀಲ್, ಮಾನ್ವಿ; ಶ್ರೀಮತಿ ಶೋಭಾ ರು. ಛಬ್ಬಿ, ಬೈಲಹೊಂಗಲ; ಶ್ರೀಮತಿ ಸುನಿತಾ ಆರ್. ಪಾಟೀಲ್, ಧಾರವಾಡ; ಬಿ.ಯು. ಶಿವಬಸಪ್ಪ, ಸಾಗರ; ಶ್ರೀಮತಿ ಶಿವಲೀಲಾ ಪಾಟೀಲ್, ಗೋಕಾಕ; ಜಗದೀಶ ಶ್ರೀಶೈಲಪ್ಪ ಅವಂಟಿ, ನೋಯಿಡಾ, ನವದೆಹಲಿ; ಶ್ರೀಮತಿ ಲೀಲಾವತಿ ಎಸ್. ಮಾಗಾವಿ, ಹಾವೇರಿ; ಎ. ಷಡಕ್ಷರಪ್ಪ, ನಾಯಕನಹಟ್ಟಿ; ಆರ್.ಎಸ್. ಚಾಪಗಾವಿ, ಬೆಳಗಾವಿ; ಪ್ರೊ. ಎಸ್.ಎಂ. ಸಾಬೋಜಿ, ರಾಣೆಬೆನ್ನೂರು; ಶ್ರೀಮತಿ ಶಕುಂತಲ ಮ. ಪಟ್ಟಣಶೆಟ್ಟರ, ಹಾವೇರಿ; ಶ್ರೀಮತಿ ರಾಜೇಶ್ವರಿ ಚಾಪಗಾವಿ, ಬೆಳಗಾವಿ; ಶಿವಶಾಲಿ ಕೊಡದಯ್ಯ, ಕೊಟ್ಟೂರು; ಬಸವರಾಜ ವಿ. ಬೋಳಗಂಡಿ, ಗಬ್ಬೂರು; ಬಿ.ಆರ್. ಪಾಟೀಲ, ಧಾರವಾಡ; ಶ್ರೀಮತಿ ಶೈಲಾ ದೊಡ್ಡೇಗೌಡ, ಹಟ್ಟಿ; ಶ್ರೀಮತಿ ಸಿ. ಸ್ವರ್ಣಲತಾ ಚನ್ನಬಸವಾರಾಧ್ಯ, ಬೆಂಗಳೂರು; ಶ್ರೀಮತಿ ಜೆ. ಸರ್ವಮಂಗಳ, ಬೆಂಗಳೂರು; ಶ್ರೀಮತಿ ವಿಜಯರಾಜು, ಭದ್ರಾವತಿ; ಶ್ರೀಮತಿ ಎಚ್.ವಿ. ಸುಶೀಲಾ, ಬೆಂಗಳೂರು; ಓಮಕಾರ ಮ. ಅವಂಟಿ, ಶಹಾಬಾದ; ಶ್ರೀಮತಿ ಅಂಬಿಕಾ. ಎಸ್.ಎ., ಬೆಂಗಳೂರು; ಡಾ. ಸ್ನೇಹ ಭೂಸನೂರ, ಹುಬ್ಬಳ್ಳಿ; ಶ್ರೀಮತಿ ಮೀನಾಕ್ಷಿ ಮನಗುಂಡಿ, ಧಾರವಾಡ; ಶ್ರೀಮತಿ ಶಾಂತಾ ಬಿ. ಶಿವಳ್ಳಿ, ಧಾರವಾಡ. ■

ತಪ್ಪು-ಒಪ್ಪು: ಶರಣಾಕ್ಷರ ಬಂಧ-೧೨ರ ೩ನೇ ಬಂಧದಲ್ಲಿ ಶೀರ್ಷಿಕೆಗೆ ಆಯ್ಕೆ ಮಾಡಿಕೊಳ್ಳುವ ಒಂದು ಚೌಕಾಕೃತಿ ತಪ್ಪಿ ಹೋಗಿರುತ್ತದೆ. ಇದಕ್ಕಾಗಿ ವಿಷಾದಿಸುತ್ತೇವೆ. ೩ರ ಎಲ್ಲ ಉತ್ತರಗಳನ್ನು ಸರಿಯೆಂದು ಪರಿಗಣಿಸಿ ಆಯ್ಕೆ ಮಾಡಲಾಗಿದೆ.

ಬಸವ ತತ್ವ ಮುಖ್ಯವಾದರೆ
ಅದನ್ನು ಅರ್ಥಮಾಡಿಕೊಳ್ಳುವುದು ಕೂಡ ಅಷ್ಟೇ ಮುಖ್ಯ



ಅಟೆಕ್ಸ್ ಪತ್ರ ಹಿಂಬದಿಯಲ್ಲಿದೆ

ಬಸವ ಪಥ

ಶ್ರೀ ಬಸವೇಶ್ವರರು ಹಾಗೂ ಇತರ ಶರಣರ ಜೀವನ ಹಾಗೂ
ಸಂದೇಶಗಳ ಪ್ರಸಾರಕ್ಕಾಗಿ ಮೀಸಲಾದ ಮಾಸಪತ್ರಿಕೆ

ಇಂದೇ
ಚಂದಾದಾರರಾಗಿರಿ

ಶರಣ ಸಂಸ್ಕೃತಿಯಲ್ಲಿ ಬದುಕಿ, ಶರಣ ಸಂಸ್ಕೃತಿಯನ್ನು ಉಳಿಸೋಣ,
ಬೆಳೆಸೋಣ, ರಕ್ಷಿಸೋಣ.

ಅಟೆಕ್ಸ್ ಪತ್ರ ಹಿಂಬದಿಯಲ್ಲಿದೆ

ಬಸವ ಸಮಿತಿ

ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು-560001

ಅಪೇಕ್ಷಾ ಪತ್ರ

ಬಸವ ಸಮಿತಿ

ಶ್ರೀ ಬಸವೇಶ್ವರರು ಹಾಗೂ ಇತರ ಶರಣರ ಜೀವನ ಹಾಗೂ
ಸಂದೇಶಗಳ ಪ್ರಸಾರಕ್ಕಾಗಿ ಮೀಸಲಾದ ಮಾಸಪತ್ರಿಕೆ

ಚಂದಾವಿವರ

- ☐ ವಾರ್ಷಿಕ ಚಂದಾ : **ರೂ. 150/-**
- ☐ ಪಂಚವಾರ್ಷಿಕ ಚಂದಾ : **ರೂ. 650/-**
- ☐ 20 ವರ್ಷದ ಚಂದಾ : **ರೂ. 1500/-**

ದಯವಿಟ್ಟು ಬರೆಯಿರಿ:

ಹೆಸರು..

ವಿಳಾಸ..

....

....ಅಂಚೆ ಸಂಖ್ಯೆ....................

ಹಣ ಸಂದಾಯದ ರೀತಿ : ಬಸವ ಸಮಿತಿ - ಇವರ ಹೆಸರಿನಲ್ಲಿ ಡಿ.ಡಿ. / ಎಂ.ಓ. / ನಗದು

ದಿನಾಂಕ: ಸಹಿ/-

ಬಸವ ಸಮಿತಿ, ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು-೫೬೦ ೦೦೧

ಅಪೇಕ್ಷಾ ಪತ್ರ

ಬಸವ ಸಮಿತಿ

ಶ್ರೀ ಬಸವೇಶ್ವರರು ಹಾಗೂ ಇತರ ಶರಣರ ಜೀವನ ಹಾಗೂ
ಸಂದೇಶಗಳ ಪ್ರಸಾರಕ್ಕಾಗಿ ಮೀಸಲಾದ ಮಾಸಪತ್ರಿಕೆ

ಚಂದಾವಿವರ

- ☐ ವಾರ್ಷಿಕ ಚಂದಾ : **ರೂ. 150/-**
- ☐ ಪಂಚವಾರ್ಷಿಕ ಚಂದಾ : **ರೂ. 650/-**
- ☐ 20 ವರ್ಷದ ಚಂದಾ : **ರೂ. 1500/-**

ದಯವಿಟ್ಟು ಬರೆಯಿರಿ:

ಹೆಸರು..

ವಿಳಾಸ..

....

....ಅಂಚೆ ಸಂಖ್ಯೆ....................

ಹಣ ಸಂದಾಯದ ರೀತಿ : ಬಸವ ಸಮಿತಿ - ಇವರ ಹೆಸರಿನಲ್ಲಿ ಡಿ.ಡಿ. / ಎಂ.ಓ. / ನಗದು

ದಿನಾಂಕ: ಸಹಿ/-

ಬಸವ ಸಮಿತಿ, ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು-೫೬೦ ೦೦೧



ಮೈಸೂರಿನ ಮಹಾರಾಜರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು
ಕಾಯಕ ಮಾಡಿ ಗಳಿಸಿದ ನಾಲ್ಕಾಣೆಯನ್ನು ಸ್ವೀಕರಿಸಿ, ಕಾಯಕದ ಮಹತ್ವವನ್ನು
ಬೋಧಿಸಿದ ಶ್ರೀ ಗುರುಮಲ್ಲೇಶ್ವರರು

BASAVA PATHA, DECEMBER - 2008
Registered with Registrar of News Paper in India No. KARKAN/2007/21943
Postal Regd. No. KA/BG/GPO-2514/WPP-69, 2006-08,
Posted at G.P.O. Bangalore, contain pages : 84



ಬಸವ ಸಮಿತಿ
ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು - 560 00 1.

ಈ ಸಂಚಿಕೆಯು ಚರಮೂರ್ತಿ ಪೂಜ್ಯ ಶಿವರುದ್ರ ಮಹಾಸ್ವಾಮೀಜಿಗಳವರಿಂದ ಸಂಪಾದಿತವಾಗಿ, ಪ್ರೊ. ಬಿ. ವಿರೂಪಾಕ್ಷಪ್ಪ ಅವರಿಂದ
ಪ್ರಕಟಿತವಾಗಿ, ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು-560001 ಇಲ್ಲಿ ಮುದ್ರಿತವಾಗಿದೆ.